07 October 2026 Wednesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸಂಬಂಧಗಳು ಕಳಚಿ ಹೋದರೆ ಮತ್ತೆ ಜೋಡಿಸಿದರೂ ಕೂಡ ತೇಪೆ ಕಾಣಿಸಿಯೇ ಕಾಣಿಸುತ್ತದೆ!

-ಸ್ನೇಹಾ ಆನಂದ್


ಬರ ಹಿನ್ನಲೆ ದಸರೆಯಲ್ಲಿ ಕಂಬಳ ಬೇಡ: ಖಾಲಿ ಕೊಡ ಹಿಡಿದು ಆಗ್ರಹ — ಪುಟ ಸಂ. 2


ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನ — ಪುಟ ಸಂ. 3


ಬರ ಅಧ್ಯಯನ: 68 ಸಾವಿರ ಹೆಕ್ಟೇರ್ ತೆರೆದಿಟ್ಟ ರೈತರು — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 289 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# 2 ದಶಕಗಳಲ್ಲೇ ಕುಗ್ಗಿದ ವರ್ಷಧಾರೆ

## ಕೇಂದ್ರ ಬರ ಅಧ್ಯಯನ ತಂಡದ ಅಧಿಕಾರಿಗಳಿಗೆ ಡಿಸಿ ಡಾ.ಕುಮಾರ್ ಮಾಹಿತಿ

**ಮಂಡ್ಯ:** ಜಿಲ್ಲೆಯ ಬರ ಪರಿಸ್ಥಿತಿ ಬಗ್ಗೆ ಕೇಂದ್ರ ಬರ ಅಧ್ಯಯನ ತಂಡ ಮಂಗಳವಾರ ಅಧಿಕಾರಿಗಳಿಂದ ಮಾಹಿತಿ ಪಡೆಯಿತು.

ಜಿಲ್ಲೆಯಲ್ಲಿ ಮಳೆ ಕೊರತೆ, ಕೃಷಿ ಚಟುವಟಿಕೆ ಮೇಲಿನ ಪರಿಣಾಮ, ಕುಡಿಯುವ ನೀರಿನ ಲಭ್ಯತೆ ಹಾಗೂ ಜಲಾಶಯಗಳ ನೀರಿನ ಸಂಗ್ರಹದ ಕುರಿತು ಕೇಂದ್ರದ ಅಧಿಕಾರಿಗಳಾದ ಸುಧಾಮ್ ಬೇಗ್, ಆಶಿಶ್ ಪಾಂಡೆ, ಪ್ರದೀಪ್ ಕುಮಾರ್ ಹಾಗೂ ಕರಣ್ ಚೌಧರಿ ಅವರನ್ನೊಳಗೊಂಡ ಕೇಂದ್ರ ತಂಡ ಕೆ.ಆರ್.ಎಸ್‌ನ ಕಾವೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿತು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಮಳೆಯ ಪ್ರಮಾಣದಲ್ಲಿ ಗಣನೀಯ ಕೊರತೆಯಾಗಿದೆ. ಈವರೆಗೆ 173 ಮಿ.ಮೀ. ಮಳೆಯಾಗಿದೆ. ಸಾಮಾನ್ಯ ಮಳೆ ಪ್ರಮಾಣಕ್ಕೆ ಹೋಲಿಸಿದರೆ ಶೇ.44ರಷ್ಟು ಕೊರತೆಯಾಗಿದೆ ಎಂದು ತಿಳಿಸಿದರು.

ನೈರುತ್ಯ ಮುಂಗಾರು ಅವಧಿಯಲ್ಲಿ ಸಾಮಾನ್ಯವಾಗಿ ಸುಮಾರು 360 ಮಿ.ಮೀ. ಮಳೆಯಾಗಬೇಕಿದ್ದು, ಈವರೆಗೆ 173 ಮಿ.ಮೀ. ಮಳೆಯಾಗಿದೆ. ಮುಂಗಾರು ಪೂರ್ವ ಅವಧಿಯಾದ ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿಯೂ ಸಾಮಾನ್ಯ ಪ್ರಮಾಣಕ್ಕಿಂತ ಕಡಿಮೆ ಪುಟ 2ಕ್ಕೆ



### 289 ಗ್ರಾಮಗಳಿಗೆ ನೀರಿನ ಸಮಸ್ಯೆ

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಕೆ.ಆರ್.ನಂದಿನಿ ಮಾತನಾಡಿ, ಮಳೆ ಕೊರತೆ ಹಾಗೂ ಅಂತರ್ಜಲ ಮಟ್ಟ ಗಣನೀಯವಾಗಿ ಕುಸಿದಿರುವ ಪರಿಣಾಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುವ ಸಾಧ್ಯತೆಯಿರುವ 289 ಗ್ರಾಮಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

ಮಳೆಯ ಪ್ರಮಾಣಕ್ಕೆ ಅನುಗುಣವಾಗಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳ ಸಂಖ್ಯೆ ಏರಿಳಿತವಾಗುತ್ತಿದ್ದು, ಸದ್ಯ ಸುಮಾರು 29ರಿಂದ 30 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಸತತವಾಗಿ ಉತ್ತಮ ಮಳೆಯಾದಲ್ಲಿ ಅಂತರ್ಜಲ ಮರುಪೂರಣಗೊಂಡು ಪರಿಸ್ಥಿತಿ ಸುಧಾರಿಸಲಿದೆ. ಆದರೆ, ಮಳೆ ಕೊರತೆಯಿಂದಾಗಿ ಕೊಳವೆಬಾವಿಗಳ ನೀರಿನ ಇಳುವರಿ ಗಣನೀಯವಾಗಿ ಕುಸಿದಿದೆ ಎಂದು ಹೇಳಿದರು.

### ಕುಡಿಯುವ ನೀರಿಗೆ ಆದ್ಯತೆ

ಪ್ರಸ್ತುತ ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ಸಮರ್ಪಕವಾಗಿ ನಿರ್ವಹಿಸುವುದು ಸವಾಲಾಗಿದೆ. ನೀರಿನ ಲಭ್ಯತೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ಆದ್ಯತೆ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ತಿಳಿಸಿದರು.

ಕಾವೇರಿ ಜಲಾನಯನ ಪ್ರದೇಶದಲ್ಲಿ ಸುಮಾರು 18.85 ಲಕ್ಷ ಎಕರೆ ಪ್ರದೇಶವಿದೆ. ಕೃಷಿ ಚಟುವಟಿಕೆಗಳಿಗೆ ಕಾವೇರಿ ನೀರು ಪ್ರಮುಖ ಆಧಾರವಾಗಿದೆ. ಬೆಂಗಳೂರು, ಮಂಡ್ಯ, ಮೈಸೂರು ಸೇರಿದಂತೆ ಹಲವು ಪ್ರದೇಶಗಳ ಕುಡಿಯುವ ನೀರಿನ ಯೋಜನೆಗಳಿಗೂ ಕಾವೇರಿ ಜಲಮೂಲ ಪ್ರಮುಖವಾಗಿದೆ ಎಂದು ತಿಳಿಸಿದರು.

ಮುಂದಿನ ಎಂಟು ತಿಂಗಳ ಅವಧಿಗೆ ಲಭ್ಯವಿರುವ ನೀರನ್ನು ಸಮರ್ಪಕವಾಗಿ ನಿರ್ವಹಿಸಬೇಕಾಗಿದೆ. ಮಳೆ ಕೊರತೆಯಿಂದ ಈಗಾಗಲೇ ಬೆಳೆಗಳಿಗೆ ಹಾನಿಯಾಗಿದೆ. ಉಳಿದಿರುವ ಬೆಳೆಗಳ ಮೇಲೂ ನೀರಿನ ಕೊರತೆಯ ಪರಿಣಾಮ ಬೀರುವ ಪುಟ 2ಕ್ಕೆ



# ರಾಜ್ಯಪಾಲರಿಗೆ 'ದೋಸ್ತಿ'ಗಳ ದೂರು

## ರಾಜಕೀಯ ದ್ವೇಷ: ಕಾರ್ಯಕರ್ತರ ರಕ್ಷಣೆಗೆ ನಿಯೋಗದ ಮೊರೆ

**ಬೆಂಗಳೂರು:** ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ವಿರೋಧ ಪಕ್ಷಗಳ ಕಾರ್ಯಕರ್ತರ ಮೇಲೆ ರಾಜಕೀಯ ದ್ವೇಷ ಸಾಧಿಸುತ್ತಿದೆ ಎಂದು ಆರೋಪಿಸಿ ಬಿಜೆಪಿ–ಜೆಡಿಎಸ್ ಮೈತ್ರಿಯ ಎನ್‌ಡಿಎ ನಿಯೋಗ ಮಂಗಳವಾರ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ದೂರು ಸಲ್ಲಿಸಿದೆ.

ಮತದಾರರ ಪಟ್ಟಿಗೆ ಸಂಬಂಧಿಸಿದ ಫಾರ್ಮ್–7 ವಿಚಾರದಲ್ಲಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಮೇಲೆ ಬಿಎನ್‌ಎಸ್ ಕಾಯ್ದೆಯಡಿ ಅಕ್ರಮವಾಗಿ ಎಫ್‌ಐಆರ್ ದಾಖಲಿಸಿ ಕಿರುಕುಳ ನೀಡಲಾಗುತ್ತಿದೆ. ರಾಜಕೀಯ ಪ್ರೇರಿತ ಕೇಸ್‌ಗಳಿಗೆ ತಕ್ಷಣ ತಡೆ ನೀಡಬೇಕು ಎಂದು ಮನವಿ ಮಾಡಿದರು.

ಮುಖ್ಯಮಂತ್ರಿ ಹಾಗೂ ಸಚಿವರು ಸಾಂವಿಧಾನಿಕ ಸಂಸ್ಥೆಯಾದ ಚುನಾವಣಾ ಆಯೋಗದ ಮುಂದೆ ಧರಣಿ ನಡೆಸಿದ್ದರೂ ಅವರ ವಿರುದ್ಧ ಯಾವುದೇ ಪೊಲೀಸ್ ಕ್ರಮವಾಗಿಲ್ಲ. ಸರ್ಕಾರದ ಈ ನಡೆ ಸಂಪೂರ್ಣ ಅಸಾಂವಿಧಾನಿಕ. ರಾಜ್ಯಪಾಲರು ಮಧ್ಯಪ್ರವೇಶಿಸಿ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದರು. ಪುಟ 2ಕ್ಕೆ

### ಕಾನೂನುಬಾಹಿರ ಆಡಳಿತ

ರಾಜ್ಯಪಾಲರ ಭೇಟಿಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ವಿಪಕ್ಷ ನಾಯಕ ಆರ್.ಅಶೋಕ್, ಕಾಂಗ್ರೆಸ್ ಸರ್ಕಾರ ಸಂಪೂರ್ಣ ಕಾನೂನುಬಾಹಿರವಾಗಿ ಆಡಳಿತ ನಡೆಸುತ್ತಿದೆ. ಗೂಂಡಾಗಿರಿ ಮೂಲಕ ವಿಪಕ್ಷ ಕಾರ್ಯಕರ್ತರನ್ನು ಹತ್ತಿಕ್ಕುವ ಯತ್ನ ಮಾಡುತ್ತಿದೆ. ಕೂಡಲೇ ಈ ಸರ್ಕಾರವನ್ನು ವಜಾ ಮಾಡುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ ಎಂದರು.

ಗ್ಯಾರಂಟಿ ಹೆಸರಲ್ಲಿ ಪುಟ 2ಕ್ಕೆ

# 'ವೋಟ್ ಚೋರ್, ಗದ್ದಿ ಛೋಡ್'

## ಸಿಇಸಿ ರಾಜೀನಾಮೆಗೆ ಆಗ್ರಹಿಸಿ ಬೀದಿಗಿಳಿದ ಇಂಡಿಯಾ ಕೂಟ




**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ಚುನಾವಣಾ ಆಯೋಗದ ಪ್ರಧಾನ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿ 'ಇಂಡಿಯಾ' ಒಕ್ಕೂಟದ ಪ್ರಮುಖ ಸಂಸದರನ್ನು ದೆಹಲಿ ಪೊಲೀಸರು ಮಂಗಳವಾರ ವಶಕ್ಕೆ ಪಡೆದರು.

ಚುನಾವಣಾ ಆಯೋಗದ ಕೇಂದ್ರ ಕಚೇರಿಯತ್ತ ತೆರಳುತ್ತಿದ್ದ ಇಂಡಿಯಾ ಒಕ್ಕೂಟದ ಸಂಸದರು ಮತ್ತು ನಾಯಕರನ್ನು ಸಂಸತ್ ರಸ್ತೆಯಲ್ಲಿ ಪೊಲೀಸರು ತಡೆದರು. ಬಳಿಕ ಸಂಸದರು ರಸ್ತೆಯಲ್ಲೇ ಧರಣಿ ಕುಳಿತು ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿದರು.

ಭದ್ರತಾ ಸಿಬ್ಬಂದಿ ಮೆರವಣಿಗೆಯನ್ನು ತಡೆದಾಗ ರಾಹುಲ್ ಗಾಂಧಿ ಮತ್ತು ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಪೊಲೀಸ್ ಬ್ಯಾರಿಕೇಡ್ ಮೇಲೆ ಹತ್ತಿ ಪ್ರತಿಭಟಿಸಿದರು. ಮುಂದೆ ಸಾಗಲು ಅವಕಾಶ ನೀಡದ ಹಿನ್ನೆಲೆಯಲ್ಲಿ ಅವರು ರಸ್ತೆಯಲ್ಲೇ ಕುಳಿತು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಜ್ಞಾನೇಶ್ ಕುಮಾರ್ ಅವರನ್ನು ಆರ್‌ಎಸ್‌ಎಸ್ ಸಮವಸ್ತ್ರದಲ್ಲಿ ಚಿತ್ರಿಸಿರುವ ಕಟೌಟ್‌ಗಳನ್ನು ಪ್ರದರ್ಶಿಸಿದರು. ಬಿಜೆಪಿ ಹೈ, ಸಿಇಸಿ ಹೈ, ವೋಟ್ ಚೋರ್, ಗದ್ದಿ ಛೋಡ್ ಹಾಗೂ ಪ್ರಜಾಪ್ರಭುತ್ವ ಮಾರಾಟಕ್ಕಿಲ್ಲ ಎಂಬ ಘೋಷಣೆ ಕೂಗಿದರು.

# ಕೆರೆಗೆ ಈಜಲು ಹೋದ ಮೂವರು ಬಾಲಕರು ಸಾವು

**ಚಿಕ್ಕಮಗಳೂರು:** ಕೆರೆಯಲ್ಲಿ ಈಜಲು ಹೋಗಿದ್ದ ಮೂವರು ಬಾಲಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಹೃದಯವಿದ್ರಾವಕ ಘಟನೆ ಚಿಕ್ಕಮಗಳೂರು ತಾಲೂಕಿನ ಮರ್ಲೆ ಗ್ರಾಮದಲ್ಲಿ ನಡೆದಿದೆ.

ಮೃತ ಮಕ್ಕಳೆಲ್ಲ ಒಂದೇ ಊರಿನವರು. ಎಲ್ಲಾ 12 ವರ್ಷದವರು. ಬೇರೆ ಬೇರೆ ಶಾಲೆಗಳಲ್ಲಿ 6ನೇ ತರಗತಿ ಓದುತ್ತಿದ್ದರು. ಶಾಲೆಗಳಿಗೆ ದಸರಾ ರಜೆ ಇರುವುದರಿಂದ ಮಕ್ಕಳು ಕೆರೆಯಲ್ಲಿ ಈಜಲು ತೆರಳಿದ್ದರು. ಕಳೆದ ವರ್ಷ ಕೆರೆಯಲ್ಲಿ ಹೂಳು ತೆಗೆದಿದ್ದರಿಂದ ಕೆರೆಯ ಆಳ ಹೆಚ್ಚಿತ್ತು. ಆಳದ ಅರಿವಿಲ್ಲದ ಮಕ್ಕಳು ಕೆರೆಯಲ್ಲಿ ಈಜಲು ಹೋಗಿ ಸಾವನ್ನಪ್ಪಿದ್ದಾರೆ.



# ಅರಮನೆಗೆ ಕಾಜಲ್ ಅಗರ್ವಾಲ್ ಭೇಟಿ




**ಮೈಸೂರು:** ಮೈಸೂರು ಅರಮನೆಗೆ ಬಹುಭಾಷಾ ನಟಿ ಕಾಜಲ್ ಅಗರ್ವಾಲ್ ಭೇಟಿ ನೀಡಿದ್ದರು. ಅರಮನೆಗೆ ಆಗಮಿಸಿದ ಕಾಜಲ್ ಅಗರ್ವಾಲ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಸನ್ಮಾನಿಸಲಾಯಿತು. ಈ ವೇಳೆ ಅರಮನೆಯ ಇತಿಹಾಸ ಮತ್ತು ಮಹತ್ವದ ಬಗ್ಗೆ ಅಧಿಕಾರಿಗಳು ನಟಿಗೆ ವಿವರಿಸಿದರು.

ಅರಮನೆಯ ವೈಭವವನ್ನು ಕಾಜಲ್ ಅಗರ್ವಾಲ್ ಕಣ್ತುಂಬಿಕೊಂಡರು. ನಟಿ ಅರಮನೆಗೆ ಭೇಟಿ ನೀಡಿರುವ ವಿಷಯ ತಿಳಿಯುತ್ತಿದ್ದಂತೆ ಅವರನ್ನು ನೋಡಲು ಪ್ರವಾಸಿಗರು ಮುಗಿಬಿದ್ದರು.

# ಎಸ್‌ಐಟಿ ರಚನೆಗೆ ಸಚಿವರ ಒತ್ತಾಯ

**ಬೆಂಗಳೂರು:** ರಾಜ್ಯದಲ್ಲಿ ಫಾರ್ಮ್ 7 ದುರುಪಯೋಗವಾಗುತ್ತಿದೆ. ಈ ಬಗ್ಗೆ ತನಿಖೆ ನಡೆಸಲು ಸರ್ಕಾರ ವಿಶೇಷ ತನಿಖಾ ತಂಡ ರಚನೆ ಮಾಡಬೇಕು ಎಂದು ಸಚಿವ ರಾಮಲಿಂಗಾರೆಡ್ಡಿ ಆಗ್ರಹಿಸಿದರು.

ಜಯನಗರದಲ್ಲಿ ಫಾರ್ಮ್ 7 ದುರುಪಯೋಗದ ಆರೋಪದ ಹಿನ್ನೆಲೆಯಲ್ಲಿ ಶಾಸಕರ ವಿರುದ್ಧ ಸೌಮ್ಯಾ ರೆಡ್ಡಿ ದೂರು ನೀಡಿರುವ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯಿಸಿದ ಸಚಿವರು, ಈಗಾಗಲೇ ದೂರು ದಾಖಲಾಗಿದೆ ಎಂದು ಹೇಳಿದರು.

ಸಿಎಂ ಜೊತೆ ಸೇರಿ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇವೆ. ರಾಜ್ಯದ ಹಲವು ಕಡೆ ದೂರುಗಳು ದಾಖಲಾಗುತ್ತಿವೆ. ಹೀಗಾಗಿ ಸರ್ಕಾರ ಎಸ್‌ಐಟಿ ರಚಿಸಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.



# ಬಿಜೆಪಿ ನಾಯಕರ ಕುತಂತ್ರ ರಾಜಕೀಯ

## ಚುನಾವಣೆ ಆಯೋಗ ದುರುಪಯೋಗ: ಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ

**ಬೆಂಗಳೂರು:** ಕರ್ನಾಟಕದ ಬಿಜೆಪಿ ನಾಯಕರು ಫಾರ್ಮ್ 7ರ ಮೂಲಕ ಕುತಂತ್ರ ರಾಜಕೀಯ ಮಾಡುತ್ತಿದ್ದಾರೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.



ರಾಜ್ಯಪಾಲರಿಗೆ ಬಿಜೆಪಿ ದೂರು ಸಲ್ಲಿಕೆ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ಪುಟ 2ಕ್ಕೆ



ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ಕನ್ನಡದ ಖ್ಯಾತ ಚಲನಚಿತ್ರ ನಟ, ನಿರ್ದೇಶಕ ರವಿಚಂದ್ರನ್ ರವರಿಗೆ ಮಂಡ್ಯ ಜಿಲ್ಲಾಡಳಿತ ವತಿಯಿಂದ ಅಧಿಕೃತವಾಗಿ ಆಹ್ವಾನಿಸಲಾಯಿತು. ಜಿಲ್ಲಾಧಿಕಾರಿ ಡಾ. ಕುಮಾರ ಹಾಗೂ ಶ್ರೀರಂಗಪಟ್ಟಣ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ ರವರು ಆಹ್ವಾನ ಪತ್ರಿಕೆ ಜೊತೆಗೆ ಹೂಗುಚ್ಛ, ನೆನಪಿನ ಕಾಣಿಕೆ ನೀಡಿ ಆತ್ಮೀಯವಾಗಿ ಆಹ್ವಾನಿಸಿದರು. ಅಕ್ಟೋಬರ್ 15ರಂದು ನಡೆಯುವ ಶ್ರೀರಂಗಪಟ್ಟಣ ದಸರಾ ಉದ್ಘಾಟಿಸಲು ರವಿಚಂದ್ರನ್ ಸಮ್ಮತಿಸಿದರು.

# ಹಾಲು ಬೆಲೆ ಏರಿಕೆ ಶಾಕ್




**ಬೆಂಗಳೂರು:** ರಾಜ್ಯದ ಜನರಿಗೆ ಸರ್ಕಾರ ಬಿಗ್ ಶಾಕ್ ಕೊಟ್ಟಿದೆ. ಹಾಲಿನ ದರ 8 ರೂ. ಹೆಚ್ಚಳಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇದರ ಜೊತೆಗೆ ಬಸ್ ಟಿಕೆಟ್ ದರ ಹೆಚ್ಚಳಕ್ಕೂ ಒಪ್ಪಿಗೆ ಸೂಚಿಸಲಾಗಿದೆ.

ನವೆಂಬರ್ 1ರಿಂದ ಹಾಲಿನ ದರ ಹೆಚ್ಚಳವಾಗುವ ಸಾಧ್ಯತೆ ಇದೆ. ಶೇ. 80:20ರಂತೆ ದರ ಏರಿಕೆ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಅಂದರೆ 8 ರೂ. ಏರಿಕೆಯಾದರೆ 6 ರೂ. ರೈತರಿಗೆ ಮತ್ತು 2 ರೂ. ಒಕ್ಕೂಟಗಳಿಗೆ ಸಿಗಲಿದೆ. ಸರ್ಕಾರಕ್ಕೆ 70:30 ರಂತೆ ದರ ಏರಿಕೆಗೆ ಒಕ್ಕೂಟಗಳು ಮನವಿ ಮಾಡಿದ್ದವು. ಆದರೆ, 80:20 ರಂತೆ ದರ ಏರಿಕೆ ಮಾಡಲಾಗುವುದು ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಅದರಂತೆ 8 ರೂ. ಪೈಕಿ 6 ರೂ. ರೈತರಿಗೆ ಮತ್ತು 2 ರೂ. ಪುಟ 2ಕ್ಕೆ

# ಸಾಹುಕಾರ್ ಬಂಧನ

**ಬೆಂಗಳೂರು:** ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರನ್ನು ಜಾರಿ ನಿರ್ದೇಶನಾಲಯ ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

ಕೆಪಿಎಸ್‌ಸಿ ಹಗರಣ ಸಂಬಂಧ 2ನೇ ಬಾರಿಗೆ ಶಿವಶಂಕರಪ್ಪ ಮನೆ ಮೇಲೆ ಇ.ಡಿ ದಾಳಿ ಮಾಡಿತ್ತು. ಅದರ ಬೆನ್ನಲ್ಲೇ ಅವರನ್ನು ಬಂಧಿಸಲಾಗಿದೆ.

ಅಲ್ಲದೆ, ನಗರದ ಡಾಲರ್ಸ್ ಕಾಲೋನಿಯ ಮನೆ ಮೇಲೆ ದಾಳಿ ನಡೆಸಿ, ಕೆಪಿಎಸ್‌ಸಿ ಸದಸ್ಯೆ ಗೀತಾ ಅವರನ್ನು ವಶಕ್ಕೆ ಪಡೆಯಲಾಗಿದೆ. ಅಭ್ಯರ್ಥಿಗಳ ಜೊತೆ ನೇರ ಸಂಪರ್ಕ ಹೊಂದಿದ್ದ ಆರೋಪ ಇವರ ಮೇಲಿತ್ತು.

ತಪ್ಪೊಪ್ಪಿಗೆ ಮಾಡಿಕೊಂಡಿದ್ದ ಇಬ್ಬರು ಅಭ್ಯರ್ಥಿಗಳ ಮನೆಯ ಮೇಲೂ ಇ.ಡಿ ದಾಳಿ ನಡೆಸಿದೆ. ಅವರನ್ನೂ ಬಂಧಿಸುವ ಸಾಧ್ಯತೆ ಇದೆ. ಶಿವಶಂಕರಪ್ಪ ಸಂಬಂಧಿ ಸುಗುರೇಶ್ ಜಾಕಾ ಮೇಲೆ ದಾಳಿ ನಡೆಸಲಾಗಿತ್ತು. ನೇಮಕಾತಿಯಲ್ಲಿ ಪುಟ 2ಕ್ಕೆ




# ಸ್ವಾಮೀಜಿಗಳಿಗೆ ಅಗೌರವ ತೋರಿಸಿಲ್ಲ

**ಬೆಂಗಳೂರು:** ರಾಜ್ಯದ ಮಠಗಳು, ಸ್ವಾಮೀಜಿಗಳ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಯಾವುದೇ ಸ್ವಾಮೀಜಿಗಳ ಬಗ್ಗೆ ಅಗೌರವವಾಗಿ ನಾನು ಮಾತನಾಡಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.



ವಿಧಾನಸೌಧದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಶಿವಕುಮಾರ್ ಅವರು ಪ್ರತಿಕ್ರಿಯೆ ನೀಡಿದರು. ವೀರಶೈವ ಸ್ವಾಮೀಜಿಗಳ ಕಾರ್ಯಕ್ರಮದಲ್ಲಿ ನಾನು ಯಾವ ಸ್ವಾಮೀಜಿಗಳಿಗೂ ಅಗೌರವದಿಂದ ಮಾತನಾಡಿಲ್ಲ. ಅಲ್ಲಿ ನೆರೆದಿದ್ದ ಜನರಿಗೆ ನೀವು ನಮಗೆ ರಕ್ಷಣೆ, ಸೇವೆ ಮಾಡಬೇಕು, ನಾವೂ ನಿಮಗೆ ಸಹಾಯ ಮಾಡುತ್ತೇವೆ ಎಂದು ಹೇಳಿದ್ದೆ ಎಂದರು.

ರಾಜ್ಯದ ಮಠಗಳು, ಸ್ವಾಮೀಜಿಗಳ ಬಗ್ಗೆ ಯಾರಿಗೆ ಗೌರವ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನನಗೆ ಮಾತ್ರ ಅಪಾರವಾದ ಗೌರವವಿದೆ. ನಾನೂ ಕೂಡ ದೈವಭಕ್ತ. ನನ್ನ ಧರ್ಮದ ಮೇಲೆ ನನಗೆ ನಂಬಿಕೆಯಿದೆ. ಪುಟ 2ಕ್ಕೆ

### ನನಗೆ ಮದವಿದ್ದರೆ ಇಳಿಸಲಿ

ಕ್ರೈಸ್ತರು, ಬೌದ್ಧರು, ಪರಿಶಿಷ್ಟರು, ಒಕ್ಕಲಿಗರು, ಲಿಂಗಾಯತರು, ಹಿಂದುಳಿದವರು, ಅಲ್ಪಸಂಖ್ಯಾತರೆಲ್ಲರೂ ಒಂದೇ ಎನ್ನುವ ಭಾವನೆಯಿಂದ ರಾಜಕೀಯ ಬದುಕನ್ನು ಪ್ರಾರಂಭಿಸಿದವನು ನಾನು. ಇದನ್ನು ಕೆಲವರು ತಿರುಚಿ, ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಡಿ.ಕೆ ಶಿವಕುಮಾರ್‌ಗೆ ಅಧಿಕಾರದ ಮದ ಬಂದಿದೆ ಎಂದು ಹೇಳುತ್ತಾರೆ. ನನಗೆ ಮದವಿದ್ದರೆ ಇಳಿಸಲಿ. ನಾನೇನು ಬೇಜಾರು ಮಾಡಿಕೊಳ್ಳುವುದಿಲ್ಲ ಎಂದು ಸಿಎಂ ಕಿಡಿಕಾರಿದರು.

# 'ಚಿನ್ನದ ಬೇಟೆ'ಗಾರರಿಗೆ 1 ಕೋಟಿ

## ಏಷ್ಯನ್ ಗೇಮ್ಸ್: ಬೆಳ್ಳಿ ಪದಕಕ್ಕೆ 75 ಲಕ್ಷ, ಕಂಚಿಗೆ 50 ಲಕ್ಷ ನಗದು



**ಬೆಂಗಳೂರು:** ಏಷ್ಯನ್ ಗೇಮ್ಸ್ 2026ರಲ್ಲಿ ಪದಕ ಪಡೆದು ದೇಶಕ್ಕೆ ಕೀರ್ತಿ ತಂದಿರುವ ರಾಜ್ಯದ ಕ್ರೀಡಾಪಟುಗಳನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಡಿಸಿಎಂ ಡಾ.ಜಿ.ಪರಮೇಶ್ವರ್ ವಿಧಾನಸೌಧದಲ್ಲಿ ಮಂಗಳವಾರ ಅಭಿನಂದಿಸಿದರು.

ಕರ್ನಾಟಕದ ಕ್ರೀಡಾ ಪ್ರತಿಭೆಗಳಿಗೆ ಆರ್ಥಿಕ ಪ್ರೋತ್ಸಾಹ, ಉದ್ಯೋಗ ಭದ್ರತೆ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಿಗೆ ಅಗತ್ಯ ನೆರವು ಕಲ್ಪಿಸುವ ಉದ್ದೇಶದಿಂದ ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಡಾ.ಜಿ. ಪರಮೇಶ್ವರ್ ತಿಳಿಸಿದರು.

ಏಷ್ಯನ್ ಗೇಮ್ಸ್ ಪದಕ ವಿಜೇತರಿಗೆ ನಗದು ಪುರಸ್ಕಾರದ ಮೊತ್ತವನ್ನು ಪರಿಷ್ಕರಿಸಲಾಗಿದೆ. ಈಗ ಚಿನ್ನದ ಪದಕ ವಿಜೇತರಿಗೆ 1 ಕೋಟಿ ರೂ, ಬೆಳ್ಳಿ ಪದಕ ವಿಜೇತರಿಗೆ 75 ಲಕ್ಷ ಮತ್ತು ಕಂಚಿನ ಪದಕ ಗೆದ್ದರೆ 50 ಲಕ್ಷ ರೂ. ನಗದು ಪುರಸ್ಕಾರ ನೀಡಲಾಗುವುದು. ಈ ಬಾರಿ ಎಂಟು ಮಂದಿಗೆ ಈ ನಗದು ಪುರಸ್ಕಾರ

# ನಿಮ್ಮ ಮಕ್ಕಳ ಬಗ್ಗೆ ಮೊದಲು ತಿಳಿಯಿರಿ!

## ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ಪ್ರಿಯಾಂಕ್ ಖರ್ಗೆ ತಿರುಗೇಟು

**ಬೆಂಗಳೂರು:** ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮೊದಲು ಮನೆಯಲ್ಲಿ ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ ಅಂತ ತಿಳಿದುಕೊಳ್ಳಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

ಸಿದ್ದಾರ್ಥ ಟ್ರಸ್ಟ್ ನಲ್ಲಿ ಫಾರ್ಮ್ 7 ಪ್ರಿಂಟ್ ಆಗುತ್ತಿದೆ ಎಂಬ ಕುಮಾರಸ್ವಾಮಿ ಲೇವಡಿಗೆ ಪ್ರತಿಕ್ರಿಯೆ ನೀಡಿದ ಅವರು, ಮೊದಲು ಅವರ ಮನೆ ಮಕ್ಕಳಿಗೆ ನೋಡಿಕೊಳ್ಳೋಕೆ ಹೇಳಿ. ಮನೆಯಲ್ಲಿ ಮಕ್ಕಳು ಏನು ಮಾಡುತ್ತಿದ್ದಾರೆ ಅನ್ನುವುದೇ ನಿಮಗೆ ಗೊತ್ತಿಲ್ಲ. ಸಿದ್ದಾರ್ಥ ವಿಹಾರ್ ಟ್ರಸ್ಟಲ್ಲಿ ಏನಾಗುತ್ತಿದೆ ಎಂಬುದು ಗೊತ್ತಾ ನಿಮಗೆ? ಚುನಾವಣೆ ಆಯೋಗದಲ್ಲಿ ಏನಾಗುತ್ತಿದೆ ಗೊತ್ತಾ ಎಂದು ಎಂದು ಕಿಡಿಕಾರಿದರು.

ಹಿರಿಯ ನಾಯಕರು ನೀವು. ಆರ್‌ಎಸ್‌ಎಸ್ ಹೇಳಿಕೊಟ್ಟಿರುವ ಪಾಠ ಹೇಳಿದರೆ ನಾವು ಮಾತಾಡಬೇಕಾಗುತ್ತದೆ. ನೀವು ಮರ್ಯಾದೆ ಕೊಡಿ ನಾವು ಮರ್ಯಾದೆ ಕೊಡುತ್ತೇವೆ. ಮರ್ಯಾದೆ ಬಿಟ್ಟು ಮಾತಾಡೋಕೆ ನೀವು ರೆಡಿ ಇದ್ದರೆ ನಾವೂ ರೆಡಿ ಇದ್ದೇವೆ ಎಂದು ವಾಗ್ದಾಳಿ ನಡೆಸಿದರು.

ಕುಮಾರಸ್ವಾಮಿ ಫಾರ್ಮ್ 7 ಕೊಡೋದು ಸಂವಿಧಾನ ಹಕ್ಕು ಪುಟ 2ಕ್ಕೆ



### ಬಡಿಯುವುದು ಇಲ್ಲಿ ನಡೆಯಲ್ಲ....

ಎಫ್‌ಐಆರ್ ರದ್ದು ಮಾಡದೇ ಹೋದರೆ ನಮ್ಮ ಕಾರ್ಯಕರ್ತರನ್ನು ಪೊಲೀಸ್ ಠಾಣೆಗೆ ನುಗ್ಗಿಸುತ್ತೇವೆ ಎಂಬ ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಅವರು, ಪೊಲೀಸ್ ಠಾಣೆಗೆ ನುಗ್ಗಿದರೆ ಕರ್ನಾಟಕದ ಗೃಹ ಸಚಿವರು ಏನು ಮಾಡ್ತಾರೆ ಅಂಥ ಅವರಿಗೂ ಗೊತ್ತಿದೆ. ನುಗ್ಗುತ್ತೇನೆ, ಹೊಡೆಯುತ್ತೇನೆ, ಬಡಿಯುತ್ತೇನೆ ಇವೆಲ್ಲ ಇಲ್ಲಿ ನಡೆಯಲ್ಲ. ಇದನ್ನೆಲ್ಲಾ ಉತ್ತರ ಪ್ರದೇಶದಲ್ಲಿ ಇಟ್ಟುಕೊಳ್ಳಿ. ಪುಟ 2ಕ್ಕೆ

# ಅ.14ರಿಂದ 19ರವರೆಗೆ ಯೋಗ ದಸರಾ



ಮೈಸೂರು: ಮೈಸೂರು ದಸರಾ ಮಹೋತ್ಸವ-2026 ರ ಹಿನ್ನಲೆ ಅ.14 ರಿಂದ 19 ರವರೆಗೆ 4 ದಿನಗಳ ಕಾಲ ಯೋಗ ದಸರಾ ನಡೆಯಲಿದ್ದು, ಅ.14ರಂದು ಆರೋಗ್ಯ ಸಚಿವ ಯು.ಟಿ.ಖಾದರ್ ಉದ್ಘಾಟನೆ ಮಾಡಲಿದ್ದಾರೆ ಎಂದು ಭೂ ದಾಖಲೆಗಳ ಉಪನಿರ್ದೇಶಕರು, ಯೋಗ ದಸರಾ ಉಪವಿಶೇಷಾಧಿಕಾರಿ ರಮ್ಯ ತಿಳಿಸಿದರು.

ಮಂಗಳವಾರ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಅ.14, 16, 18 ಹಾಗೂ 19 ರಂದು ನಾಲ್ಕು ದಿನಗಳ ಕಾಲ ಯೋಗ ದಸರಾ ಹಮ್ಮಿಕೊಂಡಿದ್ದು ಅಕ್ಟೋಬರ್ 14 ರಂದು ಬೆಳಗ್ಗೆ 10 ಗಂಟೆಗೆ ನಗರದ ಜೆಕೆ ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಲ್ಯೂಮಿನಿ ಸಭಾಂಗಣದಲ್ಲಿ ಆರೋಗ್ಯ ಸಚಿವರಾದ ಯು.ಟಿ ಖಾದರ್ ಅವರು ಉದ್ಘಾಟನೆ ಮಾಡುವರು. ಅಂದು ಅದೇ ವೇದಿಕೆಯಲ್ಲಿ ಒಂದು ದಿನದ ಯೋಗ ವೈಜ್ಞಾನಿಕ ವಿಚಾರ ಸಂಕಿರಣ ಆಯೋಜಿಸಲಾಗಿದೆ. ವೈಜ್ಞಾನಿಕ ವಿಚಾರ ಸಂಕಿರಣದಲ್ಲಿ ಆರೋಗ್ಯಕರ ಜೀವನ ನಡೆಸಲು ಯೋಗದ ಪಾತ್ರ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ಡಾ:ಎಂಯುಸುಜನ್, ಡಾ.ಪಿ.ಸುಧಾಕರ್, ಡಾ.ಹರೀಶ್ ಬಾಬು ಹಾಗೂ ಡಾ. ಅರುಣ್ ವಿಚಾರ ಸಂಕಿರಣ ನಡೆಸಿಕೊಡಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ರೇಣುಕಾ ದೇವಿ ಮಾತನಾಡಿ, ಅ.16 ರಂದು ರಾಜ್ಯ ಮಟ್ಟದ ದಸರಾ ಯೋಗಾಸನ ಸ್ಪರ್ಧೆಯನ್ನು ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಆಯೋಜಿಸಿದ್ದು, ಅಂದು ಬೆಳಗ್ಗೆ 10 ಗಂಟೆಗೆ ಶಾಸಕರಾದ ಟಿ.ಎ.ಸ್.ಶ್ರೀವತ್ಸ ಅವರು ಉದ್ಘಾಟನೆ ಮಾಡಲಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವ ಸ್ಪರ್ಧಿಗಳು ಆನ್ ಲೈನ್ ಮುಖಾಂತರ ರಿಜಿಸ್ಟರ್ ಮಾಡಿಕೊಳ್ಳಬಹುದು. ಪ್ರಥಮ ಬಹುಮಾನ 3000, ದ್ವಿತೀಯ ಬಹುಮಾನ 2500 ಹಾಗೂ ತೃತೀಯ ಬಹುಮಾನ 2000 ರೂ.ಗಳ ನಗದು ಬಹುಮಾನ ನೀಡಲಾಗುವುದು. ಅ.18 ರಂದು ಗ್ರಾಮೀಣ ಯೋಗ ದಸರಾ ಕಾರ್ಯಕ್ರಮವನ್ನು ನಂಜನಗೂಡು ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದು, ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ಉದ್ಘಾಟಿಸುವರು ಎಂದು ಮಾಹಿತಿ ನೀಡಿದರು.

ಯೋಗ ದಸರಾ ಉಪಸಮಿತಿ ಕಾರ್ಯಾಧ್ಯಕ್ಷೆ ನಿರೂಪ್ ವೆಸ್ಲಿ ಮಾತನಾಡಿ, ಅ.19ರಂದು ಯೋಗ ಚಾರಣ ಹಾಗೂ ದುರ್ಗಾ ನಮಸ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದ್ದು ಅಂದು ಬೆಳಗ್ಗೆ 6 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಿಂದ ಮೆಟ್ಟಿಲುಗಳ ಮೂಲಕ ದೇವಸ್ಥಾನದವರೆಗೂ ಚಾರಣ ಮಾಡುವುದು ಹಾಗೂ ಬೆಳಗ್ಗೆ 8 ಗಂಟೆಗೆ ದೇವಸ್ಥಾನದ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು ದುರ್ಗಾ ನಮಸ್ಕಾರ ಯೋಗಾಸನ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಟಿ ದೇವೇಗೌಡ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಗಣ್ಯರಾದ ಸುಶೀಲ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕರಾದ ನಿರ್ಮಲಾ ಭಾಗವಹಿಸಿದ್ದರು.

# ಮನುಷ್ಯರನ್ನು ಆವರಿಸಿಕೊಂಡ ಮೊಬೈಲ್

ಮೈಸೂರು: ಇಂದು ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ಸಹ ನಮ್ಮ ಹಸ್ತಗಳನ್ನು ಮೊಬೈಲ್ ಆವರಿಸಿಕೊಂಡಿದೆ ಎಂದು ಕನ್ನಡ ಪುಸ್ತಕ ಪ್ರಾಕಾರದ ಅಧ್ಯಕ್ಷ ಡಾ.ಮಾನಸ ವಿಷಾಧಿಸಿದರು.

ನಗರದ ಯುವರಾಜ ಕಾಲೇಜಿನ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಯುವರಾಜ ಕಾಲೇಜಿನ ಕನ್ನಡ ವಿಭಾಗದ ಮತ್ತು ಗಣಕ ವಿಜ್ಞಾನ ವಿಭಾಗದ ಸಹಯೋಗದೊಂದಿಗೆ ಮಂಗಳವಾರ ನಡೆದ ಪುಸ್ತಕ ಓದು ಸಂಸ್ಕೃತಿ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಹಸ್ತದಲ್ಲಿ ಜಾಗವಿಲ್ಲದಿದ್ದರೆನಂತೆ ಮಸ್ತದಲ್ಲಿ ಬಹಳಷ್ಟು ಜಾಗವಿದೆ. ಇದಕ್ಕಾಗಿಯೇ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮದ ಮೂಲಕ ಪುಸ್ತವನ್ನು ಓದಿಸುತ್ತೇವೆ. ಮಕ್ಕಳ ಮೆದಳು ಹಸಿ ಮಣ್ಣಿದ್ದಂತೆ ಯಾವುದೇ ಜ್ಞಾನ ಹಾಕಿದರೂ ಅದನ್ನು ಹೀರಿಕೊಂಡರೂ ಅದನ್ನು ಬಹಳ ಚೆನ್ನಾಗಿ ಗ್ರಹಿಸಿಕೊಳ್ಳುತ್ತದೆ ಎಂದುರು.

ನಮಗೆ ಪುಸ್ತಕಗಳನ್ನು ಓದುವ ಹಂಬಲ ಹೆಚ್ಚಾಗುತ್ತು. ಆದರೆ ಹಿಂದೆ ಇಷ್ಟೊಂದು ಆಧುನಿಕ ತಂತ್ರಜ್ಞಾನ ಇರಲಿಲ್ಲ. ಪುಸ್ತಕಗಳಿಗಾಗಿ ಕಾದು ಕುಳಿತುಕೊಳ್ಳುತ್ತಿದ್ದೇವು. ಪುಸ್ತಕಗಳು ಎಲ್ಲೆಲ್ಲಿ ಸಿಗುತ್ತದೆ ಎಂದು ಹುಡುಕುತ್ತಿದ್ದೇವು. ಕುವೆಂಪು ಅವರು ಒಂದು ಪುಸ್ತಕ ಬರೆದರೂ ಸಹ



ಅದು ನಮ್ಮ ಕೈ ಸೇರಲು ಒಂದು ವರ್ಷ ಬೇಕಾಗುತ್ತಿತ್ತು. ಮತ್ತೆ ಆ ಪುಸ್ತಕಗಳು ಮರು ಮುದ್ರಣ ಮಾಡಬೇಕೆಂದರೆ ಮತ್ತೆ ಒಂದು ವರ್ಷ ಬೇಕಾಗುತ್ತಿತ್ತು. ಹೀಗಾಗಿ ನಮಗೆ ಪುಸ್ತಕಗಳು ಸಿಗುವುದು ನಮಗೆ ಬಹಳ ಕಷ್ಟವಾಗುತ್ತಿತ್ತು ಎಂದು ಹೇಳಿದರು. ಹಿರಿಯ ವಿಸ್ವಾಂಸ ಪ್ರೊ.ಕೆ.ಅನಂತರಾಮು, ಯುವರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ.ಅಜಯಕುಮಾರ್, ಆಡಳಿತಾಧಿಕಾರಿ ಪ್ರೊ.ಕೆ.ಬಿ. ಉಮೇಶ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಹೆಚ್. ಎಸ್. ಜಯಂತ್, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಸಿ. ಡಿ. ಪರಶುರಾಮ,ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥೆ ಅನ್ನಪೂರ್ಣ, ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಿತಿ ಸಂಚಾಲಕ ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಸಾಹುಕಾರ್ ಬಂಧನ

ಅಕ್ರಮ ಮಾಡಲು ಸುಗುರೇಶ್ ಜಾಕಾಗೆ ಶಿವಶಂಕರಪ್ಪ ಸೂಚಿಸಿದ್ದರು. ಹೀಗಾಗಿ, ಶಿವಶಂಕರಪ್ಪಗೆ ಅಕ್ರಮದ ಬಗ್ಗೆ ಮೊದಲೇ ಗೊತ್ತಿತ್ತು ಎನ್ನಲಾಗಿದೆ.

## ರಾಜ್ಯಪಾಲರಿಗೆ 'ದೋಸ್ತಿ' ದೂರು

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿಪಕ್ಷ ನಾಯಕ ಆರ್. ಅಶೋಕ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಮುಖಂಡರಾದ ಎಸ್.ಎಲ್. ಭೋಜೇಗೌಡ, ಟಿ.ಎ. ಶರವಣ, ಶಾಸಕರಾದ ಶ್ರೀವತ್ಸ, ವಿಠಲ್ ಹಲಗೇಕರ್, ಸಂಸದ ಮಲ್ಲೇಶ್ ಬಾಬು ಹಲವು ನಾಯಕರು ನಿಯೋಗದಲ್ಲಿದ್ದರು.

## ಬಡಿಯುವುದು ಇಲ್ಲಿ ನಡೆಯಲ್ಲ....

ಇಲ್ಲಿ ಏನೇ ನಡೆದರೂ ಅಂಬೇಡ್ಕರ್ ಅವರ ಸಂವಿಧಾನ ನಡೆಯುತ್ತದೆ ಅಷ್ಟೇ ಎಂದು ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದರು.

## ನಿಮ್ಮ ಮಕ್ಕಳ ಬಗ್ಗೆ ತಿಳಿಯಿರಿ!

ಅಂತಾರೆ. ಮತದಾರರು ತಮ್ಮ ಮತ ಡಿಫೆಂಡ್ ಮಾಡಿಕೊಳ್ಳೋದು ಹಕ್ಕು ಅಲ್ಲವಾ? ಮತದಾರರಿಗೆ ಮೋಸ ಮಾಡಿದರೆ, ಪಟ್ಟಿಯಿಂದ ಹೊರಗೆ ಇಟ್ಟರೆ ನನ್ನ ಹಕ್ಕು ಅಂತ ಅವರು ದೂರು ಕೊಡಬಹುದು ಅಲ್ಲವಾ? ನಾನು ಬದುಕಿದ್ದೇನೆ ಅಂತ ದೂರು ಕೊಡೋದು ತಪ್ಪಾ ಎಂದು ಗುಡುಗಿದರು.

## 2 ದಶಕಗಳಲ್ಲೇ ಕುಗ್ಗಿದ ವರ್ಷಧಾರೆ

ಮಳೆಯಾಗಿದೆ ಎಂದರು. ಕಳೆದ 20 ವರ್ಷಗಳ ಮಳೆ ದಾಖಲೆಗಳನ್ನು ಗಮನಿಸಿದಾಗ ಪ್ರಸಕ್ತ ವರ್ಷ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಮಳೆಯಾದ ವರ್ಷಗಳಲ್ಲಿ ಒಂದಾಗಿದೆ. ಮಳೆ ಕೊರತೆಯಿಂದ ಜಿಲ್ಲೆಯ ಬಹುತೇಕ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗಳು ಹಾಗೂ ಬೆಳೆಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ ಎಂದು ಹೇಳಿದರು.

## ಸ್ವಾಮೀಜಿಗೆ ಅಗೌರವ ತೋರಿಸಿಲ್ಲ

ಮಾನವ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ನಂಬಿರುವವನು ನಾನು ಎಂದು ಹೇಳಿದರು.

# ಜ್ಞಾನೇಶ್ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

## ರಾಜ್ಯದಲ್ಲಿ ಕೋಟಿಗೂ ಹೆಚ್ಚು ಮತದಾರರ ಹಕ್ಕು ಕಸಿಯುವ ಪ್ರಯತ್ನ ಆರೋಪ

ರಾಮನಗರ: ಮತದಾರರ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್ಐಆರ್) ನೆಪದಲ್ಲಿ ರಾಜ್ಯದಲ್ಲಿ ಕೋಟಿಗೂ ಹೆಚ್ಚು ಮತದಾರರ ಹಕ್ಕು ಕಸಿಯುವ ಪ್ರಯತ್ನ ನಡೆಯುತ್ತಿದೆ. ಈ ವಿಚಾರದಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಆರೋಪಗಳಿವೆ. ಹೀಗಾಗಿ ಜ್ಞಾನೇಶ್ ಕುಮಾರ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲ ಕಾಂಗ್ರೆಸ್ ಅಧ್ಯಕ್ಷ ಸಿ.ಎನ್.ಆರ್.ವೆಂಕಟೇಶ್ ಆಗ್ರಹಿಸಿದರು.

ನಗರದ ಕೆಂಗಲ್ ವೃತ್ತದಲ್ಲಿ ಜಿಲ್ಲಾ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ಎಸ್.ಐ.ಆರ್ ಪ್ರಕ್ರಿಯೆಯ ಮೂಲಕ ಹಲವಾರು ಕೋಟಿ ಮತದಾರರ ಹಕ್ಕು ಮೊಟಕುಗೊಳಿಸುವ ಪ್ರಯತ್ನ ನಡೆಯುತ್ತಿದೆ. ಅರ್ಹ ಮತದಾರರ ಹಕ್ಕುಗಳಿಗೆ ಧಕ್ಕೆಯಾಗಬಾರದು. ಆದರೆ ಅಧಿಕಾರದ ಲ್ಲಿರುವ ಬಿಜೆಪಿ ಚುನಾವಣಾ ಆಯೋಗವನ್ನು ತಮ್ಮ ಪಕ್ಷದ ಏಜೆನ್ಸಿಯಾಗಿಸಿಕೊಂಡಿದೆ. ಪ್ರಜಾಪ್ರ ಭುತ್ವ ವ್ಯವಸ್ಥೆಯನ್ನು ಬುಡಮೇಲು ಆಗುವ ಆತಂಕವಿದೆ. ಆಯುಕ್ತ ಜ್ಞಾನೇಶ್ ಕುಮಾರ್ ಏಕಪಕ್ಷೀಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬ ಆರೋಪವೂ ಇದೆ. ಮೂರು ಜನ ಚುನಾವಣಾ ಆಯುಕ್ತರ ಪೈಕಿ ಜ್ಞಾನೇಶ್ ಕುಮಾರ್ ಅವರು ಮಾತ್ರ ಫಾರಂ 6 ತಿದ್ದುಪಡಿ ಮಾಡಿದರು. ತಿದ್ದುಪಡಿ ಮಾಡಿರುವ ವಿಷಯವಾಗಿ ನ್ಯಾಯಾಲಯ ಸಹ ಸ್ಪಷ್ಟೀಕರಣ ಕೇಳಿದೆ. ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲ ವರ್ಗದವರಿಗೆ ಮತದಾನದ ಹಕ್ಕು ಇರಬೇಕು. ಆದರೆ ರಾಜಕೀಯ ಲಾಭಕ್ಕಾಗಿ ಬಿಜೆಪಿ ತನಗೆ ಇಚ್ಚೆ ಬಂದಂತೆ ಮತಗಳ್ಳತನ ಮಾಡಿ ಜನರ ಹಕ್ಕು ಕಸಿಯುವ ಕೆಲಸ ಮಾಡುತ್ತಿದೆ ಎಂದು ಕೇಂದ್ರದ ವಿರುದ್ಧ ಹರಿಹಾಯ್ದರು.



### ಕೇಂದ್ರ ಸರ್ಕಾರದ ವಾಮ ಮಾರ್ಗ

ಪ್ರತಿಭಟನೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಕೆ. ರಾಜು ಮಾತನಾಡಿ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರಜಾಪ್ರಭುತ್ವ ವಿರೋಧಿ ಕೆಲಸ ಮಾಡುತ್ತಿದೆ. ಬಿಜೆಪಿ ಕಾರ್ಯಕರ್ತರು ಫಾರಂ 7 ಅನ್ನು ನೀಡುವ ಮೂಲಕ ಅಹಿಂದ ಮತಗಳನ್ನು ಗುರಿಯಾಗಿಸಿ ವಜಾ ಮಾಡಿಸುತ್ತಿದ್ದಾರೆ. ಕೇಂದ್ರ ಸರ್ಕಾರ ವಾಮ ಮಾರ್ಗ ಅನುಸರಿಸುತ್ತಿದೆ. ರಾಹುಲ್ ರವರು ಒಂದು ವರ್ಷ ದಿಂದ ಆರೋಪ ಮಾಡುತ್ತಲೇ ಬಂದಿದ್ದಾರೆ. ಕುಮಾರ ಸ್ವಾಮಿ, ಯಡಿಯೂರಪ್ಪ, ವಿಜಯೇಂದ್ರ ರವರು ದುರಾಡಳಿತ ಬೆಂಬಲಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು. ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟರಾಜು ಮಾತನಾಡಿದರು. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಧ್ಯಕ್ಷ ಗಾಣಕಲ್ ನಟರಾಜ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಚೇತನ್ ಕುಮಾರ್, ಕಾರ್ಮಿಕ ಘಟಕದ ರಾಜ್ಯ ಕಾರ್ಯದರ್ಶಿ ಬಸವರಾಜು, ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಎಚ್.ರಾಜು, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇ ಗೌಡ, ಸದಸ್ಯರಾದ ಅಜ್ಮತ್, ನಿಜಾಮುದ್ದೀನ್, ವಿಜಯಕುಮಾರಿ, ಆಯಿಷಾ ಬಾನು, ಪಾರ್ವತಮ್ಮ, ನಾಗಮ್ಮ, ಮುಖಂಡರಾದ ಪುಟ್ಟಣ್ಣ, ಪ್ರಮೋದ್, ಗುರುಪ್ರಸಾದ್, ಸೋಮಶೇಖರ್, ಅಶ್ವಥ್ ಜಯಲಕ್ಷ್ಮಮ್ಮ, ದೇವರಾಜು, ಆರೀಫ್ ಉಲ್ಲಾ, ಭೂಷಣ್, ಶಿವಶಂಕರ್, ಭಾಗವಹಿಸಿದ್ದರು.

### ಮೆರವಣಿಗೆ

**ಕೆಂಗಲ್ ಹನುಮಂತಯ್ಯ ವೃತ್ತದ ಬಳಿ ಪ್ರತಿಭಟನೆಗೂ ಮುನ್ನ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಜಿಲ್ಲಾ ಕಾಂಗ್ರೆಸ್ ಕಚೇರಿ ಬಳಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಐಜೂರು ವೃತ್ತದ ಮೂಲಕ ಕೆಂಗಲ್ ವೃತ್ತಕ್ಕೆ ಆಗಮಿಸಿತು. ನಂತರ ಜ್ಞಾನೇಶ್ ಕುಮಾರ್ ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.**

ಕರ್ನಾಟಕ ಸರ್ಕಾರ

**ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**

**ಚಾಮುಂಡಿಬೆಟ್ಟ, ಮೈಸೂರು-570010**

**ದೂರವಾಣಿ ಸಂಖ್ಯೆ: 0821-2590027 ಇ-ಮೇಲ್: eochamunditemple@gmail.com**

**ಪತ್ರ ಸಂಖ್ಯೆ:ಶ್ರೀಚಾಕ್ಷೇಅಪ್ರಾ(10)ಸಿಆರ್:/2026-27** **ದಿನಾಂಕ: 03.10.2026**

**ಸಾರ್ವಜನಿಕ ಟೆಂಡರ್ ಪ್ರಕಟಣೆ**

ಮೈಸೂರು ಜಿಲ್ಲೆ ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ದರಪಟ್ಟಿಯನ್ನು ಪ್ರತ್ಯೇಕ ಮುಚ್ಚಿದ ಲಕೋಟೆಯಲ್ಲಿ ಈ ಕಛೇರಿಗೆ ಅಂತಿಮ ದಿನಾಂಕದೊಳಗೆ ಸಲ್ಲಿಸುವುದು. ನಂತರ ಬಂದ ದರಪಟ್ಟಿಗಳನ್ನು ಸ್ವೀಕರಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ದೇವಾಲಯದ ಆಡಳಿತ ಕಛೇರಿಯನ್ನು ಸಂಪರ್ಕಿಸುವುದು.

| ಕ್ರ. ಸಂ. | ಟೆಂಡರ್ ವಿವರ | ಅಂದಾಜು ಮೊತ್ತ (ರೂ.ಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 2026ನೇ ಸಾಲಿನ ದಸರಾ ಉದ್ಘಾಟನಾ ದಿನ ಆಗಮಿಸುವ ವಿಶೇಷ ಆಹ್ವಾನಿತರು ಗಳಿಗೆ ನನಪಿನ ಕಾಣಿಕೆ ಖರೀದಿಸಲು ದರಪಟ್ಟಿಯನ್ನು ಕರೆಯುವ ಬಗ್ಗೆ. | 5,00,000 | 10,000 |
| 2 | 2026ನೇ ಸಾಲಿನ ದಸರಾ ಉದ್ಘಾಟನಾ ದಿನ ಆಗಮಿಸುವ ವಿಶೇಷ ಆಹ್ವಾನಿತರುಗಳಿಗೆ ಪೇಟ, ಹಾರ, ಶಾಲುಗಳಿಗೆ ದರಪಟ್ಟಿಯನ್ನು ಕರೆಯುವ ಬಗ್ಗೆ. | 5,00,000 | 10,000 |
| 3 | 2026ನೇ ಸಾಲಿನ ದಸರಾ ಉದ್ಘಾಟನಾ ದಿನ ಆಗಮಿಸುವ ವಿಶೇಷ ಆಹ್ವಾನಿತರುಗಳಿಗೆ ಉಪಹಾರ ವ್ಯವಸ್ಥೆಗಾಗಿ ದರಪಟ್ಟಿಯನ್ನು ಕರೆಯುವ ಬಗ್ಗೆ. | 5,00,000 | 10,000 |
| 4 | 2026ನೇ ಸಾಲಿನ ನವರಾತ್ರಿ ದಸರಾ, ರಥೋತ್ಸವ, ತಪ್ಪೋತ್ಸವದ ದಿನಗಳ ವರೆಗೆ ನಡೆಯುವ ಸಾಂಸ್ಕೃತಿಕ, ಕಾರ್ಯಕ್ರಮಗಳಿಗೆ ವೇದಿಕೆ ಬಳಿ ಎಲ್.ಇ.ಡಿ. ಸ್ಕ್ರೀನ್ ಅನ್ ಬಾಡಿಗೆ ಆದಾರದಲ್ಲಿ ಹಾಕಲು ದರಪಟ್ಟಿಯನ್ನು ಕರೆಯುವ ಬಗ್ಗೆ. | 5,00,000 | 10,000 |
| 5 | 2026ನೇ ಸಾಲಿನ ನವರಾತ್ರಿ, ದಸರಾ, ರಥೋತ್ಸವ, ತಪ್ಪೋತ್ಸವದ ದಿನಗಳ ವರೆಗೆ ನಡೆಯುವ ಸಾಂಸ್ಕೃತಿಕ, ಕಾರ್ಯಕ್ರಮಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಲೈವ್ ಸ್ಟ್ರೀಮಿಂಗ್ ಮಾಡಲು ದರಪಟ್ಟಿಯನ್ನು ಕರೆಯುವ ಬಗ್ಗೆ. | 5,00,000 | 10,000 |
| 6 | ವಿಜಯದಶಮಿ ದಿನ ಅಂಬಾರಿ ಮೇಲೆ ಕೂರಿಸುವ ಶ್ರೀ ಚಾಮುಂಡೇಶ್ವರಿ ವಿಗ್ರಹವನ್ನು ಚಾಮುಂಡೇಶ್ವರಿ ದೇವಸ್ಥಾನದಿಂದ ಅರಮನೆಯವರೆಗೆ ಸಂಪ್ರಾದಾಯಕವಾಗಿ ಕೊಂಡೊಯಲು ಟ್ಯಾಬ್ಲೊಗಳನ್ನು ವ್ಯವಸ್ಥೆ ಮಾಡಲು ದರಪಟ್ಟಿಯನ್ನು ಕರೆಯುವ | 5,00,000 | 10,000 |

1) ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿ: 03.10.2026 ಬೆಳಗ್ಗೆ 10.30 ಬೆಳಗ್ಗೆ 10.30 2) ಟೆಂಡರ್ ಸಲ್ಲಿಸಲು ಕೊನೆಯ ದಿ: 09.10.2026 ಸಂಜೆ 5.30 3) ಟೆಂಡರ್‌ನ್ನು ಟೆಂಡರ್‌ದಾರರ ಸಮಾಕ್ಷಮ ತೆರೆಯುವ ದಿ: 10.10.2026 ಬೆಳಗ್ಗೆ 11.30ಕ್ಕೆ

**ಟೆಂಡರ್ ಷರತ್ತುಗಳು: 1)** ಜಿ.ಎಸ್.ಟಿ. ಸೇರಿ ದರವನ್ನು ನಮೂದಿಸುವುದು. **2)** ಇಎಂಡಿ ಮೊತ್ತವನ್ನು ಚೆಕ್/ಡಿಡಿ/ನಗದು ರೂಪದಲ್ಲಿ ನೀಡಬಹುದು. **3)** ಟೆಂಡರ್‌ನ್ನು ಅಂಗೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಪ್ರಾಧಿಕಾರದ ಕಾರ್ಯದರ್ಶಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

DIPR/DDMYS/819/KSMCA/503/2026-27

ಸಹಿ/- ಕಾರ್ಯದರ್ಶಿ

## ಮೋದಿ, ಅಮಿತ್‌ಷಾ ಹುನ್ನಾರ: ಎಸ್ ಗಂಗಾಧರ್

**ಕೆಎಸ್ ಐಸಿ ಉಪಾಧ್ಯಕ್ಷ ಎಸ್.ಗಂಗಾಧರ್ ಮಾತನಾಡಿ ಎಐಸಿಸಿಯ ರಾಹುಲ್ ಗಾಂಧಿ ಅವರು ಬೆಂಗಳೂರಿನಲ್ಲಿ ಓಟ್ ಚೋರಿ ನಡೆದಿದೆ ಎಂದು ಹೇಳಿದ್ದು ನಿಜವಾಗಿದೆ. ದೇಶದಲ್ಲಿ ಚುನಾವಣಾ ಆಯೋಗವನ್ನು ಬಿಜೆಪಿ ಪಕ್ಷ ದುರ್ಬಳಕೆ ಮಾಡಿಕೊಂಡು, ಮೋದಿ ಮತ್ತು ಅಮಿತ್ ಷಾ ಅವರ ಹುನ್ನಾರದಿಂದ 13 ಕೋಟಿ ಮತ ಕಳ್ಳತನ ಮಾಡಿದೆ. ಚುನಾವಣಾ ಆಯೋಗವನ್ನು ಕೊಂಡುಕೊಳ್ಳುವ ಕೆಲಸ ಮಾಡಿದೆ. ಹಿಟ್ಲರ್ ಸಂಸ್ಕೃತಿಯೊಂದಿಗೆ ಆಯುಕ್ತರು ಶಿಕ್ಷೆಗೆ ಗುರಿಯಾಗದಂತೆ ಮಾಡಿದರು. ಅಹಿಂದ, ಬಡವರ ವೋಟ್ ಚೋರಿ ಮಾಡುವ ಮುಖಾಂತರ ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಪಕ್ಷವನ್ನು ಗೆಲ್ಲಿಸಿಕೊಳ್ಳಲು ಮೋದಿ, ಅಮಿತ್ ಶಾ ಷಡ್ಯಂತ್ರವಿದೆ ಇದನ್ನು ಖಂಡಿಸಿ ಕಾಂಗ್ರೆಸ್ ಪಕ್ಷ ಹೋರಾಟ ನಡೆಸುತ್ತಿದ್ದು, ಪ್ರತಿಯೊಬ್ಬರಿಗೂ ಮತದಾದನದ ಹಕ್ಕು ಕೊಡಿಸಿ, ಪ್ರಜಾಪ್ರಭುತ್ವ ಉಳಿಸಲು ಈ ಹೋರಾಟ ನಡೆಸಲಾಗುತ್ತಿದೆ ಎಂದರು.**

ಮೊದಲ ಪುಟದಿಂದ

## ಹಾಲು ಬೆಲೆ ಏರಿಕೆ ಶಾಕ್

ಒಕ್ಕೂಟಗಳಿಗೆ ನೀಡುವ ಸಾಧ್ಯತೆಯಿದೆ. ಬಸ್ ಟಿಕೆಟ್ ದರ ಹಾಗೂ ಹಾಲಿನ ದರ ಎರಡು ಹೆಚ್ಚಳಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ಆದರೆ, ಸದ್ಯಕ್ಕೆ ಅಧಿಕೃತ ಘೋಷಣೆ ಮಾಡದಿರಲು ತೀರ್ಮಾನಿಸಿದೆ. ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಆಯೋಗಕ್ಕೆ ಪ್ರಸ್ತಾಪ ಕಳುಹಿಸಿ ಅನುಮತಿ ಸಿಕ್ಕ ಮೇಲೆ ಅಧಿಕೃತ ಘೋಷಣೆ ಮಾಡಲು ಸರ್ಕಾರ ನಿರ್ಧರಿಸಿದೆ.

## 'ಚಿನ್ನದ ಬೇಟೆ'ಗಾರರಿಗೆ 1 ಕೋಟಿ

ಸಿಗಲಿದೆ. ಜೊತೆಗೆ ಪದಕ ವಿಜೇತರಿಗೆ ಏಷ್ಯನ್ ಗೇಮ್ಸ್ 2026ರಲ್ಲಿ ಭಾಗವಹಿಸಿದ್ದಕ್ಕಾಗಿ ಹೆಚ್ಚುವರಿಯಾಗಿ ತಲಾ 5 ಲಕ್ಷ ರೂ. ಪ್ರೋತ್ಸಾಹಧನ ನೀಡಲಾಗುವುದು ಎಂದರು.

## ಬಿಜೆಪಿ ನಾಯಕರ ಕುತಂತ್ರ ರಾಜಕೀಯ

ನೀಡಿದ ಅವರು, ಬಿಜೆಪಿ ನಾಯಕರು ಇಂತಹ ಕುತಂತ್ರ ರಾಜಕಾರಣ ಮಾಡಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಗೆಲ್ಲಬೇಕು. ಚುನಾವಣೆ ಆಯೋಗ ದುರುಪಯೋಗ ಮಾಡಿಕೊಂಡು ಗೆಲ್ಲಲು ಬಿಜೆಪಿ ಮುಂದಾಗಿದೆ. ದಲಿತರು, ಅಲ್ಪಸಂಖ್ಯಾತರು, ಬಡವರ ವೋಟ್ ಕಿತ್ತು ಹಾಕೋದು, ವೋಟ್ ಶಫಲ್ ಮಾಡುವುದು, ಬೇರೆ ಬೇರೆ ಬೂತ್‌ಗೆ ವೋಟ್ ಹಾಕಿಸುವ ಕೆಲಸ ಮಾಡ್ತಾ ಇದ್ದಾರೆ. ಇದು ನಾಚಿಕೆಗೇಡಿನ ವಿಚಾರ ಎಂದರು. ಈಗ ಬಿಜೆಪಿ ಕಾರ್ಯಕರ್ತರನ್ನ ರಕ್ಷಣೆ ಮಾಡಲು ರಾಜ್ಯಪಾಲರ ಬಳಿಗೆ ಹೋಗಿದ್ದಾರೆ. ಬಿಜೆಪಿ ಕಾರ್ಯಕರ್ತರು ಅಮಾಯಕರು. ಗಂಡ, ಹೆಂಡತಿ, ಮಗ ಮೂರು ಜನರೂ ಡಿಲೀಟ್‌ಗೆ ಅರ್ಜಿ ಕೊಟ್ಟಿದ್ದಾರೆ. ಅನೇಕ ಕಡೆ ಹೀಗೆ ಆಗಿದೆ ಎಂದು ಆರೋಪಿಗಳೇ ಒಪ್ಪಿಕೊಂಡಿದ್ದಾರೆ ಎಂದರು.

## ಕುಡಿಯುವ ನೀರಿಗೆ ಆದ್ಯತೆ

ಸಾಧ್ಯತೆ ಇದೆ. ಜಲಾಶಯಗಳಲ್ಲಿ ಸಮರ್ಪಕ ನೀರಿನ ಸಂಗ್ರಹವಿಲ್ಲದಿರುವುದರಿಂದ ಕೃಷಿ ಚಟುವಟಿಕೆಗಳಿಗೆ ಅಗತ್ಯ ಪ್ರಮಾಣದ ನೀರು ಒದಗಿಸುವುದು ಸವಾಲಾಗಿದೆ ಎಂದು ಹೇಳಿದರು.

ಪ್ರಸಕ್ತ ಬರ ಪರಿಸ್ಥಿತಿಯಲ್ಲಿ ಲಭ್ಯವಿರುವ ಜಲ ಸಂಪನ್ಮೂಲಗಳನ್ನು ವೈಜ್ಞಾನಿಕವಾಗಿ ಹಾಗೂ ಮಿತವ್ಯಯದಿಂದ ಬಳಸುವುದು ಅಗತ್ಯವಾಗಿದೆ. ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡುವುದರೊಂದಿಗೆ, ಲಭ್ಯವಿರುವ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಕೃಷಿ ಚಟುವಟಿಕೆಗಳಿಗೆ ನೀರು ಒದಗಿಸುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

## ಕಾನೂನುಬಾಹಿರ ಆಡಳಿತ

ಅಧಿಕಾರಕ್ಕೆ ಬಂದ ಸರ್ಕಾರ ಈಗ ಜನರ ಜೇಬಿಗೆ ಕತ್ತರಿ ಹಾಕುತ್ತಿದೆ. ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಭಿಕ್ಷಾಪಾತ್ರೆ ಹಿಡಿಯುವ ಹಂತಕ್ಕೆ ತಲುಪಿದೆ. ಖಜಾನೆ ತುಂಬಿಸಿಕೊಳ್ಳಲು ಹಾಲು ಮತ್ತು ಬಸ್ ಟಿಕೆಟ್ ದರ ಏರಿಸಲು ಹೊರಟಿರುವ ಈ ಸರ್ಕಾರ ನಿಜಕ್ಕೂ ಲೂಟಿಕೋರ ಹಾಗೂ ಜನದ್ರೋಹಿ ಸರ್ಕಾರ ಎಂದು ಆಕ್ರೋಶ ಹೊರಹಾಕಿದರು.

# ಬರ ಹಿನ್ನಲೆ ದಸರೆಯಲ್ಲಿ ಕಂಬಳ ಬೇಡ: ಖಾಲಿ ಕೊಡೆ ಹಿಡಿದು ಆಗ್ರಹ

ಮೈಸೂರು: ಬರಗಾಲದ ಸಂದರ್ಭದಲ್ಲಿ ಈ ಬಾರಿ ದಸರಾದಲ್ಲಿ ಕಂಬಳ ಆಯೋಜನೆ ಮಾಡಿರುವುದು ಸರಿಯಲ್ಲ ಎಂದು ಕಂಬಳ ನಡೆಯುವ ಸ್ಥಳದಲ್ಲೇ ಖಾಲಿ ಕೊಡಗಳನ್ನು ಹಿಡಿದು ವಿವಿಧ ಸಂಘಟನೆಯವರು ಪ್ರತಿಭಟನೆ ನಡೆಸಿ ಕಂಬಳ ನಡೆಯುವುದನ್ನು ವಿರೋಧಿಸಿದರು.

ನಗರದ ಸಾತಗಳ್ಳಿಯ ವಿಟಿಯು ಕಾಲೇಜು ಹಿಂಭಾಗದ ಉದ್ದೇಶಿತ ಕಂಬಳ ನಡೆಯುವ ಜಾಗದಲ್ಲಿ ಸೇರಿದ ಪರಿಸರ ಪ್ರೇಮಿಗಳು, ಪರಿಸರವಾದಿಗಳು ಸೇರಿ ರೈತ, ದಲಿತ, ಕಾರ್ಮಿಕ ಸಂಘಟನೆಗಳ ಮುಖಂಡರು, ಕನ್ನಡಪರ ಹೋರಾಟಗಾರರು ಸರ್ಕಾರದ ವಿರುದ್ಧ ಭಿತ್ತಿಪತ್ರಗಳನ್ನು ಹಿಡಿದು ಖಾಲಿ ಕೊಡಗಳನ್ನು ಪ್ರದರ್ಶಿಸುವ ಮೂಲಕ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಕಂಬಳ ಬೇಡವೆಂದು ಎರಡು ತಿಂಗಳಿಂದಲೂ ದನಿ ಎತ್ತಿದ್ದೀವಿ. ನಾಗರೀಕರ ಮಾತನ್ನು ಕೇಳದ ಸರ್ಕಾರ ಅನಾಗರಿಕ ಸಂಸ್ಕೃತಿಯನ್ನು ಪ್ರದರ್ಶಿಸುತ್ತಿದೆ. ಮೈಸೂರಿನ ಜನರು ಬಹಳ ಹೃದಯವಂತರು. ಕಂಬಳ ಈ ನೆಲದ ಆಚರಣೆ ಅಲ್ಲ, ಅದು ಕರಾವಳಿ ಭಾಗದ ಆಚರಣೆ. ಬೇಕಿದ್ದರೆ



ಅಲ್ಲೇ ಮಾಡಿಕೊಳ್ಳಲಿ ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಬರಗಾಲದ ಸಂದರ್ಭದಲ್ಲಿ ಕೋಟ್ಯಂತರ ಹಣ ಖರ್ಚು ಮಾಡಿ ಕಂಬಳ ಆಚರಿಸುತ್ತಿರುವುದಕ್ಕೆ ನಮ್ಮ ವಿರೋಧವಿದೆ. ದಸರಾ ಸಂದರ್ಭದಲ್ಲಿ ಕಂಬಳ ಆಯೋಜನೆ ಬೇಡವೆಂದು ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ನೀಡಿದರೂ ಸಹ ಅದಕ್ಕೆ ಸ್ಪಂದಿಸಿಲ್ಲ. ಕರಾವಳಿ ನಮಗೆ ದೂರವೇನಿಲ್ಲ ಇಲ್ಲಿಂದ 6 ಗಂಟೆ ದೂರದ ಪ್ರಯಾಣವಷ್ಟೆ. ಅಲ್ಲಿ ಭೌಗೋಳಿಕವಾಗಿ ಸಿದ್ಧವಾದ ನೆಲ ಸೇರಿದಂತೆ ಎಲ್ಲ ಮೂಲಭೂತ ಸೌಕರ್ಯಗಳು ಅಲ್ಲಿವೆ. ಕಂಬಳ ಕರಾವಳಿ ಸಂಸ್ಕೃತಿ, ಅದು ಅಲ್ಲಿ ಮಾಡಿದ್ರೆನೆ ಚೆಂದ, ನಾವೆಲ್ಲ ಬೇಕಿದ್ದರೆ ಅಲ್ಲಿಯೇ ಹೋಗಿ ಕಂಬಳ ವೀಕ್ಷಣೆ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಮೈಸೂರು ದಸರಾ ಸಂದರ್ಭದಲ್ಲಿ ಕಂಬಳ ಆಯೋಜನೆ ಬೇಡ, ಮುಖ್ಯಮಂತ್ರಿಗಳು ಈಗಲಾದರೂ ಎಚ್ಚೆತ್ತು ಕಂಬಳ ಆಯೋಜನೆ ನಿರ್ಧಾರದಿಂದ ಹಿಂದೆ ಸರಿಯಲಿ ಎಂದರು.

ಪರಿಸರಕ್ಕಾಗಿ ನಾವು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, ಕಂಬಳವನ್ನು ನಾವು ಸುಖಾಸುಮ್ಮನೆ, ಆಧಾರವಿಲ್ಲದೇ ವಿರೋಧ ಮಾಡುತ್ತಿಲ್ಲ. ಕಂಬಳ ವಿರೋಧಿಸಲು ಮೂರು ಪ್ರಮುಖ ಕಾರಣಗಳಿವೆ. ದಸರಾದಲ್ಲಿ ಈಗಾಗಲೇ ಕಿಕ್ಕಿರಿದ ಕಾರ್ಯಕ್ರಮಗಳಿರುತ್ತವೆ ಅವುಗಳನ್ನೆ ಅಚ್ಚುಕಟ್ಟಾಗಿ ಮಾಡುತ್ತಿಲ್ಲದಿರುವುದು ಎಲ್ಲರ ಗಮನಕ್ಕೂ ಬಂದಿದೆ. ಅದರ ನಡುವೆ ಇಷ್ಟೊಂದು ದೊಡ್ಡ ಪ್ರಮಾಣದ ಸಾಂಸ್ಕೃತಿಕ ಕ್ರೀಡೆಯನ್ನು ನಮ್ಮ ಮೇಲೆ ಹೇರುತ್ತಿದ್ದಾರೆ. ದಸರಾ ಸಂದರ್ಭದಲ್ಲಿ ಕಂಬಳ ಕ್ರೀಡೆ ಬೇಕಾಗಿರಲಿಲ್ಲ. ಅಷ್ಟೇ ಅಲ್ಲದೆ ಕಂಬಳ ನಡೆಸುವ ಟ್ರ್ಯಾಕ್ಗಾಗಿ ನೂರಾರು ಮರಗಳನ್ನು ಕಡಿಯಲಾಗಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಎಫ್ಐಆರ್ ಸಹ ಆಗಿದೆ. ಈ ಜಾಗ ಕಂಬಳ ನಡೆಸುವ ಜಾಗವಾಗಿರಲಿಲ್ಲ ಇದು ಉದ್ದೇಶಿತ ಉದ್ಯಾನವನ ನಿರ್ಮಾಣ ಮಾಡುವ ಜಾಗವಾಗಿತ್ತು. ಅಲ್ಲದೇ ರಾಜ್ಯದಲ್ಲಿ ಭೀಕರ ಬರಗಾಲವಿದೆ ಇಂತಹ ಸಂದರ್ಭದಲ್ಲಿ ಸರ್ಕಾರ ಕೋಟ್ಯಂತರ ಹಣ ಖರ್ಚು ಮಾಡಿ ಕಂಬಳ ನಡೆಸುವ ಅಗತ್ಯವಿರಲಿಲ್ಲ ಎಂದು ಸರ್ಕಾರದ ನಡೆಗೆ ಆಕ್ಷೇಪ ವ್ಯಕ್ತಪಡಿಸಿದರು.

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ರಾಜ್ಯದಲ್ಲಿ 217 ತಾಲೂಕು ಬರಗಾಲಕ್ಕೆ ತುತ್ತಾಗಿ ಕುಡಿಯ ನೀರಿಗೂ ದನ, ಕರುಗಳ ಮೇವಿಗೂ ರೈತರು ಸಂಕಷ್ಟ ಪಡುತ್ತಿದ್ದು, ಶೇ.60ರಷ್ಟು ಮಳೆ ಕಡಿಮೆಯಾಗಿದೆ ಎಂದು ಬರ ಪರಿಹಾರ ತಂಡವೇ ಪ್ರಸ್ತಾಪಿಸಿದೆ. ಇಂತಹ ಭೀಕರ ಸಮಸ್ಯೆ ಇರುವಾಗ ಎರಡು ಕೋಟಿ ಲೀಟರ್ ನಷ್ಟು ನೀರು ಬಳಸಿ ಕೋಣಗಳ ಓಡಿಸುವ ಕಂಬಳ ನಡೆಸುವುದು ಜನವಿರೋಧಿ ನೀತಿಯಾಗಿದೆ. 10 ಕೋಟಿ ಹಣ ಖರ್ಚು ಮಾಡಿ ರಾಜ್ಯದ ಜನರ ಸಂಕಷ್ಟ ಕಾಲದಲ್ಲಿ ಕಂಬಳ ನಡೆಸುವ ಔಚಿತ್ಯವೇನು?, ಪರಿಸರದ ಬಗ್ಗೆ ಕಾಳಜಿ ಇಲ್ಲದೆ ರಾಜ್ಯ ಸರ್ಕಾರ ವರ್ತಿಸುತ್ತಿದೆ ಇದನ್ನ ವಿರೋಧಿಸುತ್ತೇವೆ ಎಂದರು. ಮಾಜಿ ಶಾಸಕ ಪರಿಸರಕ್ಕಾಗಿ ನಾವು ಸಂಘಟನೆಯ ಮುಖಂಡ ಎ.ಟಿ. ರಾಮಸ್ವಾಮಿ, ಭೂಮಿತಾಯಿ ಹೋರಾಟ ಸಮಿತಿಯ ನಂಜುಂಡೇಗೌಡ, ಕೆಂಪುಗೌಡ. ದಲಿತ ಸಂಘರ್ಷ ಸಮಿತಿಯ ಗುರುಪ್ರಸಾದ್ ಕೆರೆಗೂಡು, ಬೆಟ್ಟಯ್ಯ ಕೋಟೆ, ಮಾ.ಗು.ಸದಾನಂದಯ್ಯ, ಪರಿಸರಕ್ಕಾಗಿ ನಾವು ಸಂಘಟನೆಯ ರವಿಕುಮಾರ್, ಭಾನುಮೋಹನ್, ಲೀಲಾ ಶಿವಕುಮಾರ್, ಸೋಮಸುಂದರ್, ಮನ್ಸೂರ್ ಹಮದ್, ಎಸ್.ನಾರಾಯಣ್ ಪ್ರತಿಭಟನೆಯಲ್ಲಿದ್ದರು.

## ಹನೂರಿನಲ್ಲಿ ಜಮೀನಿಗೆ ಭೇಟಿ ನೀಡಿ ಬೆಳೆ ಪರಿಶೀಲನೆ ನಡೆಸಿದ ಸಚಿವ



ಚಾಮರಾಜನಗರ, ಹನೂರು ತಾಲ್ಲೂಕಿನ ರಾಮಪುರ ಠಾಣಾ ವ್ಯಾಪ್ತಿಯ ನಾಗಣ್ಣನದೊಡ್ಡಿ ಗ್ರಾಮದ ರೈತ ಪಳನಿಸ್ವಾಮಿ ಅವರ ಜಮೀನಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಇಂದು ಬೆಳಿಗ್ಗೆ ಭೇಟಿ ನೀಡಿ ಬೆಳೆ ಪರಿಶೀಲನೆ ನಡೆಸಿದರು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯಿಂದ ರೈತರಿಗೆ ಉಚಿತವಾಗಿ ವಿತರಿಸಲಾದ ಮೇವಿನ ಕಿಟ್ ಯೋಜನೆಯಡಿ ಪಳನಿಸ್ವಾಮಿ ಅವರು ತಮ್ಮ ಜಮೀನಿನಲ್ಲಿ ಬೆಳೆದಿರುವ ಹಸಿರು ಮೇವಿನ ಬೆಳೆಯನ್ನು ಸಚಿವರು ಖುದ್ದು ವೀಕ್ಷಿಸಿದರು. ಬೆಳೆಯ ಇಳುವರಿ, ಗುಣಮಟ್ಟ, ನೀರಿನ ಬಳಕೆ ಹಾಗೂ ಜಾನುವಾರುಗಳಿಗೆ ಆಗುತ್ತಿರುವ ಪೌಷ್ಟಿಕಾಂಶದ ಉಪಯೋಗದ ಕುರಿತು ರೈತರಿಂದ ವಿವರವಾಗಿ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ರೈತರು ಕೇವಲ ಕೃಷಿ ಮಾತ್ರವಲ್ಲದೆ ಪಶುಪಾಲನೆಯಲ್ಲೂ ಸ್ವಾವಲಂಬಿಯಾಗಬೇಕು. ಸರ್ಕಾರದ ಮೇವಿನ ಕಿಟ್ ಯೋಜನೆ ಜಾನುವಾರುಗಳಿಗೆ ವರ್ಷಪೂರ್ತಿ ಹಸಿರು ಮೇವು ಲಭ್ಯವಾಗುವಂತೆ ಮಾಡುವ ಉದ್ದೇಶ ಹೊಂದಿದೆ. ಎಲ್ಲ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರು, ಪಶುವೈದ್ಯಾಧಿಕಾರಿಗಳು, ರಾಮಾಪುರ ಪಂಚಾಯಿತಿ ಅಧ್ಯಕ್ಷರು, ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ತಾಲ್ಲೂಕಿನ ರಾಮಪುರ ಠಾಣಾ ವ್ಯಾಪ್ತಿಯ ನಾಗಣ್ಣನದೊಡ್ಡಿ ಗ್ರಾಮದ ರೈತ ಪಳನಿಸ್ವಾಮಿ ಅವರ ಜಮೀನಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಇಂದು ಬೆಳಿಗ್ಗೆ ಭೇಟಿ ನೀಡಿ ಬೆಳೆ ಪರಿಶೀಲನೆ ನಡೆಸಿದರು. ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆಯಿಂದ ರೈತರಿಗೆ ಉಚಿತವಾಗಿ ವಿತರಿಸಲಾದ ಮೇವಿನ ಕಿಟ್ ಯೋಜನೆಯಡಿ ಪಳನಿಸ್ವಾಮಿ ಅವರು ತಮ್ಮ ಜಮೀನಿನಲ್ಲಿ ಬೆಳೆದಿರುವ ಹಸಿರು ಮೇವಿನ ಬೆಳೆಯನ್ನು ಸಚಿವರು ಖುದ್ದು ವೀಕ್ಷಿಸಿದರು. ಬೆಳೆಯ ಇಳುವರಿ, ಗುಣಮಟ್ಟ, ನೀರಿನ ಬಳಕೆ ಹಾಗೂ ಜಾನುವಾರುಗಳಿಗೆ ಆಗುತ್ತಿರುವ ಪೌಷ್ಟಿಕಾಂಶದ ಉಪಯೋಗದ ಕುರಿತು ರೈತರಿಂದ ವಿವರವಾಗಿ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ರೈತರು ಕೇವಲ ಕೃಷಿ ಮಾತ್ರವಲ್ಲದೆ ಪಶುಪಾಲನೆಯಲ್ಲೂ ಸ್ವಾವಲಂಬಿಯಾಗಬೇಕು. ಸರ್ಕಾರದ ಮೇವಿನ ಕಿಟ್ ಯೋಜನೆ ಜಾನುವಾರುಗಳಿಗೆ ವರ್ಷಪೂರ್ತಿ ಹಸಿರು ಮೇವು ಲಭ್ಯವಾಗುವಂತೆ ಮಾಡುವ ಉದ್ದೇಶ ಹೊಂದಿದೆ. ಎಲ್ಲ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ವೇಳೆ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರು, ಪಶುವೈದ್ಯಾಧಿಕಾರಿಗಳು, ರಾಮಾಪುರ ಪಂಚಾಯಿತಿ ಅಧ್ಯಕ್ಷರು, ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

### ಒಲೆರಹಿತ ಅಡುಗೆ ಸ್ಪರ್ಧೆ

ಮೈಸೂರು:- ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ-2026 ರ ಅಂಗವಾಗಿ 18 ವರ್ಷ ಮೇಲ್ಪಟ್ಟ ಮಹಿಳೆಯರಿಗಾಗಿ ಒಲೆರಹಿತ ಅಡುಗೆ ಸ್ಪರ್ಧೆಯನ್ನು ಅಕ್ಟೋಬರ್ 13 ರಂದು ಸಂಜೆ 4:30 ರಿಂದ 5:30 ರವರೆಗೆ ಮೈಸೂರಿನ ರೈಲ್ವೆ ನಿಲ್ದಾಣದ ಎದುರಿಗಿರುವ ಜೆ.ಕೆ. ಮೈದಾನ (ಜೀವಣ್ಣರಾಯನಕಟ್ಟೆ ಆವರಣ)ದಲ್ಲಿ ಆಯೋಜಿಸಲಾಗಿದೆ.

ಆಸಕ್ತರು ಅಕ್ಟೋಬರ್ 12 ರ ಸಂಜೆ 6:00 ಗಂಟೆಯೊಳಗೆ ಸ್ಪರ್ಧಿಗಳು ನೋಂದಣಿ ಮುಗಿಸಬೇಕು. ತಡವಾಗಿ ಬರುವವರಿಗೆ ಅವಕಾಶವಿರುವುದಿಲ್ಲ. ನೋಂದಣಿಗಾಗಿ ರೋಹಿಣಿ, ಮೊಬೈಲ್ ಸಂಖ್ಯೆ: 9164915133, ನಾಗರತ್ನ, ಮೊಬೈಲ್ ಸಂಖ್ಯೆ: 7795624396ನ್ನು ಸಂಪರ್ಕಿಸಬಹುದೆಂದು ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ-2026 ರ ಕಾರ್ಯದರ್ಶಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಚ್ಛತೆಗೆ ಕ್ರಮ ಕೈಗೊಳ್ಳುವಂತೆ ಒತ್ತಾಯ

ಗುಂಡ್ಲುಪೇಟೆ: ಪಟ್ಟಣದ ಹೊರವಲಯದಲ್ಲಿರುವ ಸ್ಮಶಾನ ಹಾಗೂ ಅದರ ಮುಂಭಾಗದ ಸೇತುವೆ ಸುತ್ತಮುತ್ತ ತ್ಯಾಜ್ಯ ವಸ್ತುಗಳು, ಸತ್ತ ಪ್ರಾಣಿ-ಪಕ್ಷಿಗಳ ಅವಶೇಷಗಳನ್ನು ಬೇಕಾಬಿಟ್ಟಿಯಾಗಿ ಎಸೆಯುತ್ತಿರುವುದರಿಂದ ಸ್ಥಳದಲ್ಲಿ ಅನಾರೋಗ್ಯಕರ ವಾತಾವರಣ ನಿರ್ಮಾಣವಾಗಿದೆ.

ಈ ಕೂಡಲೇ ಸ್ವಚ್ಛತಾ ಕಾರ್ಯ ಕೈಗೊಂಡು ಸಾರ್ವಜನಿಕರಿಗೆ ಆರೋಗ್ಯಕರ ವಾತಾವರಣ ಕಲ್ಪಿಸಬೇಕೆಂದು ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಪುರಸಭೆಯ ಮುಖ್ಯಅಧಿಕಾರಿ ಸರವಣ ಎಸ್ ರವರಿಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು

ನಂತರ ತಾಲೂಕು ಅಧ್ಯಕ್ಷ ಸ್ವಾಮಿ ನಾಯಕ್ ಮಾತನಾಡಿ ಸ್ಮಶಾನದ ಆವರಣದಲ್ಲಿ ಗಿಡಗಂಟಿಗಳು ಬೆಳೆದು ನಿಂತಿದ್ದು, ಸೇತುವೆಯ ಅಕ್ಕಪಕ್ಕದಲ್ಲಿ ಕೆಲವರು ಕಾನೂನುಬಾಹಿರವಾಗಿ ತ್ಯಾಜ್ಯ ಸುರಿಯುತ್ತಿರುವುದು ಕಂಡುಬರುತ್ತಿದೆ. ಅಲ್ಲದೆ, ಕೆಲವು ಮಾಂಸದ ಅಂಗಡಿಗಳ ತ್ಯಾಜ್ಯ ಹಾಗೂ ಊರಿನಲ್ಲಿ ಸತ್ತ ಪ್ರಾಣಿ-ಪಕ್ಷಿಗಳ ಅವಶೇಷಗಳನ್ನು ಸಹ ಇಲ್ಲಿ ಎಸೆಯುತ್ತಿರುವುದರಿಂದ ದುರ್ವಾಸನೆ ಹಾಗೂ ಕೊಳಕು ವಾತಾವರಣ ಉಂಟಾಗಿದೆ. ಇದರಿಂದ ಸಾರ್ವಜನಿಕರು ಈ ಭಾಗದಲ್ಲಿ



ಸಂಚರಿಸಲು ಹಿಂದೇಟು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.ಎಂದರು ಸ್ಮಶಾನ ಹಾಗೂ ಸೇತುವೆ ಸುತ್ತಮುತ್ತ ತಕ್ಷಣ ಸ್ವಚ್ಛತಾ ಕಾರ್ಯ ಕೈಗೊಂಡು, ತ್ಯಾಜ್ಯ ಸುರಿಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ತ್ಯಾಜ್ಯ ಸುರಿಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಸ್ಥಳದಲ್ಲಿ ಸ್ವಚ್ಛ ಹಾಗೂ ಆರೋಗ್ಯಕರ ವಾತಾವರಣ ನಿರ್ಮಿಸಬೇಕೆಂದು ಅವರು ಆಗ್ರಹಿಸಿದ್ದಾರೆ. ಈ ವೇಳೆ ಜಿಲ್ಲಾ ಯುವ ಘಟಕದ ಗೌರವಾಧ್ಯಕ್ಷ ಶಿವಕುಮಾರ್, ಸಂಘಟನೆಯ ಕಾನೂನು ಸಲಹೆಗಾರ ರವಿಕುಮಾರ್, ಟೌನ್ ಮಹಿಳಾ ಘಟಕದ ಅಧ್ಯಕ್ಷೆ ರಾಧಾ ಇತರರು ಉಪಸ್ಥಿತರಿದ್ದರು

## ಹೆಬ್ಬಾಗಿಲು ನಿರ್ಮಾಣಕ್ಕೆ ಚಾಲನೆ



ಚಾಮರಾಜನಗರ. ತಾಲೂಕಿನ ಕಲ್ಲಹಳ್ಳಿ ಗ್ರಾಮದ ಮುಖ್ಯದ್ವಾರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಹಾಗೂ ಹೆಬ್ಬಾಗಿಲು ನಿರ್ಮಾಣ ಕಾಮಗಾರಿಗೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಪುಟ್ಟರಂಗಶೆಟ್ಟಿ ಅವರು ಭೂಮಿಪೂಜೆ ನೆರವೇರಿಸಿ ನಂತರ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು

ಬಳಿಕ ಮಾತನಾಡಿದ ಸಚಿವ ಪುಟ್ಟರಂಗಶೆಟ್ಟಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಹಾಗೂ ಹೆಬ್ಬಾಗಿಲು ನಿರ್ಮಾಣ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಸೂಚಿಸಿದರು. ಕಲ್ಲಹಳ್ಳಿ ಗ್ರಾಮದಲ್ಲಿ ಈ ಹಿಂದೆ ಸುವರ್ಣ ಗ್ರಾಮ ಯೋಜನೆಯಡಿ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ಗ್ರಾಮಕ್ಕೆ ಇನ್ನೂ ಯಾವುದೇ ಮೂಲಭೂತ ಸೌಕರ್ಯಗಳ ಅಗತ್ಯವಿದ್ದರೆ ತಮ್ಮ ಗಮನಕ್ಕೆ ತರುವಂತೆ ತಿಳಿಸಿದ ಸಚಿವರು, ಅಗತ್ಯ ಕ್ರಮ ಕೈಗೊಂಡು ಕಾಮಗಾರಿ ಮಾಡಿಕೊಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮಹೇಶ್ ಕುದರ್, ಕೆಲ್ಲಂಬಳ್ಳಿ ಸೋಮಶೇಖರ್, ಇಂಜಿನಿಯರ್ ಲತಾ ಸೇರಿದಂತೆ ಗ್ರಾಮದ ಮುಖಂಡರು ಇದ್ದರು. ಯಜಮಾನರು, ಗ್ರಾಮಸ್ಥರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಸೇರಿದ್ದರು.

# ಪಠ್ಯೇತರ ಚಟುವಟಿಕೆಗಳಿಂದ ವ್ಯಕ್ತಿತ್ವ ವಿಕಸನ

## ಡಾ. ಪ್ರತಿಮಾ ಡಿ.ಎಸ್. ಅಭಿಮತ | ವಿವಿಧ ಸಮಿತಿಗಳ ಉದ್ಘಾಟನೆ, ಕಿವಿಮಾತು

ಚಾಮರಾಜನಗರ: ಪದವಿ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್), ರೆಂಜರ್ಸ್, ರೆಡ್ಕ್ರಾಸ್ ಸೇರಿದಂತೆ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ತಮ್ಮಲ್ಲಿರುವ ಪ್ರತಿಭೆ ಹಾಗೂ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕಿ ಡಾ. ಪ್ರತಿಮಾ ಡಿ.ಎಸ್. ಹೇಳಿದರು.

ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ರೆಂಜರ್ಸ್, ರೆಡ್ಕ್ರಾಸ್, ಅಭಿವ್ಯಕ್ತಿ ಹಾಗೂ ವಿವಿಧ ಸಮಿತಿಗಳ ಉದ್ಘಾಟನಾ ಸಮಾರಂಭವನ್ನು ಅವರು ಉದ್ಘಾಟಿಸಿದರು. ವಿದ್ಯಾರ್ಥಿಗಳು ಕಾಲೇಜಿಗೆ ಬಂದು ತರಗತಿಗಳಿಗೆ ಹಾಜರಾಗಿ, ಪರೀಕ್ಷೆ ಬರೆದು ಪದವಿ ಪಡೆಯುವುದಷ್ಟೇ ಶಿಕ್ಷಣದ ಉದ್ದೇಶವಲ್ಲ. ಅದರೊಂದಿಗೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿರುವ ಕಲಾ ಪ್ರತಿಭೆಯನ್ನು ಹೊರತರುವುದರ ಜೊತೆಗೆ ವೇದಿಕೆಯಲ್ಲಿ ಮಾತನಾಡುವ ಧೈರ್ಯವನ್ನು ಹೊಂದಿದೆ ಬೆಳೆಸುತ್ತಾರೆ.

### ಜಾನಪದ ಕಲೆಗೆ ಪ್ರೋತ್ಸಾಹ ಹಾಗೂ ಉಪಸ್ಥಿತರಿದ್ದ ಗಣ್ಯರು

ಜಾನಪದ ಶ್ರೀ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಅಪ್ಪಗೆರೆ ತಿಮ್ಮರಾಜು ಮಾತನಾಡಿ, ವಿದ್ಯಾರ್ಥಿಗಳು ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಚಾಮರಾಜನಗರ ಜಿಲ್ಲೆಯಲ್ಲಿ ಅನೇಕ ಜಾನಪದ ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಕಲಾವಿದರು ಬೆಳೆದಿದ್ದಾರೆ. ಅವರ ಪ್ರತಿಭೆ ಮತ್ತು ಅನುಭವವನ್ನು ವಿದ್ಯಾರ್ಥಿಗಳು ಕಲೆಹಾಕಲು ಹೆಚ್ಚಿನ ಪ್ರೋತ್ಸಾಹವನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ. ಅಶ್ವಿನಿ ಆರ್. ಎಸ್. ವಹಿಸಿದ್ದರು. ಸಮಾರಂಭದಲ್ಲಿ ಪ್ರಾಧ್ಯಾಪಕರಾದ ಡಾ.ನೀಲಕಂಠಸ್ವಾಮಿ, ಪ್ರೊ.ರೋಹಿಣಿ ಜೆ., ಡಾ.ಶಿವಪ್ರಸಾದ್ ಎನ್.ಜೆ., ಪ್ರೊ.ನಾರಾಯಣ್ ಸಿ. ಎನ್., ಡಾ. ಮಲ್ಲೇಶ್ ಜಿ., ಡಾ. ಶಿವರಾಜು ಸಿ.ಡಿ., ಡಾ.ಚಂದ್ರಶೇಖರ್ ಎ.ಸಿ., ಡಾ.ನಾಗೇಂದ್ರಕುಮಾರ್ ಪಿ.ಎಂ., ದೀಪಿತಾ ಜಿ.ಕೆ., ಡಾ.ಶಾಲಿನಿ ಎ., ಡಾ. ಚಿನ್ಮಯ್ ಭಟ್, ಪ್ರೊ.ಪಲ್ಲವಿ ಇಳಕಲ್, ಪ್ರೊ. ಲೋಕೇಶ್ ಜಿ.ಎನ್., ಪೂರ್ಣಿಮಾ ವಿ.ಕೆ., ಶ್ರೀ ಮಹದೇವ ಜಿ.ಎಲ್. ಸೇರಿದಂತೆ ವಿವಿಧ ವಿಭಾಗಗಳ ಸಂಚಾಲಕರು, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ತರಗತಿ ಪ್ರತಿನಿಧಿಗಳು, ವಿದ್ಯಾರ್ಥಿಗಳು ಇದ್ದರು.



### ಸವಾಲುಗಳ ಎದುರಿಸುವ ಸಾಮರ್ಥ್ಯ, ನಾಯಕತ್ವ ಗುಣ

ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಯುತ್ತದೆ. ಜೀವನದಲ್ಲಿ ಹಲವು ಸವಾಲುಗಳು ಎದುರಾಗುತ್ತವೆ, ಧೈರ್ಯದಿಂದ ಎದುರಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಅವರು ಹೇಳಿದರು. ಚಾಮರಾಜನಗರ ಜಿಲ್ಲೆ ಜನಪದ ಕಲೆಗಳಿಗೆ ಹೆಸರುವಾಸಿ, ಮಲೆ ಮಹದೇಶ್ವರನ ಹಾಡು ಸೇರಿದಂತೆ ಸ್ಥಳೀಯ ಜಾನಪದ ಪರಂಪರೆ ವಿಶಿಷ್ಟವಾಗಿದೆ. ಇಂತಹ ಜಿಲ್ಲೆಯಲ್ಲಿ ಕಲಾವಿದರಿಂದ ಕಲಿಯುವ ಹಾಗೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶವಿರುವುದು ಹೆಮ್ಮೆಯ ವಿಚಾರ ಹೇಳಿದರು. ಎನ್‌ಎಸ್‌ಎಸ್ ಶಿಬಿರಗಳಲ್ಲಿ ಭಾಗವಹಿಸುವುದರಿಂದ ಗ್ರಾಮೀಣ ಬದುಕಿನ ಅನುಭವ ದೊರೆಯುತ್ತದೆ. ರೆಡ್ಕ್ರಾಸ್ ಚಟುವಟಿಕೆಗಳು ಸೇವಾ ಮನೋಭಾವ ಬೆಳೆಸಿದರೆ, ರೆಂಜರ್ಸ್ ಮತ್ತು ರೋವರ್ಸ್ ಚಟುವಟಿಕೆಗಳು ಶಿಸ್ತು ಹಾಗೂ ನಾಯಕತ್ವ ಗುಣಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ ಎಂದು ಹೇಳಿದರು. ಯುವ ಸಂಭ್ರಮ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಬದಲಾಗುತ್ತಿರುವ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ವಿದ್ಯಾರ್ಥಿಗಳು ಹೊಸತನದ ಬಗ್ಗೆ ಚಿಂತಿಸಬೇಕು. ಭವಿಷ್ಯದಲ್ಲಿ ಉದ್ಯಮಿಗಳಾಗುವ, ಅಧಿಕಾರಿಗಳಾಗುವ ಗುರಿಯನ್ನು ಹೊಂದಲು ಅಗತ್ಯವಿರುವ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅವರು ಸಲಹೆ ನೀಡುತ್ತಾರೆ.

### ಹಿಂದುಳಿದ ಜಿಲ್ಲೆ ಎಂಬ ಮನೋಭಾವ ಬದಲಾಗಿದೆ

▶▶ ಎ.ಬಿ. ನಾಗೇಂದ್ರ ಪ್ರಸಾದ್

ಮುಖ್ಯ ಅತಿಥಿಯಾಗಿದ್ದ ಕಾಲೇಜು ಶಿಕ್ಷಣ ಇಲಾಖೆ ಮೈಸೂರಿನ ಸಹಾಯಕ ನಿರ್ದೇಶಕ ಎ.ಬಿ. ನಾಗೇಂದ್ರ ಪ್ರಸಾದ್ ಮಾತನಾಡಿ, ಚಾಮರಾಜನಗರ ಜಿಲ್ಲೆ ಹಿಂದುಳಿದ ಜಿಲ್ಲೆ ಎಂಬ ಹೊರಗಿನವರಲ್ಲಿದ್ದ ಮನೋಭಾವ ಈಗ ಬದಲಾಗಿದೆ. ಜಿಲ್ಲಾ ಕಾಲೇಜುಗಳಿಗೆ ವರ್ಗಾವಣೆಯ ಮೂಲಕ ಬರಲು ಉಪನ್ಯಾಸಕರು, ಸಹಾಯಕ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರು ಉತ್ಸುಕತೆ ತೋರುತ್ತಿದ್ದಾರೆ ಜಿಲ್ಲೆಯಲ್ಲಿ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಚಾಮರಾಜನಗರ ಜಿಲ್ಲೆ ಜಾನಪದ ಕಲೆ, ಕಲಾವಿದರು, ಪುಣ್ಯಕ್ಷೇತ್ರಗಳು ಹಾಗೂ ನೈಸರ್ಗಿಕ ಸಂಪನ್ಮೂಲಗಳ ತವರಾಗಿದೆ. ಗಡಿಭಾಗದ ಜಿಲ್ಲೆಯಲ್ಲಿ ಇರುವ ಭಾಷೆ ಹಾಗೂ ಗ್ರಾಮೀಣ ಪದ ಬಳಕೆಯಲ್ಲೂ ವಿಶಿಷ್ಟತೆ ಕಂಡುಬರುತ್ತದೆ. ಎಲ್ಲೇ ಹೋದರೂ ನಮ್ಮ ಮಾತಿನ ಮೂಲಕವೇ ನಾವು ಚಾಮರಾಜನಗರದವರು ಎಂಬ ಗುರುತನ್ನು ಅನುಭವಿಸಬಹುದು ಎಂದು ಹೇಳಿದರು. ಜಿಲ್ಲೆಯಲ್ಲಿ ಸೇವೆ ಸಲ್ಲಿಸಲು ವಿಶೇಷ ಸಂತೋಷವಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಜನರಲ್ಲಿ ಇದೆ. ಚಾಮರಾಜನಗರ ಜಿಲ್ಲೆಯವರು ಹೆಮ್ಮೆಯಿಂದ ಹೇಳಬೇಕಾಗಿದೆ ಎಂದು ಅವರು ಪ್ರಕಟಿಸಿದರು.

## ಸರ್ಕಾರಿ ಆಸ್ಪತ್ರೆಗೆ ಆರೋಗ್ಯ ಸಚಿವರ ಅನಿರೀಕ್ಷಿತ ಭೇಟಿ

**ರಾಮನಗರ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ಯು.ಟಿ. ಖಾದರ್ ಅವರು ಅ.6ರ ಮಂಗಳವಾರ ಮುಂಜಾನೆ 3 ಗಂಟೆಗೆ ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಅನಿರೀಕ್ಷಿತವಾಗಿ ಭೇಟಿ ನೀಡಿ, ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗಳ ಕಾರ್ಯವೈಖರಿಯನ್ನು ಪರಿಶೀಲಿಸಿದರು.

ರಾತ್ರಿ ವೇಳೆಯಲ್ಲಿ ಆಸ್ಪತ್ರೆಯ ವೈದ್ಯರು, ಅಧಿಕಾರಿಗಳು, ಸಿಬ್ಬಂದಿಗಳ ಸೇವೆಗಳು ಹಾಗೂ ಮೂಲಸೌಕರ್ಯಗಳ ಪರಿಶೀಲನೆ ನಡೆಸಿದ ಅವರು, ಆಸ್ಪತ್ರೆಯ ಐಸಿಯು ಘಟಕ, ವಿವಿಧ ವಾರ್ಡ್‌ಗಳು, ಶೌಚಾಲಯಗಳ ಸ್ವಚ್ಛತೆ, ಔಷಧಗಳ ಲಭ್ಯತೆಯನ್ನು ಪರಿಶೀಲಿಸಿದರು. ಮಾತ್ರವಲ್ಲದೇ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳು ಹಾಗೂ ಅವರ ಕುಟುಂಬದವರೊಂದಿಗೆ ಮಾತನಾಡಿ, ಸರ್ಕಾರಿ ಆಸ್ಪತ್ರೆಯ ಚಿಕಿತ್ಸೆಯ ಗುಣಮಟ್ಟ ಹಾಗೂ ಮಾತ್ರೆಗಳು ಸೇರಿದಂತೆ ಇತರೆ ಔಷಧಗಳನ್ನು ವೈದ್ಯರು ಸಮರ್ಪಕವಾಗಿ ನೀಡುತ್ತಿರುವ ಬಗ್ಗೆ ಮಾಹಿತಿ ಪಡೆದುಕೊಂಡರು. ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಸೌಲಭ್ಯಗಳು ಹಾಗೂ ಔಷಧೋಪಚಾರಗಳು ಇದ್ದಾಗ್ಯೂ ಕೂಡ ವೈದ್ಯರು ಬಡ ರೋಗಿಗಳಿಗೆ ಇತರೆ ವೈದ್ಯಕೀಯ ಪರೀಕ್ಷೆಗಳು ಹಾಗೂ ಔಷಧಗಳನ್ನು ಹೊರಗಿನಿಂದ ತರುವ ಪರಿಸ್ಥಿತಿ ತಲೆದೋರಬಾದರು ಎಂದು ಸಚಿವರು ಸ್ಥಳದಲ್ಲಿದ್ದವರಿಗೆ ಎಚ್ಚರಿಸಿದರು. ಆಸ್ಪತ್ರೆಯಲ್ಲಿರು ಎಲ್ಲ ಸೇವೆಗಳು ರೋಗಿಗಳಿಗೆ ಉಚಿತವಾಗಿ ಹಾಗೂ ನಿಗದಿತ ಅವಧಿಯೊಳಗೆ ಸೂಕ್ತವಾಗಿ ಲಭ್ಯವಾಗಬೇಕೆಂದು ಅವರು ಸೂಚಿಸಿದರು.

ಹಗಲಿರಲಿ, ರಾತ್ರಿಯಿರಲಿ ಸರ್ಕಾರಿ ಆಸ್ಪತ್ರೆಗೆ ಬರುವ



ಪ್ರತಿಯೊಬ್ಬರಿಗೂ ಗುಣಮಟ್ಟದ ಚಿಕಿತ್ಸೆ ಹಾಗೂ ಗೌರವಯುತ ಸೇವೆ ದೊರೆಯಬೇಕೆನ್ನುವುದು ಆರೋಗ್ಯ ಇಲಾಖೆಯ ಬದ್ಧತೆಯಾಗಿದೆ, ನಾಡಿನ ಜನರ ಆರೋಗ್ಯದ ವಿಚಾರದಲ್ಲಿ ಯಾವುದೇ ರಾಜಿಗೆ ಅವಕಾಶವಿಲ್ಲ ಎಂದು ಸಚಿವರು ಹೇಳಿದರು.

ಇಲ್ಲಿಗೆ ಬರುವ ರೋಗಿಗಳನ್ನು ಅನಗತ್ಯವಾಗಿ ಬೆಂಗಳೂರು, ಮಂಡ್ಯ ಸೇರಿದಂತೆ ದೂರದ ಆಸ್ಪತ್ರೆಗಳಿಗೆ ರೆಫರ್ ಮಾಡಬಾರದು, ಆಸ್ಪತ್ರೆಯಲ್ಲಿಯೇ ಸಾಧ್ಯವಾದಷ್ಟು ಅಗತ್ಯ ಚಿಕಿತ್ಸೆ ಮತ್ತು ಸೇವೆಗಳನ್ನು ಒದಗಿಸಬೇಕು ಎಂದ ಸಚಿವರು, ಈ ಆಸ್ಪತ್ರೆಯಲ್ಲಿನ ಸಮಸ್ಯೆಗಳ ಕುರಿತು ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಅನಿರೀಕ್ಷಿತ ಭೇಟಿ ಸಂದರ್ಭದಲ್ಲಿ ಆಸ್ಪತ್ರೆಯ ರಾತ್ರಿ ಪಾಳಿಯ ಅಧಿಕಾರಿಗಳು, ಸಿಬ್ಬಂದಿಗಳಿದ್ದರು.

## 300 ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ

**ಮೈಸೂರು:** ಮಹಾನಗರ ಪಾಲಿಕೆಯ ಅನುದಾನದಡಿ ಚಾಮರಾಜ ವಿಧಾನ ಸಭಾ ಕ್ಷೇತ್ರದ 300 ಅರ್ಹ ಫಲಾನುಭವಿ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರವನ್ನು ಶಾಸಕ ಕೆ.ಹರೀಶ್‌ಗೌಡ ವಿತರಣೆ ಮಾಡಿದರು.

ನಗರದ ದೀವಾನ್ಸ್ ರಸ್ತೆಯ ಯಾದವ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ವಿತರಿಸಿದ ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಒಂದು ಮನೆ ಬೆಳಗಬೇಕಾದರೆ ಮಹಿಳೆ ಸಬಲಳಾಗಬೇಕು. ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯಾದಾಗ ಮಾತ್ರ ಇಡೀ ಕುಟುಂಬ ಸದೃಢವಾಗುತ್ತದೆ. ಇದೇ ನಮ್ಮ ಕಾಂಗ್ರೆಸ್ ಸರ್ಕಾರದ ಮೂಲ ಮಂತ್ರ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಹಿಳೆಯರಿಗಾಗಿ ಗೃಹಲಕ್ಷ್ಮಿ, ಶಕ್ತಿ ಯೋಜನೆ, ಉಚಿತ ಹೊಲಿಗೆ ತರಬೇತಿ, ಸ್ವ-ಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಇಂದು ನೀಡುತ್ತಿರುವ ಈ 300 ಹೊಲಿಗೆ ಯಂತ್ರಗಳು ಕೇವಲ ಯಂತ್ರಗಳಲ್ಲ, ಅವು 300 ಕುಟುಂಬಗಳ ಭವಿಷ್ಯಕ್ಕೆ ಸಹಕಾರಿ. ಮಹಿಳೆಯರ ಸಬಲೀಕರಣ ಕುರಿತು ನನ್ನ ಬದ್ಧತೆ ಕೇವಲ ಚುನಾವಣೆಯ ಭರವಸೆಯಲ್ಲ, ಅದು ನನ್ನ ಜೀವನದ ಧ್ಯೇಯ ಎಂದರು.



ಫಲಾನುಭವಿ ಮಹಿಳೆಯೊಬ್ಬರೂ ಮಾತನಾಡಿ, ಇಷ್ಟು ವರ್ಷಗಳಲ್ಲಿ ನಮ್ಮ ಕಷ್ಟಕ್ಕೆ ಸ್ಪಂದಿಸಿದ ಏಕೈಕ ಶಾಸಕರಾಗಿದ್ದಾರೆ. ಪುಣ್ಯ ಕ್ಷೇತ್ರಗಳ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸುವುದು, ವೈದ್ಯಕೀಯ ಚಿಕಿತ್ಸೆಗೆ, ಮಕ್ಕಳ ಶಿಕ್ಷಣಕ್ಕೆ, ಹಬ್ಬಗಳಿಗೆ ಸಹಾಯ ಮಾಡುತ್ತಾರೆ ಎಂದು ಭಾವುಕರಾದರು. ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಮಹಿಳಾ ಅಧ್ಯಕ್ಷೆ ಮಾಯಮ್ಮ, ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂಷಣ್, ಮಹಿಳಾ ಅಧ್ಯಕ್ಷ ಚಂದ್ರಕಲಾ, ಮಾಜಿ ಮಹಾಪೌರರಾದ ಪುಷ್ಪವಲ್ಲಿ, ಬಿ.ಕೆ.ಪ್ರಕಾಶ್, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ನಗರಪಾಲಿಕೆ ಮಾಜಿ ಸದಸ್ಯರಾದ ಪೈಲ್ವಾನ್ ಎಂ.ಶ್ರೀನಿವಾಸ್, ಡಿ.ನಾಗರಾಜ್, ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಮುಖಂಡರಾದ ಮಾರ್ಕೆಟ್ ದಿನೇಶ್, ಎಲ್.ಭಾಸ್ಕರ್ ಗೌಡ, ರಾಜಣ್ಣ ಅಶೋಕ್, ಶ್ರೀಧರ್ ಸೇರಿ ಇತರರು ಉಪಸ್ಥಿತರಿದ್ದರು.

ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಪಡೆಯ ಮುಖ್ಯಸ್ಥ ಬಿ.ಕೆ. ಸಿಂಗ್ ಹೇಳಿಕೆ

## ಅರಣ್ಯದಲ್ಲಿ ಎಷ್ಟೇ ಕಷ್ಟಗಳು ಬಂದರೂ ನೌಕರರು ಕುಗ್ಗಬಾರದು

**ಚಾಮರಾಜನಗರ,** ಅರಣ್ಯದಲ್ಲಿ ಸೇವೆ ಸಲ್ಲಿಸುವ ಅರಣ್ಯ ನೌಕರರು ಎಂತಹ ಕಷ್ಟಗಳು ಎದುರಾದರೂ ಧೈರ್ಯದಿಂದ ಎದುರಿಸುವ ಛಲ ಹೊಂದಿರಬೇಕು ಎಂದು ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಪಡೆಯ ಮುಖ್ಯಸ್ಥ ಬಿ.ಕೆ. ಸಿಂಗ್ ಹೇಳಿದರು

ಚಾಮರಾಜನಗರ ತಾಲ್ಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಬೂದಿಪಡಗದಲ್ಲಿ 72ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅರಣ್ಯ ನೌಕರರಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ಅರಣ್ಯ ಪ್ರದೇಶವಿದ್ದು, ಇಂತಹ ಅರಣ್ಯದಲ್ಲಿ ಸೇವೆ ಸಲ್ಲಿಸುವುದು ಪುಣ್ಯದ ಕೆಲಸ. ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ಅರಣ್ಯ ಇಲಾಖೆಯ ನೌಕರರು ಸಾರ್ವಜನಿಕರಿಗೂ ಅರಿವು ಮೂಡಿಸುವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಕಾಡುಗಳ್ಳ ವೀರಪ್ಪನ್ ಹಾವಳಿ ಇದ್ದ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಅರಣ್ಯ



ಅಧಿಕಾರಿಯಾಗಿ ಹಲವು ಸವಾಲುಗಳನ್ನು ಎದುರಿಸಿದ್ದೇನೆ. ಅಂದು ತಮಿಳುನಾಡು ಹಾಗೂ ಕರ್ನಾಟಕದ ಪೊಲೀಸ್ ಅಧಿಕಾರಿಗಳೊಂದಿಗೆ ಸೇರಿ ಹಲವು ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ್ದೆ. ಆ ಸಂದರ್ಭದಲ್ಲಿ ಸರ್ಕಾರದಿಂದ ನಮಗೆ ಡಬಲ್ ಬ್ಯಾರೆಲ್ ಬಂದೂಕುಗಳಂತಹ ಸೀಮಿತ ಸೌಲಭ್ಯಗಳಷ್ಟೇ ಲಭ್ಯವಿದ್ದವು. ಆದರೆ ಇಂದು ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿಯಾಗಿದೆ ಎಂದರು.

ಅರಣ್ಯದಲ್ಲಿ ವನ್ಯಜೀವಿಗಳ ಬೇಟೆ ಸೇರಿದಂತೆ ಅಕ್ರಮ ಚಟುವಟಿಕೆಗಳು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿ, ನಿಯಮಾನುಸಾರ ಕ್ರಮಕ್ಕೆ ಮುಂದಾಗಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಕಾರ್ಯಾಚರಣೆ ನಡೆಸಬೇಕಾದ ಪರಿಸ್ಥಿತಿ ಎದುರಾದರೂ, ಕಾರ್ಯಾಚರಣೆ ನಿಯಮಾನುಸಾರ ನಡೆದಿದ್ದರೆ ಅಧಿಕಾರಿಗಳು ನಿಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ ಎಂದು ಬಿ.ಕೆ. ಸಿಂಗ್ ಹೇಳಿದರು.

ಚಾಮರಾಜನಗರ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಡಾ. ಮಾಲತಿ ಪ್ರಿಯಾ, ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಚಾಮರಾಜನಗರ ಜಿಲ್ಲೆ ಹುಲಿಗಳ ತಾಣವಾಗಿ ಗುರುತಿಸಿಕೊಂಡಿದೆ. 72ನೇ ವನ್ಯಜೀವಿ ಸಪ್ತಾಹ ಆಚರಿಸುತ್ತಿರುವುದು ಸಂತಸದ ವಿಷಯ ಎಂದರು.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ 68 ಹುಲಿಗಳಿರುವುದು ಜಿಲ್ಲೆಯ ಹೆಮ್ಮೆಯ ಸಂಗತಿಯಾಗಿದೆ. ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಅರಣ್ಯ ಪಾಲಕರು ಯಾವೆಲ್ಲ ರೀತಿಯಲ್ಲಿ ಕಾಡು ಮತ್ತು ವನ್ಯಜೀವಿಗಳನ್ನು ಸಂರಕ್ಷಿಸಬಹುದು ಎಂಬುದರ ಕುರಿತು ಕಾರ್ಯಾಗಾರದಲ್ಲಿ ಅನುಭವ ಹೊಂದಿರುವ ಹಿರಿಯ ಅರಣ್ಯ ಅಧಿಕಾರಿಗಳು ಮಾರ್ಗದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು. ಕಾರ್ಯಾಗಾರದಲ್ಲಿ ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಕ (ವನ್ಯಜೀವಿ) ವಿಜಯಕುಮಾರ್ ಗೋಗಿ ಹಾಗೂ ಅಜಯ್ ಮಿಶ್ರಾ ಅವರು ವಿವಿಧ ವಿಷಯಗಳ ಕುರಿತು ವಿಚಾರ ಮಂಡಿಸಿದರು. ಈ ಸಂದರ್ಭದಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಶ್ರೀಪತಿ ಬಿ. ಎಸ್., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಪವನ್ ಕುಮಾರ್ ಮೀನಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹಾಲಕ್ಷ್ಮಿ ಸೇರಿದಂತೆ ಜಿಲ್ಲೆಯ ಅರಣ್ಯ ಅಧಿಕಾರಿಗಳು, ನೌಕರರು ಉಪಸ್ಥಿತರಿದ್ದರು.

### ವಿದ್ಯುತ್ ವ್ಯತ್ಯಯ

ಮೈಸೂರು:- ಹೆಚ್.ಡಿ.ಕೋಟೆ ಉಪವಿಭಾಗದ ವ್ಯಾಪ್ತಿಯಲ್ಲಿ 2ನೇ ತ್ರೈಮಾಸಿಕ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅಕ್ಟೋಬರ್ 07, ರಂದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ವಿದ್ಯುತ್




ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಹೆಚ್.ಡಿ.ಕೋಟೆ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಒಳಪ ಡುವ ಹೆಚ್.ಡಿ.ಕೋಟೆ ಟೌನ್ ಹಾಗೂ ಮೇಟಿಕುಪ್ಪೆ, ಚಕ್ಕೂಡ ನಹಳ್ಳಿ, ಭೀಮನಹಳ್ಳಿ, ಹಿರೇಹಳ್ಳಿ, ಅಣ್ಣೂರು, ಪಡುವಕೋಟೆ, ಸವೆ, ನಾಗನಹಳ್ಳಿ ಮತ್ತು ಚಿಕ್ಕಕೆರೆಯೂರು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ.

ಯರಹಳ್ಳಿ-ಹ್ಯಾಂಡ್‌ಪೋಸ್ಟ್ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯ ಹ್ಯಾಂಡ್‌ಪೋಸ್ಟ್, ಹೈರಿಗೆ, ಹೆಬ್ಬಲಗುಪ್ಪೆ ಮತ್ತು ನೂರುಲಕುಪ್ಪೆ ಪಂಚಾಯಿತಿ ವ್ಯಾಪ್ತಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲೂ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳಲಿದೆ ಎಂದು ಹೆಚ್.ಡಿ.ಕೋಟೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅ.11ರಿಂದ ದಸರಾ ಪುಸ್ತಕ ಮೇಳ



ಮೈಸೂರು: ದಸರಾ ಮಹೋತ್ಸವ–2026ರ ಅಂಗವಾಗಿ ಅ.11 ರಿಂದ 20ರವರೆಗೆ "ಮೈಸೂರು ದಸರಾ ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳವನ್ನು ನಗರದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಆಯೋಜಿಸಲಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ತಂಗಡಗಿ ಅವರು ಉದ್ಘಾಟಿಸುವರು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಹೇಳಿದರು.

ನಗರದ ಕಲಾಮಂದಿರ ಆವರಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪುಸ್ತಕ ಮೇಳದಲ್ಲಿ ಸುಮಾರು 70 ಪ್ರಕಾಶಕರು ಭಾಗವಹಿಸಲಿದ್ದು, 90 ಮಳಿಗೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಪ್ರತೀ ದಿನ ಬೆಳಿಗ್ಗೆ ಹೊಸ ಪುಸ್ತಕಗಳ ಬಿಡುಗಡೆ ಸಮಾರಂಭ ಇರುತ್ತದೆ. ಹಾಗೆಯೇ ಸಂಜೆ ಸೆಲ್ಫಿ ವಿತ್ ಸಾಹಿತಿ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅ.12 ರಂದು ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮುದ್ರಣವಾಗಿರುವ 12 ಕೃತಿಗಳ ಬಿಡುಗಡೆ ಮಾಡಲಾಗುವುದು. ಅ.13 ರಂದು ಅಮ್ಮ ರಾಮಚಂದ್ರರವರಿಂದ ಭಾವಗೀತೆ ಗಾಯನ, ಅ.14 ರಂದು ಯುವರಾಜ ಕಾಲೇಜು ವಿದ್ಯಾರ್ಥಿಗಳಿಂದ ನನ್ನ ಮೆಚ್ಚಿನ ಪುಸ್ತಕ ಓದು ಕಾರ್ಯಕ್ರಮ, ಅ.15 ರಂದು ಸಬ್ಬನಹಳ್ಳಿ ರಾಜು ಮತ್ತು ತಂಡದವತಿಯಿಂದ ಜನಪದ ಗೀತೆಗಳ ಗಾಯನ, ಅ.16 ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಕೆ.ಎಸ್.ಎನ್.ಟ್ರಸ್ಟ್ ನ ವತಿಯಿಂದ ಕವಿಗೋಷ್ಠಿ ಮತ್ತು ಕುಂಚ, ಕಾವ್ಯ ಗಾಯನ, ಅ.17ರಂದು ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ರಂಗಗೀತೆ ಗಾಯನ, ಅ.18 ರಂದು ಚಾಮರಾಜನಗರದ ಶ್ರೀ ನರಸಿಂಹಮೂರ್ತಿ ಸಿ.ಎಂ. ಮತ್ತು ಬಸವರಾಜು ಬಿ. ತಂಡದ ವತಿಯಿಂದ ಕನಕ ಕೀರ್ತನೆ – ತತ್ವಪದಗಳು ಹಾಗೂ ಅ.19 ರಂದು ತುಮಕೂರಿನ ಎ.ಎನ್. ತಿಮ್ಮಯ್ಯ ಅವರಿಂದ ದೇವಿ ಮಹಾತ್ಮ ಮೂಡಲಪಾಯ ಯಕ್ಷಗಾನ ಪ್ರಸಂಗ ನಡೆಯಲಿದೆ ಎಂದು ತಿಳಿಸಿದರು.

ಕಳೆದ ಬಾರಿಯಂತೆ ಈ ಬಾರಿಯೂ ಪುಸ್ತಕ ರಥದ ಮೂಲಕ ಪುಸ್ತಕ ಮೇಳಕ್ಕೆ ಪ್ರಚಾರ ನೀಡಲಾಗುವುದು. ಪುಸ್ತಕ ಮೇಳದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಗೆ ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಸಾಂಸ್ಕೃತಿಕ ವೇದಿಕೆ ಎಂದು ಹೆಸರಿಡಲಾಗಿದೆ. ಹಾಗೆಯೇ ಇತ್ತೀಚೆಗೆ ನಮ್ಮನಗಲಿದ ಖ್ಯಾತ ಕಾದಂಬರಿಗಾರ್ತಿ ಸಿ. ಎನ್. ಮುಕ್ತಾ ಹಾಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದು ಇತ್ತೀಚೆಗೆ ನಮ್ಮನಗಲಿದ ಮಡ್ಡಿಕೆರೆ ಗೋಪಾಲ್ ಅವರ ಹೆಸರಿನ ದ್ವಾರಗಳನ್ನು ನಿರ್ಮಿಸಲಾಗುವುದು. ಪ್ರತೀ ದಿನ ಪುಸ್ತಕ ಮೇಳದಲ್ಲಿ ಕವಿತೆ ವಾಚಿಸಿ ಗಿಡ ಗಿಟ್ಟಿಸಿ ಎಂಬ ಹೊಸ ಕಾರ್ಯಕ್ರಮವನ್ನು ಆಯೋಜಿಸಿದ್ದು, ಆಸಕ್ತ ಕವಿಗಳು ತಮ್ಮ ಕವಿತೆ ಓದಿ–ವಂದು ಗಿಡ ಪಡೆಯಬಹುದಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ದಸರಾ ಪುಸ್ತಕ ಮೇಳದ ಪೋಸ್ಟರ್ ಅನ್ನು ಬಿಡುಗಡೆಗೊಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ಎಸ್.ನಿರ್ಮಲ ಮಠಾಪತಿ, ಮೈಸೂರು ಜಿಲ್ಲಾ ಗ್ರಂಥಾಲಯ ಉಪ ನಿರ್ದೇಶಕಿ ಸಮ ಬಿ ಕೋಡಿಹಳ್ಳಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಕನ್ನಡ ಪುಸ್ತಕ ಪ್ರಾಧಿಕಾರ ಆಡಳಿತಾಧಿಕಾರಿ ಕೆ.ಬಿ.ಕಿರಣ್ ಸಿಂಗ್, ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ಮಹಾರಾಜ ಕಾಲೇಜು ಪ್ರಾಧ್ಯಾಪಕ ಪರಶುರಾಮ್ ಇದ್ದರು.

## ಅ.9ರಿಂದ ಸಾಮಾಜಿಕ ಪ್ರೇಕ್ಷಕರ ಸಮಾವೇಶ

ಮೈಸೂರು: ಅರ್ಸುಲಾಯ್ನ್ ಫ್ರಾನ್ಸಿಸ್ಕನ್ ಶಿಕ್ಷಣ ಸಂಸ್ಥೆ ಆರಂಭಿಸಿರುವರ ಸಾಮಾಜಿಕ ಪ್ರೇಕ್ಷಕರ ವೇದಿಕೆ ವತಿಯಿಂದ ಅ.9 ರಿಂದ 11 ರವರೆಗೆ ಜಿಲ್ಲೆಯ ಹುಣಸೂರು ತಾಲ್ಲೂಕಿನ ಸಂತ ಜೋಸೆಫ್ ವಿದ್ಯಾಸಂಸ್ಥೆ ಆವರಣದಲ್ಲಿ ವೇದಿಕೆ ಸಮಾವೇಶ ಆಯೋಜಿಸಲಾಗಿದೆ ಎಂದು ಕಾರ್ಯದರ್ಶಿ ಸಿಸ್ಟರ್ ಫಿಲೋಮಿನಾ ನೊರೊನ್ಹಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 10 ರಿಂದ 19 ವರ್ಷ ವಯಸ್ಸಿನ ಹದಿಹರೆಯದವರ ಸಮಗ್ರ ಬೆಳವಣಿಗೆ ಉತ್ತೇಜಿಸುವ ಉದ್ದೇಶ ಈ ಸಮಾವೇಶದ್ದಾಗಿದೆ. ಇದರ ಅಂಗವಾಗಿ ಅಂದು ಸಂಜೆ 4ಕ್ಕೆ ಶಾಲೆ ಆವರಣದಿಂದ ಸಾಮಾಜಿಕ ಸಮಸ್ಯೆ ಕುರಿತ ಜಾಗೃತಿ ಜಾಥಾ ನಡೆಯಲಿದೆ. ಈ ವೇಳೆ ತ್ಯಾಜ್ಯ ನಿರ್ವಹಣೆ ಕುರಿತ ಬೀದಿ ನಾಟಕ, ಬಾಲ್ಯ ವಿವಾಹ ನಿಷೇಧ ಅರಿವು, ಮಾದಕ ವ್ಯಸನ ತಡೆ ಜಾಗೃತಿ ಮೂಡಿಸಲಾಗುವುದು. ಮೈಸೂರು ಧರ್ಮ ಪ್ರಾಂತ್ಯದ ಬಿಷಪ್ ಡಾ. ಫ್ರಾನ್ಸಿಸ್ ಸೆರಾವೋ, ಅರ್ಸುಲಾಯ್ನ್ ಫ್ರಾನ್ಸಿಸ್ಕನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಮಿಲ್ಲಿ ಫರ್ನಾಂಡಿಸ್, ನಗರಸಭೆ ಆಯುಕ್ತರಾದ ಮಾನಸ, ತಹಶೀಲ್ದಾರ್ ಮಂಜುನಾಥ್ ಇನ್ನಿತರರು ಹಾಜರಿರುವರು ಎಂದರು.

ಬಳಿಕ ಸಂಜೆ ಶಿಕ್ಷಣ ಸಂಸ್ಥೆ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಅ. 10 ರಂದು ಅದೇ ಶಿಕ್ಷಣ ಸಂಸ್ಥೆಯಲ್ಲಿ ಸಮಾವೇಶದ ಆಶಯ ಲಾಂಛನ ಅನಾವರಣ, ಪುಸ್ತಕ ಬಿಡುಗಡೆ, 11 ರಂದು ಆರ್. ದೀಪ್ತಿ ಹಾಗೂ ಮಹೇಶ್ ಮಂಜುನಾಥ ನಾಯ್ಕ್ ಅವರಿಂದ ಪ್ರೇರಣಾದಾಯಕ ಅನುಭವ ಹಂಚಿಕೆ ನಡೆಯಲಿದೆ. ಅಲ್ಲದೆ, ಸಕಾರಾತ್ಮಕ ಬದಲಾವಣೆಗೆ ಶ್ರಮಿಸಿದ ವಿದ್ಯಾರ್ಥಿಗಳಿಗೆ ಯಂಗ್ ಸೋಷಿಯಲ್ ಚೇಂಜ್ ಏಜೆಂಟ್ ಪ್ರಶಸ್ತಿ ನೀಡಿ ಗೌರವಿಸಲಾಗುವುದೆಂದರು. ಮುಖ್ಯಸ್ಥರಾದ ಲಿನಿಯಾ ಸೆರಾವೋ, ಡಿಂಪಲ್ ಡಿಸೋಜಾ, ಪ್ರಮೀಳಾ, ಬಿಂದು ಎಲಿಜಬೆತ್, ಗೋವಿಂದೇಗೌಡ, ವಾಣಿ ಇದ್ದರು.



## ಗುಡುಗು ಸಹಿತ ಭಾರೀ ಮಳೆ



**▸▸ ದೊಡ್ಡತುಪ್ಪೂರು ಬಳಿ ರಸ್ತೆ ಜಲಾವೃತಗೊಂಡು ಸವಾರರ ಪರದಾಟ**

**▸▸ ಜನಜೀವನ ಸಂಪೂರ್ಣ ಅಸ್ತವ್ಯಸ್ತ**

ಗುಂಡ್ಲುಪೇಟೆ: ತಾಲೂಕಿನಲ್ಲಿ ಸುರಿದ ಗುಡುಗು ಸಹಿತ ಭಾರೀ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು, ಪ್ರಮುಖ ರಸ್ತೆಗಳು ಜಲಾವೃತವಾಗಿ ವಾಹನ ಸವಾರರು ತೀವ್ರ ಪರದಾಟ ಅನುಭವಿಸುವಂತಾಗಿದೆ.

ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಸಂಜೆ ಏಕಾಏಕಿ ಆರಂಭವಾದ ಮಳೆಯ ಅಬ್ಬರಕ್ಕೆ ತಾಲೂಕಿನ ದೊಡ್ಡತುಪ್ಪೂರು ಬಳಿ ಗುಂಡ್ಲುಪೇಟೆ–ಚಾಮರಾಜನಗರ ಮುಖ್ಯ ರಸ್ತೆಯ ಮೇಲೆ ಮಳೆ ನೀರು ನುಗ್ಗಿ ಸಂಪೂರ್ಣ ಜಲಾವೃತಗೊಂಡಿತು. ರಸ್ತೆಯ ಮೇಲೆ ಅತಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿದ್ದರಿಂದ ದ್ವಿಚಕ್ರ ವಾಹನ ಸವಾರರು ಹಾಗೂ ಕಾರು ಚಾಲಕರು ವಾಹನಗಳನ್ನು ಮುಂದೆ ಕೊಂಡೊಯ್ಯಲು ಹರಸಾಹಸ ಪಡಬೇಕಾಯಿತು.

ರಸ್ತೆಸಂಪೂರ್ಣ ಮುಳುಗಡೆಯಾಗಿದ್ದರಿಂದ ಕೆಲಕಾಲ ವಾಹನ ಸಂಚಾರಕ್ಕೆ ವ್ಯತ್ಯಯ ಉಂಟಾಯಿತು. ಮಳೆಯ ಪರಿಣಾಮ ತಾಲೂಕಿನ ಹಲವೆಡೆ ಕೆರೆ–ಕುಂಟೆಗಳಿಗೆ ನೀರು ಹರಿದುಬಂದಿದ್ದರೂ, ಪ್ರಮುಖ ಹೆದ್ದಾರಿಗಳು ಜಲಾವೃತಗೊಳ್ಳುತ್ತಿರುವುದರಿಂದ ವಾಹನ ಸವಾರರು ಪ್ರಯಾಣ ಮಾಡುವಾಗ ಎಚ್ಚರಿಕೆ ವಹಿಸುವಂತೆ ಹಾಗೂ ಸಂಬಂಧಪಟ್ಟ ಇಲಾಖೆಗಳು ತಕ್ಷಣವೇ ರಸ್ತೆಗಳಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

## 72ನೇ ವನ್ಯಜೀವಿ ಸಪ್ತಾಹ

**ಹನೂರು** :ಮಹದೇಶ್ವರ ಬೆಟ್ಟ ವನ್ಯಜೀವಿ ವಲಯದ ಕಾಡಂಚಿನ ಗ್ರಾಮವಾದ ಗೊರಸಾಣೆ ಸರ್ಕಾರಿ ಶಾಲೆಯಲ್ಲಿ 72ನೇ ವನ್ಯಜೀವಿ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ವಲಯ ಅರಣ್ಯಾಧಿಕಾರಿ ರವಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವನ್ಯಜೀವಿ ಸಂರಕ್ಷಣೆ ಹಾಗೂ ಪರಿಸರ ಸಮತೋಲನ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ಕಾಡಂಚಿನ ಗ್ರಾಮಸ್ಥರು ಅರಣ್ಯ ಮತ್ತು ವನ್ಯಜೀವಿಗಳೊಂದಿಗೆ ಸಹಬಾಳ್ವೆ ನಡೆಸುವುದು ಅತ್ಯಗತ್ಯ ಎಂದರು. ಕಾರ್ಯಕ್ರಮದಲ್ಲಿ ವನ್ಯಜೀವಿಗಳ ಆವಾಸ ಸ್ಥಾನ, ಆಹಾರ ಸರಪಳಿ, ಮಾನವ–ವನ್ಯಜೀವಿ ಸಂಘರ್ಷ ತಡೆ ಮತ್ತು ಸಹಬಾಳ್ವೆಯ ಕುರಿತು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಅರಿವು ಮೂಡಿಸಲಾಯಿತು. ಪರಿಸರ ಸಂರಕ್ಷಣೆಯ ಸಂಕೇತವಾಗಿ ಸಸಿ ನೆಡಲಾಯಿತು.

**ಸಾಂಸ್ಕೃತಿಕ ಸೊಗಡು:**

ಕಾರ್ಯಕ್ರಮದಲ್ಲಿ ಬುಡಕಟ್ಟು ಸಂಸ್ಕೃತಿಯ ಅನಾವರಣ ವಿಶೇಷವಾಗಿ ಗಮನ ಸೆಳೆಯಿತು. ಗ್ರಾಮದ ಹಿರಿಯ ಮಹಿಳೆಯರಾದ ದುಂಡಮ್ಮ, ಕೆಂಪಮ್ಮ, ಮಾದಿ, ಚಿನ್ನಮ್ಮ ಅವರು ಸಾಂಪ್ರದಾಯಿಕ ಸೋಬಾನ ಪದಗಳನ್ನು ಹಾಡಿದರು. ಯುವಕರು ಹಾಗೂ ಮಕ್ಕಳು ಮಹದೇಶ್ವರ ಭಕ್ತಿ ಗೀತೆ ಹಾಗೂ ಗೋರುಕನ ಕುಣಿತ ಪ್ರದರ್ಶಿಸಿ ಮೆರುಗು ತಂದರು. ವಿದ್ಯಾರ್ಥಿಗಳಿಗಾಗಿ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಮಕ್ಕಳು ಅರಣ್ಯ, ಪ್ರಾಣಿಗಳು ಮತ್ತು ಪ್ರಕೃತಿ ಸಂರಕ್ಷಣೆಯ ಕುರಿತು ಚಿತ್ರಗಳನ್ನು ಬಿಡಿಸಿ ತಮ್ಮ ಅರಿವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಗಿರಿಯ ಭದ್ರ, ಶಿಕ್ಷಕರಾದ ಮಹೇಶ್, ರಂಗಸ್ವಾಮಿ ಎನ್. ಗಸ್ತು ಅರಣ್ಯಾಧಿಕಾರಿಗಳಾದ ಮಹಾಂತೇಶ್, ಬೀರಲಿಂಗಪ್ಪ, ಧರ್ಮರಾಜ್ ಸೇರಿದಂತೆ ಅರಣ್ಯ ಇಲಾಖೆ ಸಿಬ್ಬಂದಿ, ಗ್ರಾಮ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.



# ದಾಖಲೆಗಳಿಲ್ಲದೆ ಆದಿವಾಸಿಗಳು ಅತಂತ್ರ

## ಸರ್ಕಾರದ ಸೌಲಭ್ಯಗಳ ಪಡೆಯುವಲ್ಲಿ ವಿಫಲ | ಅಧಿಕಾರಿಗಳ ನಿರ್ಲಕ್ಷ್ಯ ಆರೋಪ

**▸▸ ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ಹಾಗೂ ವ್ಯಕ್ತಿಯ ಗುರುತನ್ನು ಅಧಿಕೃತಗೊಳಿಸಲು ಜಾರಿಗೆ ತಂದಿರುವ ಆಧಾರ್ ಕಾರ್ಡ್ ವ್ಯವಸ್ಥೆಯನ್ನು ಆದಿವಾಸಿಗಳಿಗೆ ಪರಿಚಯಿಸಿ, ಆಧಾರ್ ಕಾರ್ಡ್ ಮಾಡಿಸಿ ಕೊಡುವಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ವಿಫಲವಾಗಿದ್ದಾರೆ.

ಆಧಾರ್ ಕಾರ್ಡ್ ಇಲ್ಲದೆ ಸರ್ಕಾರಿ ಸೌಲಭ್ಯಗಳಿಂದ ದೂರವಾಗಿರುವ ಕುಟುಂಬಗಳ ನಡುವೆ, ಆಹಾರ ಭದ್ರತೆಗೆ ಆಧಾರವಾಗಬೇಕಿದ್ದ ಪಡಿತರ ಚೀಟಿಯೂ ಇಲ್ಲದಿರುವುದು ಮತ್ತಷ್ಟು ಸಂಕಷ್ಟಕ್ಕೆ ಕಾರಣವಾಗಿದೆ. ಅರ್ಹ ಆದಿವಾಸಿ ಕುಟುಂಬಗಳಿಗೆ ಆಧಾರ್ ಹಾಗೂ ರೇಷನ್ ಕಾರ್ಡ್ ಒದಗಿಸುವಲ್ಲಿ ಸಂಬಂಧಪಟ್ಟವರು ನಿರ್ಲಕ್ಷ್ಯ ವಹಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ವ್ಯಕ್ತಿಯ ಜಾತಿ, ಕುಟುಂಬಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯನ್ನು ದೃಢೀಕರಿಸುವ ಪ್ರಮುಖ ದಾಖಲೆಗಳಾದ ಜಾತಿ ಹಗೂ ಆದಾಯ ಪ್ರಮಾಣ ಪತ್ರಗಳಿಲ್ಲದೆ ಬುಡಕಟ್ಟು ಕುಟುಂಬಗಳು ಪರದಾಡುತ್ತಿವೆ. ಪ್ರಮಾಣ ಪತ್ರಗಳಿಲ್ಲದೇ ಅರ್ಹ ಫಲಾನುಭವಿಗಳಿಗೆ ದೊರೆಯಬೇಕಾದ ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಅಡಚಣೆ ಉಂಟಾಗುತ್ತಿದೆ. ದಾಖಲೆಗಳ ಕೊರತೆಯಿಂದಾಗಿ ಸರ್ಕಾರಿ ಯೋಜನೆಗಳಿಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲೂ ಆದಿವಾಸಿ ಕುಟುಂಬಗಳು ಸಮಸ್ಯೆ ಎದುರಿಸುತ್ತಿದ್ದು, ಸಂಬಂಧಪಟ್ಟ ಇಲಾಖೆಗಳ ದಿವ್ಯನಿರ್ಲಕ್ಷ್ಯವನ್ನು ತೋರುತ್ತಿದೆ.

ಆಧಾರ್, ಪಡಿತರ ಚೀಟಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರಗಳಂತಹ ಮೂಲ ದಾಖಲೆಗಳೇ ಇಲ್ಲದಿರುವುದು ಆದಿವಾಸಿ ಕುಟುಂಬಗಳನ್ನು ಸರ್ಕಾರಿ ಸೌಲಭ್ಯಗಳ ವ್ಯಾಪ್ತಿಯಿಂದ ದೂರ ಉಳಿಯುವಂತೆ ಮಾಡುತ್ತಿದೆ. ಸ್ಥಳೀಯವಾಗಿ ಡಿ.ಬಿ.ಕುಪ್ಪೆ ವ್ಯಾಪ್ತಿಯ ಕೆಲ ಹಾಡಿಗಳಲ್ಲಿ ಸಮೀಕ್ಷೆ ನಡೆಸಿರುವ ವರ್ತಮಾನ ದಿನಪತ್ರಿಕೆ, ದಾಖಲೆಗಳಿಲ್ಲದ ಆದಿವಾಸಿಗಳ ಕುಟುಂಬಗಳನ್ನು ಗುರುತಿಸಿದೆ.


ಸಂಗ್ರಹ ಚಿತ್ರ

### ಜಾತಿ, ಆದಾಯ ಪ್ರಮಾಣ ಪತ್ರವಿಲ್ಲದ 36 ಮಂದಿ

**ಆನೆಮಾಳ ಹಾಡಿ**

ಜಯಾ ಕೋಂ ಕುಟ್ಟ, ಬಿಜು ಬಿನ್ ಕುಟ್ಟ, ಸಿಜು ಬಿನ್ ಬಾಲ, ಶಾಂತ ಕೋಂ ಚಿನ್ನ, ಸಿದ್ದ ಬಿನ್ ಲೇ. ಸಿದ್ದಯ್ಯ, ಅಯ್ಯಪ್ಪ ಬಿನ್ ಲೇ. ಸಿದ್ದಯ್ಯ, ಮಿನಿ ಕೋಂ ಚಂದ್ರ, ಶಿಲ್ಪಾ ಕೋಂ ಬಿನು, ಶಿವ ಲೇ. ಚಿಟ್ಟಿಯಾರ್, ಪ್ರೇಮ ಕೋಂ ಪುಟ್ಟ, ಸುರೇಶ ಬಿನ್ ಲೇ. ಕುಳ್ಳ, ಕೆಂಚ ಬಿನ್ ಲೇ. ಕೆಂಚ, ರಾಜು ಬಿನ್ ಪುಟ್ಟ, ಭೂಮಿಕಾ ಬಿನ್ ಪುಟ್ಟ, ಕೃಷ್ಣ ಬಿನ್ ಕರಿಯ ಹಾಗೂ ಪಾರ್ವತಿ ಕೋಂ ಮಾಸ್ತಿ.

**ತಿಮ್ಮನಹೊಸಹಳ್ಳಿ ಹಾಡಿ**

ಖುಷಿ, ಪ್ರೀತಮ್ ಕುಮಾರ್, ಗೀತಾ, ರಾಮು, ಸರೋಜ, ಮನೋಜ್. ಅಜಿತ್, ಸಂದೀಪ್, ಸುರೇಶ್, ಮುರುಳಿ, ರತ್ನಮ್ಮ, ಕಾವ್ಯ.

**ಮಲೆಯೂರು ಹಾಡಿ**

ಪವಿತ್ರಾ, ರಘು, ಧನುಷ್, ಸೋನಾ, ಮಾಸ್ತಿ, ಸುಧಾ, ಕೃಷ್ಣ, ಮಣಿಯ.

### ಆಧಾರ್ ಕಾರ್ಡ್ ಇಲ್ಲದ ನಿವಾಸಿಗಳು

**ಗೋಳೂರು ಹಾಡಿ**

ಕೀರ್ತನಾ ಬಿನ್ ಕಾಳಪ್ಪ, ನಿಖಿಲ್ ಬಿನ್ ಕಾಳಪ್ಪ, ಮಾದೇವ ಬಿನ್ ರವಿ, ಸ್ವಾಮಿ ಬಿನ್ ಕಾಳಪ್ಪ, ಗಗನಾ ಬಿನ್ ಕಾಳಪ್ಪ, ಅಭಿಷೇಕ್ ಬಿನ್ ಕೃಷ್ಣ, ಸೂರ್ಯ ಬಿನ್ ಗಣೇಶ್, ಶ್ವೇತಾ ಬಿನ್ ಕಾಳಪ್ಪ, ವಿಸ್ಮಯ ಬಿನ್ ಮಹೇಶ್, ಚಂದ್ರ ಬಿನ್ ಚಿನ್ನ, ಸುರೇಶ ಬಿನ್ ಕೆಂಚ, ರಾಜು ಬಿನ್ ಚೌಡಯ್ಯ, ಜಾನಕಿ ಕೋಂ ಆನಂದ, ನಿತ್ಯ ಬಿನ್ ಸುರೇಶ, ಚಂದ್ರ ಬಿನ್ ಮಾರ, ಪಾರ್ವತಿ ಕೋಂ ಗಣೇಶ, ಹರ್ಷಿತಾ ಬಿನ್ ಮಣಿ ಹಾಗೂ ಹರ್ಷಿತಾ ಕೋಂ ಮಣಿ.

**ಆನೆಮಾಳ ಹಾಡಿ**

ಪ್ರೇಮ ಕೋಂ ಲೇ. ಪುಟ್ಟ, ಪಾರ್ವತಿ ಕೋಂ ಮಾಸ್ತಿ, ರಾಜು ಕೋಂ ಲೇ. ಪುಟ್ಟ, ಸುರೇಶ ಬಿನ್ ಕುಳ್ಳ, ಸಿಜು ಬಿನ್ ಲೇ. ಬಾಲ ಹಾಗೂ ಶಿಲ್ಪಾ ಕೋಂ ಸಿಜು.

**ತಿಮ್ಮನಹೊಸಹಳ್ಳಿ ಹಾಡಿ**

ರಾಮ, ಮನೋಜ್, ಸಂಜು, ಸಂಜಯ್, ಅಜಿತ್, ಅಜೇಯ, ಸರೋಜ, ಸುರೇಶ ಹಾಗೂ ಮುರುಳಿ.

### ರೇಷನ್ ಕಾರ್ಡ್ ಇಲ್ಲದ ಹಾಡಿ ನಿವಾಸಿಗಳು

**ಗೋಳೂರು ಹಾಡಿ**

ಪುಟ್ಟಿ ಕೋಂ ರವಿ, ಶಾಂತಿ ಕೋಂ ಕುಮಾರ, ಪುಟ್ಟಿ ಕೋಂ ಕಾಳಪ್ಪ, ಜ್ಯೋತಿ ಕೋಂ ಕೃಷ್ಣ, ಪಾರ್ವತಿ ಕೋಂ ಸುರೇಶ, ಬಸಮ್ಮ ಕೋಂ ಲೋಕೇಶ, ಗೌರಿ ಕೋಂ ಕುಮಾರ, ಶ್ವೇತಾ ಕೋಂ ಬಸವರಾಜು, ಜ್ಯೋತಿ ಕೋಂ ರಾಜು, ಭವಾನಿ ಕೋಂ ಸುರೇಶ, ಧೀನಾ ಕೋಂ ರಾಜೇಶ, ಸವಿತಾ ಕೋಂ ರಾಜೇಶ, ಮಂಜುಳಾ ಕೋಂ ಶಂಕರ್.

**ತಿಮ್ಮನಹೊಸಹಳ್ಳಿ ಹಾಡಿ**

ರತ್ನಮ್ಮ ಕೋಂ ಬಸವರಾಜು, ಕುಮಾರಿ ಬಿನ್ ಲೇ. ಕಾಳ, ಸಂಧ್ಯಾ ಕೋಂ ಮಣಿ, ಸರೋಜ ಕೋಂ ಲೇ. ನಾರಾಯಣ, ಗೀತಾ ಕೋಂ ರಾಮ.

**ಮಲೆಯೂರು ಹಾಡಿ**

ಪವಿತ್ರ ಕೋಂ ರಘು, ಶಾಂತಿ ಕೋಂ ಕೃಷ್ಣ.

## ಟೆಂಡರ್ ಕಂ ಬಹಿರಂಗ ಹರಾಜು

ಮಂಡ್ಯ.:– ಮಂಡ್ಯ ಜಿಲ್ಲೆಯ ಮಳವಳ್ಳಿ ವಲಯ ವ್ಯಾಪ್ತಿಯಲ್ಲಿ ದಾಖಲಾದ ವಿವಿಧ ಅಬಕಾರಿ ಪ್ರಕರಣಗಳ ಜಪ್ತುಪಡಿಸಿಕೊಂಡು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುವ ವಿವಿಧ ಮಾದರಿಯ ವಾಹನಗಳನ್ನು ವಲಯ ಕಛೇರಿಯ ಆವರಣದಲ್ಲಿ ಟೆಂಡರ್ ಕಂ ಬಹಿರಂಗ ಹರಾಜು ಮಾಡಲಾಗುವುದು.

ಸದರಿ ವಾಹನಗಳು ಹೇಗಿದೆಯೋ ಯಥಾಸ್ಥಿತಿಯಲ್ಲಿ ಸೂಚಿಸಿರುವ ಹಾಗೆ ಷರತ್ತಿಗೊಳಪಟ್ಟು ಪ್ರಕಟಣೆಯನ್ನು ಹೊರಡಿಸಲಾಗಿದೆ. ಆಸಕ್ತಿಯುಳ್ಳ ಬಿಡ್ಡುದಾರರು ದಿನಾಂಕ: 09–10–2026 ರಂದು ಬೆಳಿಗ್ಗೆ 11.00 ಗಂಟೆಗೆ ಮಳವಳ್ಳಿ ವಲಯದಲ್ಲಿ ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಪಾಲ್ಗೊಳ್ಳಬಹುದು. ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಸಾರ್ವಜನಿಕರು ವಾಹನ ಇರುವ ಆಯಾ ವಲಯ ಕಛೇರಿಗಳಲ್ಲಿ ವಾಹನಗಳ ಇರುವ ಸ್ಥಳದಲ್ಲಿ ಕಛೇರಿ ಸಮಯದಲ್ಲಿ ವೀಕ್ಷಿಸಬಹುದಾಗಿದೆ. ಹರಾಜು ನಿರ್ವಹಣಾಧಿಕಾರಿಯಾಗಿ ಸಂಬಂಧಪಟ್ಟ ಉಪವಿಭಾಗದ ಅಬಕಾರಿ ಉಪ ಅಧೀಕ್ಷಕರುಗಳನ್ನು ನಿಯೋಜಿಸಿದೆ. ಸಂಬಂಧಪಟ್ಟ ವಲಯ ಕಛೇರಿಯ ಅಬಕಾರಿ ನಿರೀಕ್ಷಕರು ಹಾಗೂ ಅಬಕಾರಿ ಉಪ ನಿರೀಕ್ಷಕರುಗಳು ತಮ್ಮ ಸಿಬ್ಬಂದಿಯೊಡನೆ ಹರಾಜು ಕಾರ್ಯ ನಿರ್ವಹಿಸಲು ಆದೇಶಿಸಲಾಗಿದೆ ಎಂದು ಮಂಡ್ಯ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ಪ್ರಿಂಟ್ ಫುಟ್ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯಕ್ಕೆ 4ನೇ ಸ್ಥಾನ



**ಗುಂಡ್ಲುಪೇಟೆ:** ಪಂಜಾಬ್ ರಾಜ್ಯದ ಚಂಡೀಗಢ ಜಿಲ್ಲೆಯ ರೂಪನಗರದಲ್ಲಿ ಅ.1ರಿಂದ 4ರವರೆಗೆ ನಡೆದ ರಾಷ್ಟ್ರೀಯ ಮಟ್ಟದ ಕ್ಲಬ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ತಂಡ ಅತ್ಯುತ್ತಮ ಪ್ರದರ್ಶನ ನೀಡಿ ನಾಲ್ಕನೇ ಸ್ಥಾನ ಪಡೆದು ರಾಜ್ಯದ ಕೀರ್ತಿ ಹೆಚ್ಚಿಸಿದೆ.

ಅಮೆರಿಕನ್ ಫುಟ್ಬಾಲ್ ಫೆಡರೇಷನ್ ಆಫ್ ಇಂಡಿಯಾ ಹಾಗೂ ಅಮೆರಿಕನ್ ಫುಟ್ಬಾಲ್ ಅಸೋಸಿಯೇಷನ್, ಚಂಡೀಗಢ ಇವರ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರಮಟ್ಟದ ಪಂದ್ಯಾವಳಿಯಲ್ಲಿ ದೇಶದ ವಿವಿಧ ರಾಜ್ಯಗಳ ತಂಡಗಳು ಪಾಲ್ಗೊಂಡಿದ್ದವು. ಆರಂಭದಿಂದಲೂ ಆತ್ಮವಿಶ್ವಾಸ ಹಾಗೂ ಕ್ರೀಡಾಸ್ಫೂರ್ತಿಯಿಂದ ಸೆಣಸಿದ ಕರ್ನಾಟಕ ತಂಡ, ಬಲಿಷ್ಠ ಎದುರಾಳಿಗಳ ವಿರುದ್ಧ ಉತ್ತಮ ಆಟ ಪ್ರದರ್ಶಿಸಿ ಗಮನ ಸೆಳೆಯಿತು. ಬಾಲಕಿಯರ ವಿಭಾಗದಲ್ಲಿ ಯಶಸ್ವಿನಿ ಎಂ. ತಂಡದ ನಾಯಕಿಯಾಗಿ ತಂಡವನ್ನು ಮುನ್ನಡೆಸಿದರು. ದೀಪ್ತಿ, ತ್ರಿಷಿಕಾ, ಧನುಶ್ರೀ, ಜಸು, ಪ್ರೀತಮ್, ಇಂಚರ ಎಚ್.ಎನ್., ಲಿಖಿತಾ ಬಿ.ಎಂ., ಹೃದಯ, ಜೀವಿತ, ರಕ್ಷಾ, ಚೈತನ್ಯ, ಭೂಮಿಕಾ, ಚಾರ್ವಿ, ಬುಶ್ರಾ ಖಾನ್, ಅಭಿನಿತ್, ಕೌನೈನ್ ಅಲಿ, ಶಮಿತಾ ಸೇರಿದಂತೆ ಹಲವು ಆಟಗಾರರು ತಂಡದ ಪರವಾಗಿ ಉತ್ತಮ ಪ್ರದರ್ಶನ ನೀಡಿದರು.

ತಂಡದಲ್ಲಿ ಮಹಾರಾಣಿ ಕಾಲೇಜು, ಮೈಸೂರು; ಲಿಟಲ್ ಫ್ಲವರ್ ಸ್ಕೂಲ್, ಬೇಗೂರು; ರೇಡಿಯನ್ ಪಿಯು ಕಾಲೇಜು ಹಾಗೂ ಶಿವಮೊಗ್ಗ ಜಿಲ್ಲೆ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳು ಮತ್ತು ಜಿಲ್ಲೆಗಳ ಆಟಗಾರರು ಭಾಗವಹಿಸಿದ್ದರು. ಕರ್ನಾಟಕ ತಂಡದ ವ್ಯವಸ್ಥಾಪಕರಾಗಿ ಹರೀಶ್ ಕಾಂಬ್ಳೆ ಹಾಗೂ ತರಬೇತುದಾರರಾಗಿ ನಾಗೇಂದ್ರ ಕಾರ್ಯನಿರ್ವಹಿಸಿ ಆಟಗಾರರಿಗೆ ಸೂಕ್ತ ಮಾರ್ಗದರ್ಶನ ನೀಡಿದರು. ಆಟಗಾರರ ಸಂಘಟಿತ ಪ್ರಯತ್ನ, ಶಿಸ್ತುಬದ್ಧ ಆಟ ಹಾಗೂ ಕ್ರೀಡಾಸ್ಫೂರ್ತಿಯಿಂದ ರಾಜ್ಯ ತಂಡ ರಾಷ್ಟ್ರೀಯ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಲು ಸಾಧ್ಯವಾಯಿತು. ಕರ್ನಾಟಕ ತಂಡದ ಈ ಸಾಧನೆಗೆ ಕರ್ನಾಟಕ ರಾಜ್ಯ ಅಮೆರಿಕನ್ ಫುಟ್ಬಾಲ್ ಫೆಡರೇಷನ್‌ನ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸಿ, ಆಟಗಾರರು, ತಂಡದ ವ್ಯವಸ್ಥಾಪಕರು ಹಾಗೂ ತರಬೇತುದಾರರಿಗೆ ಶುಭ ಹಾರೈಸಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಆಟಗಾರರು ತೋರಿದ ಈ ಸಾಧನೆ, ರಾಜ್ಯದಲ್ಲಿ ಅಮೆರಿಕನ್ ಫುಟ್ಬಾಲ್ ಕ್ರೀಡೆಗೆ ಹೊಸ ಉತ್ಸಾಹ ಮೂಡಿಸಿದೆ.

**ಕೆರೆಹಳ್ಳಿ ಗ್ರಾಮದಲ್ಲಿ ಒಣಗಿದ್ದ ಜೋಳವನ್ನು ವೀಕ್ಷಿಸಿ ಮಾಹಿತಿ**

## ಬರ ಅಧ್ಯಯನ: 68 ಸಾವಿರ ಹೆಕ್ಟೇರ್ ತೆರೆದಿಟ್ಟ ರೈತರು

ಚಾಮರಾಜನಗರ: ಜಿಲ್ಲೆಯಲ್ಲಿ ಸೋಮವಾರದಿಂದ ಎರಡು ದಿನಗಳ ಕಾಲ ಕೇಂದ್ರ ಬರ ಅಧ್ಯಯನ ತಂಡವು ಬೆಳೆ ಹಾನಿ ವೀಕ್ಷಣೆ ಮಾಡುತ್ತಿದ್ದು, ನಿನ್ನೆ ಕೆರೆಹಳ್ಳಿ ಗ್ರಾಮದಲ್ಲಿ ಒಣಗಿದ್ದ ಜೋಳವನ್ನು ವೀಕ್ಷಿಸಿ ಮಾಹಿತಿ ಪಡೆದರು.

ಡಾ.ಸುದಾಮ್ ಭಾಗ್ ನೇತೃತ್ವದ ತಂಡ ಬರ ವೀಕ್ಷಣೆ ಮಾಡುತ್ತಿದ್ದು, ಜಿಲ್ಲಾಧಿಕಾರಿ ಶ್ರೀರೂಪಾ, ಜಿಪಂ ಸಿಇಒ ಮೋನಾ ರೋತ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಭಾನುಪ್ರಕಾಶ್ ಅದ್ಯಯನ ತಂಡಕ್ಕೆ ವಿವರವಾದ ಮಾಹಿತಿ ಒದಗಿಸುತ್ತಿದ್ದಾರೆ.

**ಎರಡು ತಾಸು ತಡವಾಗಿ ಬಂದ ಅಧ್ಯಯನ ತಂಡ:** ಚಾಮರಾಜನಗರ ತಾಲೂಕಿನ ಕೆರೆಹಳ್ಳಿಯಲ್ಲಿ ಸೋಮವಾರ ಬೆಳಗ್ಗೆ 11:50ಕ್ಕೆ ಅಧ್ಯಯನ ಆರಂಭವಾಗಬೇಕಿತ್ತು. ಆದರೆ, ಮಧ್ಯಾಹ್ನ 1:30ಕ್ಕೆ ಬಂದಿದ್ದರಿಂದ ರೈತರು ಬಿಸಿಲಿನಲ್ಲಿ ಕಾದು ಕಾದು ಬಸವಳಿದರಲ್ಲದೆ, ಬೇಸರಗೊಂಡರು. ಬೆಳಗ್ಗೆ 10 ಗಂಟೆಯಿಂದಲೇ ಬಂದು ಜಮೀನಿನಲ್ಲಿ ಕಾದು ಕುಳಿತಿದ್ದೇವೆ. ಇಷ್ಟು ತಡ ಮಾಡಿದರೇ ಹೇಗೆ ಎಂದು ಅಧಿಕಾರಿಗಳ ತಂಡಕ್ಕೆ ರೈತರು ಪ್ರಶ್ನಿಸಿ, ಅಸಮಾಧಾನ ವ್ಯಕ್ತಪಡಿಸಿದರು.



**ಬೆಳೆಸಾಲ ಮನ್ನಾ ಮಾಡಿ:** ಕೆರೆಹಳ್ಳಿ ಗ್ರಾಮದ ರೈತ ಮಾದಪ್ಪ ಎಂಬುವರ ಜಮೀನಿಗೆ ಭೇಟಿ ಕೊಟ್ಟ ಅಧ್ಯಯನ ತಂಡವು ಒಣಗಿದ್ದ ಫಸಲನ್ನು ವೀಕ್ಷಿಸಿತು. ಸುತ್ತಮುತ್ತಲಿನ ಗ್ರಾಮದಲ್ಲಿ ಮೇವಿನ ಲಭ್ಯತೆ, ಮಳೆ ಪ್ರಮಾಣ, ಬಿತ್ತನೆ ಮಾಡಿದ್ದ ಬೆಳೆಗಳ ವಿವರವನ್ನು ಪಡೆದರು. ಎಷ್ಟು ಬಂಡವಾಳ ಹಾಕಲಾಗಿತ್ತು, ನಿರೀಕ್ಷಿದ ಆದಾಯ ಮತ್ತು ಈಗಿನ ಬೆಳೆ ಸ್ಥಿತಿ ವಿವರಗಳನ್ನು ರೈತರು ನೀಡಿದರು. ಇದೇ ವೇಳೆ, ರೈತ ಚಿನ್ನಸ್ವಾಮಿ, ಮಲ್ಲಣ್ಣ, ಮಾದಪ್ಪ ಎಂಬುವರು ಮಾತನಾಡಿ, "ರಾಜಕೀಯ ಕಾರಣ ಬದಿಗಿಟ್ಟು ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರದೇ ಸೂಕ್ತ ಪರಿಹಾರ ನೀಡಬೇಕು" ಎಂದು ಒತ್ತಾಯಿಸಿದರು. ಜಿಲ್ಲಾ ಪಂಚಾಯತ್ ಸಿಇಒ ಮೋನಾ ರೋತ್ ಮಾತನಾಡಿದರು. ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು"

## 28 ಕುಂದುಕೊರತೆ ಅರ್ಜಿ ಸ್ವೀಕಾರ




**ಮೈಸೂರು:** ಮಹಾನಗರ ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್ ಅಧ್ಯಕ್ಷತೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ನಡೆದ ಕುಂದು ಕೊರತೆ ಸಭೆಯಲ್ಲಿ 28 ದೂರುಗಳು ಸಲ್ಲಿಕೆಯಾದವು.

ಸಿ.ಆರ್. 4, ಈ ಖಾತೆ 12, ಯುಎಲ್ ಎಮ್ ಎಸ್– 7 ಹಾಗೂ ಇತ್ಯಾದಿ 5 ದೂರುಗಳು ಸೇರಿ ಒಟ್ಟು 28 ಅರ್ಜಿಗಳು ಸ್ವೀಕೃತವಾಗಿರುತ್ತದೆ.

ಈ ಖಾತೆಗೆ ಸಂಬಂಧಿಸಿದ 3 ಅರ್ಜಿಗಳನ್ನು ವಿಲೇವಾರಿ ಮಾಡಿದರು. ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತೆ ಎಂ.ಕೆ. ಸವಿತಾ, ಉಪ ಆಯುಕ್ತರಾದ ವೀಣಾ ಹಾಗೂ ಸೋಮಶೇಖರ್ ಸೇರಿ ಇತರರು ಉಪಸ್ಥಿತರಿದ್ದರು.

## ಮಹಿಳೆಯರ ಬ್ಯಾಡ್ಮಿಂಟನ್ ಹಾಗೂ ಪುರುಷರ ಟೇಬಲ್ ಟೆನ್ನಿಸ್ ಪಂದ್ಯಾಟ

**ಮಡಿಕೇರಿ:** ಕೊಡಗು ವಿಶ್ವವಿದ್ಯಾಲಯ ಮತ್ತು ದೈಹಿಕ ಶಿಕ್ಷಣ ವಿಭಾಗ, ಮಡಿಕೇರಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ನಡೆದ ಕೊಡಗು ವಿಶ್ವವಿದ್ಯಾಲಯ ಅಂತರ ಕಾಲೇಜು ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನ್ನಿಸ್ ಪಂದ್ಯಾಟ ನಡೆಯಿತು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಮಹಿಳೆಯರ ಬ್ಯಾಡ್ಮಿಂಟನ್ ಹಾಗೂ ಪುರುಷರ ಟೇಬಲ್ ಟೆನ್ನಿಸ್ ಪಂದ್ಯಾಟಗಳಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ಆಟಗಾರರ ವಿವರ: ಮಹಿಳೆಯರ ಬ್ಯಾಡ್ಮಿಂಟನ್ ಪಂದ್ಯದಲ್ಲಿ ತೃತೀಯ ಬಿ.ಎ. ಗಾನಶ್ರೀ, ದ್ವಿತೀಯ ಬಿಬಿಎ ರಕ್ಷಿತ ಪೊನ್ನಮ್ಮ, ದ್ವಿತೀಯ ಬಿ.ಕಾಂ ಸಾವಿತ್ರಿ ಎಂ.ಪಿ., ದ್ವಿತೀಯ ಬಿಬಿಎ ಫಾತಿಮತುಲ್ ಜೋರಾ. ಪುರುಷರ ಟೇಬಲ್ ಟೆನ್ನಿಸ್ ಪಂದ್ಯದಲ್ಲಿ ದ್ವಿತೀಯ ಬಿ.ಕಾಂ ಪ್ರತೀನ್, ದ್ವಿತೀಯ ಬಿಬಿಎ ಪ್ರೀತಮ್, ಪ್ರಥಮ ಬಿ.ಕಾಂ ಆದಿಬ್ ವಾಸಿಮ್ ಹಾಗೂ ಪ್ರಥಮ ಬಿಸಿಎ ಹೇಮಂತ್.

ಪ್ರಾಂಶುಪಾಲರಾದ ಮೇಜರ್ ಪ್ರೊ.ರಾಘವ ಬಿ., ಕ್ರೀಡಾ ವಿಭಾಗದ ಸಂಯೋಜಕರಾದ ಡಾ.ತಳವಾರ್ ಬಿ.ಎಚ್. ಹಾಗೂ ದೈಹಿಕ ಶಿಕ್ಷಣ ವಿಭಾಗದ ಪಿ.ಸಿ.ರಮೇಶ ಇತರರು ಇದ್ದರು.

## ಅ.29 ಮತ್ತು 30 ರಂದು ಪಾಲುದಾರರ ಸಮಾಲೋಚನಾ ರಾಷ್ಟ್ರೀಯ ಸಮ್ಮೇಳನ

**ಮಡಿಕೇರಿ:** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಆಹಾರ ಮತ್ತು ನೀರಿನಲ್ಲಿರುವ ಫರ್‌ಫ್ಲೋರೋ ಆಲ್ಕೈಲ್ ಪದಾರ್ಥಗಳು ಹಾಗೂ ಮೈಕ್ರೋಪ್ಲಾಸ್ಟಿಕ್‌ಗಳು ಎಂಬ ವಿಷಯದ ಕುರಿತು ಎರಡು ದಿನಗಳ ಪಾಲುದಾರರ ಸಮಾಲೋಚನಾ ರಾಷ್ಟ್ರೀಯ ಸಮ್ಮೇಳನವನ್ನು ಅಕ್ಟೋಬರ್, 29 ಮತ್ತು 30 ರಂದು ಅಕಾಡೆಮಿಯ ಕಚೇರಿಯಲ್ಲಿ ನಡೆಯಲಿದೆ.

ಈ ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸ ನೀಡಲಿದ್ದಾರೆ. ಈ ಸಮ್ಮೇಳನದಲ್ಲಿ ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಎಂಜಿನಿಯರಿಂಗ್ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಯುವ ಉದ್ಯಮದಾರರು ಭಾಗವಹಿಸಬಹುದು. ಅಲ್ಲದೇ ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಪ್ರಬಂಧವನ್ನು ಸಹ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ. ಆಯ್ಕೆಯಾದ ಸಂಶೋಧನಾ ಪ್ರಬಂಧಕ್ಕೆ ನಗದು ಬಹುಮಾನ ನೀಡಲಾಗುವುದು. ಆಸಕ್ತರು ಅಕ್ಟೋಬರ್, 20 ರೊಳಗೆ Registration Link : https://forms.gle.G8jzPbRczYY5jYXWA ಮೂಲಕ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಅಕಾಡೆಮಿಯ ಅಧಿಕಾರಿಗಳನ್ನು ಮೊ.ಸಂ. 9620767819, 9743084194 ನ್ನು ಸಂಪರ್ಕಿಸಬಹುದು ಅಥವಾ ಅಕಾಡೆಮಿಯ ವೆಬ್‌ಸೈಟ್ https://kstacademy.in ನ್ನು ವೀಕ್ಷಿಸಬಹುದು ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಆನಂದ್ ಆರ್. ಅವರು ತಿಳಿಸಿದ್ದಾರೆ.

## ರಾಷ್ಟ್ರೀಯ ರಕ್ತದಾನ ದಿನಾಚರಣೆ

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಸ್ವಯಂಪ್ರೇರಿತ ರಕ್ತದಾನ ಕುರಿತು ಜಾಗೃತಿ ಮೂಡಿಸುವ ಹಾಗೂ ರಕ್ತದ ಅವಶ್ಯಕತೆ ಪೂರೈಸುವ ಉದ್ದೇಶದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕೊಡಗು ಇವರ ಸಹಯೋಗದಲ್ಲಿ ಮಂಗಳವಾರ ರಾಷ್ಟ್ರೀಯ ರಕ್ತದಾನ ದಿನಾಚರಣೆ ನಡೆಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಸನತ್ ಕುಮಾರ್, ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಕರುಂಬಯ್ಯ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರವೀಂದ್ರ ರೈ ಅವರು ಉದ್ಘಾಟಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಅವರು ಮಾತನಾಡಿ, ಪ್ರತಿಯೊಬ್ಬರೂ ರಕ್ತದಾನದ ಮಹತ್ವ ಅರಿತು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಲು ಮುಂದೆ ಬರಬೇಕು. ಜಿಲ್ಲೆಯಲ್ಲಿ ನಿಯಮಿತವಾಗಿ ರಕ್ತದಾನ ಶಿಬಿರ ಆಯೋಜಿಸುವ ಮೂಲಕ ಅಗತ್ಯವಿರುವ ರೋಗಿಗಳಿಗೆ ಸಕಾಲದಲ್ಲಿ ರಕ್ತ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಡಾ.ಕರುಂಬಯ್ಯ ಅವರು ಮಾತನಾಡಿ ರಕ್ತದಾನವು ಅತ್ಯಂತ ಮಹತ್ವದ ಮಾನವೀಯ ಸೇವೆಯಾಗಿದ್ದು, ಜಿಲ್ಲೆಯಲ್ಲಿನ ವಿವಿಧ ಸಂದರ್ಭಗಳಲ್ಲಿ ರಕ್ತದ ಅಗತ್ಯತೆ ಹೆಚ್ಚಿರುವುದರಿಂದ ಅಗತ್ಯ ಪ್ರಮಾಣದ ರಕ್ತದ ಘಟಕಗಳನ್ನು ಸಂಗ್ರಹಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ನಿಯಮಿತವಾಗಿ ರಕ್ತದಾನ ಶಿಬಿರ ಆಯೋಜಿಸುವುದರ ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಲು ಮುಂದೆ ಬರುವಂತೆ ಪ್ರೇರೇಪಿಸಬೇಕು ಎಂದು ಅವರು ಕರೆ ನೀಡಿದರು.

ರವೀಂದ್ರ ರೈ ಅವರು ಮಾತನಾಡಿ, ಕಾಲೇಜುಗಳಲ್ಲಿ ಯೂತ್ ರೆಡ್‌ಕ್ರಾಸ್ ಘಟಕಗಳ ಸಹಯೋಗದೊಂದಿಗೆ ರಕ್ತದಾನ ಶಿಬಿರ ಆಯೋಜಿಸುವ ಮೂಲಕ ಯುವಜನರಲ್ಲಿ ರಕ್ತದಾನದ ಮಹತ್ವದ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಯುವಕರು ಸ್ವಯಂ ಪ್ರೇರಿತ ರಕ್ತದಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಹೇಳಿದರು.

ಕಾರ್ಯಕ್ರಮದ ಮೂಲಕ "ರಕ್ತದಾನ  ಮಹಾದಾನ" ಎಂಬ ಸಂದೇಶ ಸಾರಲಾಗಿದ್ದು, ಸಾರ್ವಜನಿಕರು ಹಾಗೂ ಯುವಜನರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಜೀವ ಉಳಿಸುವ ಮಹತ್ವದ ಮಾನವೀಯ ಸೇವೆಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡಿದ ಭರತ್, ಯಶೋಧರ, ಅನುಷಾ ಎಂ.ಆರ್. ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಸ್ವಯಂ ಪ್ರೇರಿತ ರಕ್ತದಾನವನ್ನು ಉತ್ತೇಜಿಸುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಅಗತ್ಯವಿರುವ ರೋಗಿಗಳಿಗೆ ರಕ್ತ ಲಭ್ಯವಾಗುವಂತೆ ಮಾಡುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು.

ಕಾರ್ಯಕ್ರಮದಲ್ಲಿ ಡಿಟಿಸಿ ಪ್ರಾಂಶುಪಾಲರಾದ ಡಾ.ಅಜೀಜ್ ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಅರುಣ್ ಕುಮಾರ್ ಉಪಸ್ಥಿತರಿದ್ದರು. ಕೊಡಗು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ ಸ್ವಾಗತಿಸಿದರು, ನಿರೂಪಿಸಿದರು.



## ಮಡಿಕೇರಿ ತಾಲ್ಲೂಕಿನಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

# ಗೃಹಲಕ್ಷ್ಮಿ ಮರು ಪರಿಶೀಲನೆಗೆ ಮನೆಮನೆ ಸಮೀಕ್ಷೆ ಆರಂಭ

**ಮಡಿಕೇರಿ:** ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಹಾಗೂ ಪ್ರಗತಿ ಕುರಿತು ಸಭೆಯು ಮಡಿಕೇರಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಮಂದ್ರೀರ ಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.

ನಗರದ ತಾಲ್ಲೂಕು ಪಂಚಾಯಿತಿ ಕಚೇರಿಯ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು 'ಗೃಹಲಕ್ಷ್ಮಿ' ಯೋಜನೆಯಡಿ ಫಲಾನುಭವಿಗಳ ಕಡ್ಡಾಯ ಮನೆ–ಮನೆ ಮರುಪರಿಶೀಲನಾ ಕಾರ್ಯಕ್ರಮಕ್ಕೂ ಅಧಿಕೃತ ಚಾಲನೆ ನೀಡಲಾಗಿದೆ.

ಗೃಹಲಕ್ಷ್ಮಿ ಯೋಜನೆಯ ಮರುಪರಿಶೀಲನಾ ಕಾರ್ಯವು ಪಾರದರ್ಶಕವಾಗಿ ನಡೆಯಲು ತಹಶೀಲ್ದಾರ್ ಹಾಗೂ ಪಿಡಿಒಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಮೊಬೈಲ್ ಅಪ್ಲಿಕೇಶನ್ ಬಳಸಿ ಜಿಪಿಎಸ್ ಟ್ರ್ಯಾಕಿಂಗ್ ಮೂಲಕ ದಾಖಲೆ ಪರಿಶೀಲಿಸಲಾಗುತ್ತಿದೆ. ನಿಗದಿತ ಅವಧಿಯೊಳಗೆ ಸಮೀಕ್ಷೆ ಯಶಸ್ವಿಯಾಗಿ ಪೂರ್ಣಗೊಳಿಸುವಂತೆ ತಿಳಿಸಲಾಗಿದೆ ಎಂದರು.

ಮಹಿಳೆಯರು ಮತ್ತು ವಿದ್ಯಾರ್ಥಿಗಳು ಸರ್ಕಾರಿ ಯೋಜನೆಯ ಪ್ರಯೋಜನ ಪಡೆಯುವಾಗ, ತಮ್ಮ ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲಾದ ದೂರವಾಣಿ ಸಂಖ್ಯೆ, ಪಡಿತರ ಚೀಟಿ, ಪ್ಯಾನ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ಮತ್ತು ಇತರೆ ದಾಖಲೆ ವ್ಯವಸ್ಥಿತವಾಗಿ ನಿರ್ವಹಿಸಬೇಕು. ಬ್ಯಾಂಕ್ ಖಾತೆಗಳು ಕರ್ನಾಟಕದಲ್ಲಿರುವ ಶಾಖೆಗಳಾಗಿರಬೇಕು ಮತ್ತು ಅವು ಜಂಟಿ ಖಾತೆಗಳಾಗಿರಬಾರದು ಎಂದರು.

ಕರ್ನಾಟಕದ ನಿವಾಸ ವಿಳಾಸ ಹೊಂದಿದ್ದು, ತಮ್ಮದೇ ಆದ ಫೋನ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ಹೊಂದಿರುವ ಖಾತೆದಾರರಿಗೆ ಮಾತ್ರ ಈ ಯೋಜನೆ ಅನ್ವಯಿಸುತ್ತವೆ ಮತ್ತು ಅವರು ಇದಕ್ಕೆ ಅರ್ಹರಾಗಿರುತ್ತಾರೆ ಹಾಗೆಯೇ ಮರಣ ಹೊಂದಿರುವ ಮಹಿಳೆಯರ ಮಾಹಿತಿಗಳನ್ನು ಅಂಗನವಾಡಿ ಕಾರ್ಯಕರ್ತೆಯರೆ ಮಾಹಿತಿಯನ್ನು ತಮ್ಮ ವ್ಯಾಪ್ತಿಗೆ ಬರುವ ಪಂಚಾಯಿತಿಗೆ ವರದಿ ನೀಡಬೇಕು ಎಂದು ಕಾರ್ಯನಿರ್ವಾಹಕ ಅಧಿಕಾರಿ ಶೇಖರ್ ತಿಳಿಸಿದರು.

ಗೃಹಲಕ್ಷ್ಮಿ ಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ




ಇಲಾಖೆಯ ನಿರ್ದೇಶನದಂತೆ, ಫಲಾನುಭವಿಗಳ ಪ್ರಸ್ತುತ ಸ್ಥಿತಿ ಖಚಿತಪಡಿಸಿಕೊಳ್ಳಲು ಬಯೋಮೆಟ್ರಿಕ್ ಹಾಗೂ ಮುಖದ ದೃಢೀಕರಣದ ಮೂಲಕ ಕಡ್ಡಾಯ ಮನೆ–ಮನೆ ಮರುಪರಿಶೀಲನಾ ಕಾರ್ಯ ಆರಂಭವಾಗಿದೆ. ಗಣತಿದಾರರು ಮತ್ತು ಸಮಿತಿ ಸದಸ್ಯರು ನೇರವಾಗಿ ಮನೆಗಳಿಗೆ ಭೇಟಿ ನೀಡಿ ಜಿಪಿಎಸ್ ಸಾಕ್ಷ್ಯದೊಂದಿಗೆ ಮಾಹಿತಿ ಸಂಗ್ರಹಿಸಲಿದ್ದಾರೆ. ಇದು ಹೊಸ ನೋಂದಣಿಯಲ್ಲ, ಬದಲಾಗಿ ಅಸ್ತಿತ್ವದಲ್ಲಿರುವ ಫಲಾನುಭವಿಗಳ ಪರಿಶೀಲನೆಯಾಗಿದೆ ಎಂದು ಅವರು ವಿವರಿಸಿದರು.

ಜೂನ್ ತಿಂಗಳಲ್ಲಿ 26,723 ಫಲಾನುಭವಿಗಳಿಗೆ ರೂ. 53,44,600 ಹಣ ಪಾವತಿಸಲಾಗಿದೆ. ಎನ್‌ಪಿಸಿಐ ಮತ್ತು ಈ–ಕೆವೈಸಿ ಮಾಡಿಸಲು ಬಾಕಿ ಉಳಿದಿರುವ ಫಲಾನುಭವಿಗಳ ಸಂಖ್ಯೆ 69 ಇದ್ದು, ಎಸ್‌ಟಿ (ಎಸ್‌ಟಿ) ಶ್ರೇಣಿಯಿಂದ ತಿರಸ್ಕೃತಗೊಂಡ ಫಲಾನುಭವಿಗಳ ಸಂಖ್ಯೆ 849 ಆಗಿದೆ.

ಗೃಹಲಕ್ಷ್ಮಿ ಯೋಜನೆಯ ಆರ್ಥಿಕ ನೆರವಿನಿಂದ ಸ್ವಾವಲಂಬಿ ಜೀವನ ನಡೆಸಿ, ಸಾಮಾಜಿಕ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳಾ ಫಲಾನುಭವಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅವರ ಯಶೋಗಾಥೆಗಳನ್ನು ಸಂಗ್ರಹಿಸಲು ನಿರ್ಧರಿಸಲಾಗಿದೆ.

ಸರ್ಕಾರದ ಅಧೀನ ಕಾರ್ಯದರ್ಶಿಗಳ ಆದೇಶದಂತೆ, ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳನ್ನು ಬಯೋಮೆಟ್ರಿಕ್ ಹಾಗೂ ಫೇಶಿಯಲ್ ಅಥೆಂಟಿಕೇಷನ್ ಮೂಲಕ ಮರು ಪರಿಶೀಲನೆ ನಡೆಸಲಾಗುವುದು ಎಂದು ಇಲಾಖಾಧಿಕಾರಿಗಳು ತಿಳಿಸಿದ್ದಾರೆ.

ಶಕ್ತಿ ಯೋಜನೆ: 2026 ರ ಆಗಸ್ಟ್ ಮಾಹೆಯವರೆಗೆ ಒಟ್ಟು 19,72,6369 ಜನ ಮಹಿಳಾ ಪ್ರಯಾಣಿಕರು ಉಚಿತ ಬಸ್ ಪ್ರಯಾಣದ ಸೌಲಭ್ಯ ಪಡೆದಿದ್ದಾರೆ. ದಿನವೊಂದಕ್ಕೆ ಸರಾಸರಿ 16,675 ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಮುಕ್ಕೋಡ್ಲು ಭಾಗಕ್ಕೆ ಹಳೆಯ ಬಸ್‌ಗಳಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು, ನೂತನ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಭೆಯಲ್ಲಿ ಒತ್ತಾಯಿಸಲಾಯಿತು. ಬಸ್ ಚಾಲಕರು ಕಡ್ಡಾಯವಾಗಿ ಸಮಯ ಪಾಲನೆ ಮಾಡುವಂತೆ ಸೂಚಿಸಲಾಯಿತು.

ಯುವನಿಧಿ ಯೋಜನೆ: 2026ರ ಜುಲೈ ವರೆಗೆ 654 ಜನ ನೋಂದಣಿಯಾಗಿದ್ದು, ಜುಲೈ ತಿಂಗಳಲ್ಲಿ ಒಟ್ಟು ರೂ. 1,68,49,500 ನೇರ ನಗದು ವರ್ಗಾವಣೆ (ಡಿಬಿಟಿ) ಆಗಿದೆ. 472 ಫಲಾನುಭವಿಗಳು ಮಾಸಿಕ ಸ್ವಯಂ ಘೋಷಣೆ ನೀಡದಿರುವುದು, ಉನ್ನತ ವ್ಯಾಸಂಗ ಸೇರಿರುವುದು ಹಾಗೂ 24 ತಿಂಗಳು ಪೂರೈಸಿರುವ 892 ಫಲಾನುಭವಿಗಳನ್ನು ನಿಯಮಾನುಸಾರ ಯೋಜನೆಯಿಂದ ಕೈಬಿಡಲಾಗಿದೆ.

ಸುಮಾರು 472 ಫಲಾನುಭವಿಗಳು ತಾವಾಗಿಯೇ ಯಾವುದೇ ಮಾಸಿಕ ಸ್ವಯಂ ಘೋಷಣೆ ನೀಡದಿರುವ ಕಾರಣ ನೇರ ನಗದು ವರ್ಗಾವಣೆ (ಡಿಬಿಟಿ) ತಡೆಹಿಡಿಯಲಾಗಿದೆ. ಮುಖ್ಯ ಕಚೇರಿಯ ದತ್ತಾಂಶದ ಪ್ರಕಾರ 3 ಫಲಾನುಭವಿಗಳು ಈಗಾಗಲೇ ಉದ್ಯೋಗದಲ್ಲಿ ಸ್ವಯಂ ಘೋಷಣೆ ಮಾಡಿಕೊಂಡಿದ್ದಾರೆ. ದಾಖಲೆ ಹಾಗೂ ಭೌತಿಕ ಪರಿಶೀಲನೆ ವೇಳೆ ನಿಯಮ ಉಲ್ಲಂಘಿಸಿದ ಕಾರಣ ಒಟ್ಟು 166 ಅರ್ಜಿಗಳನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ. ಯುಯುಸಿಎಂಸಿ ದತ್ತಾಂಶದ ಅನ್ವಯ ಜಿಲ್ಲೆಯ 177 ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮುಂದುವರಿಸಿರುವುದು ಕಂಡುಬಂದಿದ್ದು, ಇವರನ್ನು ಯೋಜನೆಯಿಂದ ಅನರ್ಹಗೊಳಿಸಲಾಗಿದೆ.

ಗೃಹಜ್ಯೋತಿ ಯೋಜನೆ: ತಾಲ್ಲೂಕಿನಲ್ಲಿ ಒಟ್ಟು 52,758 ಅರ್ಹ ಸ್ಥಾವರಗಳಿದ್ದು, 52,131 ನೋಂದಣಿಗೊಂಡ ಅರ್ಜಿಗಳೊಂದಿಗೆ ಶೇ.98.81 ರಷ್ಟು ಪ್ರಗತಿ ಸಾಧಿಸಲಾಗಿದೆ. ಮರುಪರಿಶೀಲನೆಯು ನಗರ ವ್ಯಾಪ್ತಿಯಲ್ಲಿ ಶೇ.62 ಹಾಗೂ ಗ್ರಾಮಾಂತರ ವ್ಯಾಪ್ತಿಯಲ್ಲಿ ಶೇ.80 ರಷ್ಟು ಪ್ರಗತಿ ಕಂಡಿದೆ.

ಅನ್ನಭಾಗ್ಯ ಯೋಜನೆ: ತಾಲ್ಲೂಕಿನಲ್ಲಿ ಒಟ್ಟು 38,226 ಪಡಿತರ ಚೀಟಿಗಳಿದ್ದು, 1,21,053 ಫಲಾನುಭವಿಗಳಿದ್ದಾರೆ. ಇದರಲ್ಲಿ 1,893 ಅಂತ್ಯೋದಯ ಹಾಗೂ 21,845 ಆದ್ಯತಾ ಪಡಿತರ ಚೀಟಿಗಳು ಸೇರಿವೆ. ತಾಲ್ಲೂಕಿನಲ್ಲಿ 1,391 ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಲಾಗಿದೆ. ವೈದ್ಯಕೀಯ ಸೌಲಭ್ಯ ಹಾಗೂ ಇತ್ಯಾದಿ ತಿದ್ದುಪಡಿಗಳಿಗೆ ಸಾರ್ವಜನಿಕರು ಅರ್ಜಿ ಸಲ್ಲಿಸಬಹುದಾಗಿದೆ.

ಮಡಿಕೇರಿ ತಾಲೂಕಿನಲ್ಲಿ ಅನ್ವೇಷಣಾ ಯೋಜನೆಗೆ ಸಂಬಂಧಿಸಿದಂತೆ ಒಟ್ಟು 38,226 ಫಲಾನುಭವಿಗಳಿದ್ದು, ವಿವಿಧ ಜನಪರ ಯೋಜನೆಗಳಡಿ ಪಿ.ಎಂ.ಕಿಸಾನ್ ಯೋಜನೆಯಲ್ಲಿ 1,893 ಹಾಗೂ ಪಿ.ಎಂ. ವಿಶ್ವಕರ್ಮ ಯೋಜನೆಯಲ್ಲಿ 7,543 ಫಲಾನುಭವಿಗಳು ಸೌಲಭ್ಯ ಪಡೆಯುತ್ತಿದ್ದಾರೆ. ಅಂತೆಯೇ, ವಿ.ಕೆ.ಎಫ್.ವೈ. ಯೋಜನೆಯಡಿ 21,845 ಮತ್ತು ಪಿ.ಎಂ. ಸ್ವನಿಧಿ ಯೋಜನೆಯಡಿ ಬರೋಬ್ಬರಿ 70,976 ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದಾರೆ. ಜೊತೆಗೆ, ಎನ್.ಟಿ.ಹೆಚ್. ಜೆ. ಯೋಜನೆಯಡಿ 14,488 ಹಾಗೂ ಪ್ರಧಾನ್ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ವಲಯದಲ್ಲಿ ಒಟ್ಟು 42,534 ಫಲಾನುಭವಿಗಳ ಹೆಸರು ದಾಖಲಾಗಿದೆ. ಇನ್ನು ಪರಿಶೀಲನೆ ಹಾಗೂ ತನಿಖೆಯ ಸಂದರ್ಭದಲ್ಲಿ ಮಡಿಕೇರಿ ತಾಲೂಕಿನಲ್ಲಿ ಒಟ್ಟು 1,391 ಅನರ್ಹ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ನಿಯಮಾನುಸಾರ ಅಂತಹ ಅನರ್ಹ ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಿಸಿ, ಅವರ ಹೆಸರುಗಳನ್ನು ಕೈಬಿಡುವ ಪ್ರಕ್ರಿಯೆಗೆ ಕ್ರಮ ವಹಿಸಲಾಗಿದೆ.

ಸಭೆಯಲ್ಲಿ ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕರಾದ ದರ್ಶನ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಡಿ.ಹೆಚ್. ಮಹೇಶ್, ಉದ್ಯೋಗಾಧಿಕಾರಿ ಸಿ.ಬಿ.ಮಂಜುನಾಥ್, ಸೆಸ್ಕ್ ಎಇಇ ಕೆ.ಎ.ರಾಜೇಶ್ವರಿ ಹಾಗೂ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಸದಸ್ಯರಾದ ಪ್ರಭಾಕರ ರೈ, ಹೆಚ್.ಪಿ.ರಫಿ, ಫ್ಯಾನ್ಸಿ ಪಾರ್ವತಿ, ರಾಜೇಶ್ವರಿ, ಸಿರಾಜುದ್ದೀನ್, ಎಂ.ಎನ್.ದಯಾನಂದ, ರಂಗಪ್ಪ, ಮಿಟ್ಟು ಸೋಮಯ್ಯ ಮತ್ತು ಇತರೆ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಮನ್‌ಮುಲ್ ಹಾಲಿನ ಪುಡಿ ಅಕ್ರಮ: 110 ಟನ್ ಅವ್ಯವಹಾರ, 8 ಮಂದಿ ಬಂಧನ

# ಅಂದಾಜು 2.88 ಕೋಟಿ ರೂ.ಗಳ 54 ಟನ್ ನಕಲಿ ಪುಡಿ ದಾಸ್ತಾನು

**ಮಂಡ್ಯ:** ಜಿಲ್ಲೆಯ ಮದ್ದೂರು ತಾಲೂಕಿನ ಗೆಜ್ಜಲಗೆರೆಯಲ್ಲಿರುವ ಮನ್ಮುಲ್ ಹಾಲು ಒಕ್ಕೂಟದಲ್ಲಿ ಹಾಲಿನ ಪುಡಿ ಅಕ್ರಮ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಎಂಟು ಮಂದಿಯನ್ನು ಬಂಧಿಸಿ ಪ್ರಾಥಮಿಕ ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಎಸ್‌ಪಿ ಡಾ.ವಿ.ಜೆ.ಶೋಭಾರಾಣಿ ಅವರು ತಿಳಿಸಿದರು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಅಶ್ವಿನಿ ಎನ್, ಸಹಾಯಕ ವ್ಯವಸ್ಥಾಪಕರು, ಗುಣಭರವಸೆ ವಿಭಾಗ, ಮನ್‌ಮುಲ್, ಗೆಜ್ಜಲಗೆರೆ ಇವರು ಆಗಸ್ಟ್ 30ರಂದು ಮದ್ದೂರು ಠಾಣೆಗೆ ಹಾಜರಾಗಿ ದೂರು ನೀಡಿದರು. ಮನ್‌ಮುಲ್ ಒಕ್ಕೂಟದ ಅಧಿಕಾರಿ ರಾಮಕೃಷ್ಣ ಟಿ. ಅವರ ಅವಧಿಯಲ್ಲಿ ಹಾಲಿನ ಪುಡಿ ಬ್ಯಾಗ್‌ಗಳಲ್ಲಿ ಕಲಬೆರಕೆ ಕಂಡುಬಂದಿದ್ದು, ಹಾಲಿನ ಪುಡಿ ದಾಸ್ತಾನು ಕೊರತೆಗೆ ಅಂದಿನ ಎಫ್.ಜಿ.ಎಸ್ ಶಾಖೆಯ ಮುಖ್ಯಸ್ಥ ಪ್ರದೀಪ್ ಕುಮಾರ್ ಜಾದವ್ ಕಾರಣರಾಗಿದ್ದಾರೆ ಎಂದು ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಎಸ್‌ಪಿ ಅವರ ನೇತೃತ್ವದಲ್ಲಿ ಡಿವೈಎಸ್‌ಪಿ ಯಶವಂತ್ ಕುಮಾರ್ ಎಸ್.ಬಿ. ಸಾರಥ್ಯದಲ್ಲಿ ಇನ್ಸ್‌ಪೆಕ್ಟರ್ ನವೀನ್ ಹೆಚ್.ಎಸ್., ಪಿಐ ನಾರಾಯಣಿ, ಪಿಎಸ್‌ಐ ಮಂಜುನಾಥ ಕೆ., ರಸೂಲ್ ಸಾಬ್ ಗೊಂಡಿ ಹಾಗೂ ಸಿಬ್ಬಂದಿ ಆನಂದ, ಮಹೇಶ್, ಶಿವರಾಜು, ಶರತ್, ಚಿರಂಜೀವಿ, ಸಿದ್ದೇಗೌಡ, ಪ್ರಸನ್ನ, ಶ್ರೀಕಂಠಯ್ಯ, ತಾಂತ್ರಿಕ ಸಿಬ್ಬಂದಿ ಲೋಕೇಶ್, ರವಿ ಅವರನ್ನೊಳಗೊಂಡ ವಿಶೇಷ ತಂಡ ರಚಿಸಿ ತನಿಖೆ ಕೈಗೊಳ್ಳಲಾಗಿತ್ತು.

**ವರ್ಗಾವಣೆಯಲ್ಲಿ ಹಣದ ವ್ಯವಹಾರ**

ಒಂದು ಶಾಖೆಯಿಂದ ಮತ್ತೊಂದು ಶಾಖೆಗೆ ವರ್ಗಾವಣೆ ಮಾಡಿಕೊಡಲು ಮಾಜಿ ಅಧ್ಯಕ್ಷ ಶಿವಪ್ಪ ಹಂತ ಹಂತವಾಗಿ 70 ಲಕ್ಷ ರೂ. ಹಣ ಪಡೆದಿದ್ದರು. ಪೋಸ್ಟ್ ಕೊಟ್ಟ ನಂತರ 25 ಲಕ್ಷ ರೂ. ಹಣವನ್ನು ಶಿವಪ್ಪ ಅವರಿಗೆ ನೀಡಲಾಗಿತ್ತು.ಈ ಹಣವನ್ನು ಸರಿದೂಗಿಸಿಕೊಳ್ಳಲು ಹಾಲಿನ ಪುಡಿಯನ್ನು ಹಂತ ಹಂತವಾಗಿ ಹೆಚ್ಚುವರಿಯಾಗಿ ಮಾರಾಟ ಮಾಡಲಾಗಿತ್ತು.ಜೊತೆಗೆ ಕಲಬೆರಕೆ ಮಾಡಲಾಗಿತ್ತು

**ಆಡಿಟ್ ಮರೆಮಾಚಲು ನಕಲಿ ಪುಡಿ**

ಆಡಿಟ್ ವರದಿಯಲ್ಲಿ 110 ಟನ್ ವ್ಯತ್ಯಾಸ ಕಂಡುಬಂದ ಹಿನ್ನೆಲೆಯಲ್ಲಿ ಲೆಕ್ಕ ಹೊಂದಿಸಲು 54.9 ಟನ್ ಕಲಬೆರಕೆ ಹಾಲಿನ ಪುಡಿಯನ್ನು ಪೀಣ್ಯದ ಇಂಡಸ್ಟ್ರಿಯಿಂದ ಖರೀದಿಸಿ ತಂದು ಗೋಡೌನ್‌ನ ಕೆಳಭಾಗದಲ್ಲಿ ದಾಸ್ತಾನು ಇಟ್ಟಿರುವುದು ತನಿಖೆಯಲ್ಲಿ ಕಂಡುಬಂದಿದೆ.

**8 ಮಂದಿ ಬಂಧನ:** ಪ್ರಕರಣಕ್ಕೆ ಸಂಬಂಧಿಸಿದಂತೆ 8 ಮಂದಿಯನ್ನು ಬಂಧಿಸಲಾಗಿದೆ: ಪ್ರದೀಪ್ ಕುಮಾರ್ ಜಾದವ್,ಖರೀದಿ ಅಧಿಕಾರಿ ಶ್ರುತಿ ಎಂ.ಸಿ. (ಸಿಸ್ಟಮ್ ಆಪರೇಟರ್), ರವಿ (ಗೋಡೌನ್ ಮ್ಯಾನೇಜರ್), ಶ್ರೀನಿವಾಸ ಆರ್.ಎಸ್. (ಲೋಡಿಂಗ್–ಅನ್‌ಲೋಡಿಂಗ್ ಮೇಸ್ತ್ರಿ), ಶ್ರೀನಿವಾಸ ಮೂರ್ತಿ (ಘಟಕದ ಮುಖ್ಯಸ್ಥ), ಸುರೇಶ್ (ವಿಕೆಎಸ್ ಮಾರ್ಕೆಟಿಂಗ್ ಮಾಲೀಕ), ಯು.ಸಿ. ಶಿವಕುಮಾರ್ ಅಲಿಯಾಸ್ ಶಿವಪ್ಪ ( ಮಾಜಿ ಅಧ್ಯಕ್ಷರು), ಸುರೇಶ್ (ಮನ್ಮುಲ್ ಒಕ್ಕೂಟದ ಗುತ್ತಿಗೆದಾರ). ಇನ್ನೋರ್ವ ಆರೋಪಿ ನಿತೀಶ್ ಕುಮಾರ್ (ಮೂಲತಃ ಕೇರಳ) ಮೃತಪಟ್ಟಿದ್ದಾರೆ. ತನಿಖೆ ಮುಂದುವರಿದಿದೆ.

ಸುದ್ದಿಗೋಷ್ಠಿಯಲ್ಲಿ ಡಿವೈಎಸ್‌ಪಿ ಯಶವಂತ್ ಕುಮಾರ್, ಅಡಿಷನಲ್ ಎಸ್‌ಪಿ ನಾಗೇಶ್ ಉಪಸ್ಥಿತರಿದ್ದರು.

## ಪರಿಶಿಷ್ಟ ಪಂಗಡ ಸಮಾಜಗಳ ಕುಂದುಕೊರತೆ ಸಭೆ ಶೀಘ್ರ ಆಹ್ವಾನ

**ಮಡಿಕೇರಿ:** ಪರಿಶಿಷ್ಟ ಪಂಗಡ ಸಮಾಜಗಳ ಸಮಸ್ಯೆ ಆಲಿಸಿ ಪರಿಹರಿಸುವಲ್ಲಿ 15 ದಿನದೊಳಗೆ ಕುಂದುಕೊರತೆ ಸಭೆ ಆಹ್ವಾನಿ ಸಲಾಗುವುದು ಎಂದು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ತಿಳಿಸಿದ್ದಾರೆ.



ನಗರದ ಜಿಲ್ಲಾಧಿಕಾರಿ ಅವರ ಕಚೇರಿ ಸಭಾಂಗಣದಲ್ಲಿ ಇದೇ ಅಕ್ಟೋಬರ್, 26 ರಂದು ವಾಲ್ಮೀಕಿ ಜಯಂತಿ ಆಚರಣೆ ಸಂಬಂಧ ಮಂಗಳವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುವ ಸಂದರ್ಭದಲ್ಲಿ ಈ ಮಾಹಿತಿ ನೀಡಿದರು.

ಪರಿಶಿಷ್ಟ ಪಂಗಡ ಸಮಾಜಗಳಲ್ಲಿ ಹಲವು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವಂತಾಗಬೇಕು. ಆ ನಿಟ್ಟಿನಲ್ಲಿ ಯಾವುದೇ ಕುಂದುಕೊರತೆ ಸಭೆಯನ್ನು ತುರ್ತಾಗಿ ಆಹ್ವಾನಿಸಬೇಕು ಎಂದು ವಾಲ್ಮೀಕಿ ಸಮಾಜದ ಜಿಲ್ಲಾ ಅಧ್ಯಕ್ಷರಾದ ಕೆ.ಎನ್.ಅಶೋಕ್ ಅವರು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ ಅವರು ಶೀಘ್ರ ಸಭೆ ಆಹ್ವಾನಿಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಆಗಬೇಕಿರುವ ಕುಂದುಕೊರತೆಯನ್ನು ಇಲ್ಲಿಯೇ ಬಗೆಹರಿಸಲಾಗುವುದು. ಸಮಸ್ಯೆಗಳು ಇತ್ಯರ್ಥವಾಗದಿರುವುದಕ್ಕೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಅವರು ಹೇಳಿದರು.

ಸಭೆಯ ಆರಂಭದಲ್ಲಿ ಮಾತನಾಡಿದ ವಾಲ್ಮೀಕಿ ಸಮಾಜದ ಜಿಲ್ಲಾ ಅಧ್ಯಕ್ಷರಾದ ಅಶೋಕ್ ಅವರು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ವ್ಯವಸ್ಥಾಪಕರು ಇಲ್ಲದೆ ಯಾವುದೇ ಕಾರ್ಯಕ್ರಮಗಳು ಸಮಾಜದವರಿಗೆ ತಲುಪುತ್ತಿಲ್ಲ. ಹೆಸರಿಗೆ ಮಾತ್ರ ನಿಗಮ ಇದ್ದು, ಕಳೆದ ಮೂರು ವರ್ಷದಿಂದ ಸಮಾಜಕ್ಕೆ ಅನುಕೂಲ ಆಗಿಲ್ಲ. ಆದ್ದರಿಂದ ಈ ಸಂಬಂಧ ಐಟಿಡಿಪಿ ಇಲಾಖಾ ಅಧಿಕಾರಿಯವರನ್ನು ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿ ಪ್ರಭಾರ ವಹಿಸಬೇಕು ಎಂದು ಕೋರಿದರು.

ಸರ್ಕಾರದಿಂದ ನಿಗಮಗಳಿಗೆ ಅನುದಾನ ಬಿಡುಗಡೆಯಾಗುತ್ತಿದ್ದು, ಈ ಸೌಲಭ್ಯ ವಾಲ್ಮೀಕಿ ಸಮಾಜಕ್ಕೂ ಸಹ ತಲುಪಬೇಕು. ಆ ನಿಟ್ಟಿನಲ್ಲಿ ಸಾಕಷ್ಟು ಕುಂದುಕೊರತೆಗಳು ಇದ್ದು, ವಾಲ್ಮೀಕಿ ಹಾಗೂ ಹಲವು ಪರಿಶಿಷ್ಟ ಪಂಗಡ ಸಮಾಜಗಳ ಕುಂದುಕೊರತೆ ಆಲಿಸಬೇಕು ಎಂದು ಮನವಿ ಮಾಡಿದರು.

ಕುಂದುಕೊರತೆ ಸಭೆಗೆ ತಾಲ್ಲೂಕು ಮಟ್ಟದ ಐಟಿಡಿಪಿ ಇಲಾಖಾ ಅಧಿಕಾರಿಗಳನ್ನು ಸಹ ಆಹ್ವಾನಿಸಬೇಕು ಎಂದು ಇದೇ ಸಂದರ್ಭದಲ್ಲಿ ಅಶೋಕ್ ಅವರು ತಿಳಿಸಿದರು.

ಅರ್ಥಪೂರ್ಣವಾಗಿ ವಾಲ್ಮೀಕಿ ಜಯಂತಿ ಆಚರಿಸಿ: ಸರ್ಕಾರ ಇದೇ ಅಕ್ಟೋಬರ್, 26 ರಂದು ವಾಲ್ಮೀಕಿ ಜಯಂತಿ ಆಚರಿಸಲು ನಿರ್ಧರಿಸಿದ್ದು, ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸುವಂತೆ ಐಟಿಡಿಪಿ ಇಲಾಖಾ ಅಧಿಕಾರಿಗೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ನಿರ್ದೇಶನ ನೀಡಿದರು.

ಕಾರ್ಯಕ್ರಮವನ್ನು ನಗರದ ಗಾಂಧಿ ಭವನದಲ್ಲಿ ಆಚರಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಹಾಗೆಯೇ ಮುಖ್ಯ ಭಾಷಣಕಾರರನ್ನು ಆಹ್ವಾನಿಸುವ ಸಂಬಂಧ ಐಟಿಡಿಪಿ ಇಲಾಖಾ ಅಧಿಕಾರಿ ಹಾಗೂ ಸಮಾಜದ ಪ್ರಮುಖರು ಚರ್ಚಿಸಿ ನಿರ್ಧರಿಸುವಂತೆ ಜಿಲ್ಲಾಧಿಕಾರಿ ಅವರು ಸಲಹೆ ಮಾಡಿದರು.

ಈ ಬಗ್ಗೆ ಮಾತನಾಡಿದ ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷರು ಮುಖ್ಯ ಭಾಷಣಕಾರರ ಸಂಬಂಧ ಎರಡು ಮೂರು ದಿನದಲ್ಲಿ ಮಾಹಿತಿ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ವಾಲ್ಮೀಕಿ ಸಮಾಜದ ಪ್ರತಿನಿಧಿಯೊಬ್ಬರು ತಾಲ್ಲೂಕು ಮಟ್ಟದಲ್ಲಿಯೂ ಸಹ ವಾಲ್ಮೀಕಿ ಜಯಂತಿ ಆಚರಿಸಬೇಕು. ಕುಶಾಲನಗರದಲ್ಲಿ ವಾಲ್ಮೀಕಿ ಸಮುದಾಯ ಭವನವಿದ್ದು, ಈ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸುವಂತಾಗಬೇಕು ಎಂದು ಮನವಿ ಮಾಡಿದರು.

## 9ರಂದು ನೇರ ಸಂದರ್ಶನ ಕಾರ್ಯಕ್ರಮ

**ರಾಮನಗರ:** ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಅ.09ರ ಶುಕ್ರವಾರ ಉಚಿತ ನೇರ ಸಂದರ್ಶನ ಕಾರ್ಯಕ್ರಮದಲ್ಲಿ ಪಿರಮಲ್ ಫೈನಾನ್ಸ್ ಲಿಮಿಟೆಡ್ ಖಾಸಗಿ ಸಂಸ್ಥೆಯವರು ಭಾಗವಹಿಸುತ್ತಿದ್ದು, ಉದ್ಯೋಗಾಂಕ್ಷಿಗಳನ್ನು ನೇಮಕ ಮಾಡಿಕೊಳ್ಳಲಿರುವುದರಿಂದ ಖಾಸಗಿ ವಲಯದಲ್ಲಿನ ಉದ್ಯೋಗಕ್ಕೆ ಆಸಕ್ತರಿರುವ ಪಿಯುಸಿ, ಐಟಿಐ ಹಾಗೂ ಡಿಪ್ಲೊಮಾ ಅಥವಾ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ/ರೆಸ್ಯೂಮ್ (ಬಯೋಡೇಟಾ) ಹಾಗೂ ಇತ್ಯಾದಿ ದಾಖಲೆಗಳೊಂದಿಗೆ ಅ.09ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಕೊಠಡಿ ಸಂಖ್ಯೆ.208, ಮೊದಲನೇ ಮಹಡಿ, ಕಂದಾಯ ಭವನ, ಬಿ.ಎಂ. ರಸ್ತೆ, ರಾಮನಗರ, ಇಲ್ಲಿ ನೇರ ಸಂದರ್ಶನ ಕಾರ್ಯಕ್ರಮ ನಡೆಯುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 8217037508 ಅನ್ನು ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮನ್‌ಮುಲ್‌ನಲ್ಲಿ ಕೋಟ್ಯಂತರ ರೂ. ಹಗರಣ: ಸಮಗ್ರ ತನಿಖೆಗೆ ಪ್ರಾಂತ ರೈತ ಸಂಘದ ಒತ್ತಾಯ

**ಮಂಡ್ಯ:** ಹಾಲಿನ ಪುಡಿ ಕಲಬೆರಕೆ, ನೇಮಕಾತಿ ಅಕ್ರಮ, ಟೆಂಡರ್ ಅವ್ಯವಹಾರ, ಹಾಲು–ನೀರು, ಮೆಗಾ ಡೈರಿ, ಭೂಮಿ ಖರೀದಿ ಸೇರಿದಂತೆ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ (ಮನ್‌ಮುಲ್)ದ ಸಾಲು ಸಾಲು ಹಗರಣಗಳ ಬಗ್ಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸಮಗ್ರ ತನಿಖೆ ನಡೆಸಿ ಆರೋಪಿಗಳನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಆಗ್ರಹಿಸಿತು.



ನಗರದ ಜಿಲ್ಲಾಧಿಕಾರಿ ಕಚೇರಿ ಮುಂದೆ ಕರ್ನಾಟಕ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ ಹಾಗೂ ಕರ್ನಾಟಕ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಕಾರ್ಮಿಕರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಜಿಲ್ಲಾ ಸಂಚಾಲಕ ಎನ್.ಎಲ್.ಭರತ್ ರಾಜ್ ಮಾತನಾಡಿದರು

**ಭ್ರಷ್ಟರ ತಿಜೋರಿ ತುಂಬಿಸುವ ತಾಣವಲ್ಲ:** ಕೃಷಿ ಪ್ರಧಾನ ಮಂಡ್ಯ ಜಿಲ್ಲೆಯಲ್ಲಿ ಬಹುತೇಕ ರೈತರು ಜೀವನೋಪಾಯಕ್ಕಾಗಿ ಹೈನುಗಾರಿಕೆಯನ್ನು ಉಪಕಸುಬಾಗಿ ಅವಲಂಬಿಸಿದ್ದಾರೆ. ಹೈನುಗಾರಿಕೆಯಲ್ಲಿಯೂ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಮಂಡ್ಯದ ಜೀವನಾಡಿಯಾಗಿರುವ ಹೈನುಗಾರಿಕೆಯ ಕತ್ತು ಹಿಸುಕಿ ರೈತರ ಬೆವರಿನ ಫಲದಿಂದ ಭ್ರಷ್ಟ ರಾಜಕಾರಣಿಗಳು ತಮ್ಮ ತಿಜೋರಿ ತುಂಬಿಸಿಕೊಳ್ಳಲು ಹೊರಟಿರುವುದು ಅಕ್ಷಮ್ಯ ಅಪರಾಧ. ಹಾಲು ಉತ್ಪಾದಕರ ಹಿತ ಕಾಯಬೇಕಾದ ಸಹಕಾರ ಸಂಘಗಳು ಭ್ರಷ್ಟಾಚಾರದ ಕೂಪಗಳಾಗಿ ರಾಜಕಾರಣಿಗಳಿಗೆ ಹಣ ಕೊಳ್ಳೆ ಹೊಡೆಯುವ ತಾಣಗಳಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಪಕ್ಷಾತೀತ ಭ್ರಷ್ಟಾಚಾರ, ಮನ್‌ಮುಲ್‌ಗೆ ಅಂಟಿದ ಕಳಂಕ:** ಮನ್‌ಮುಲ್ ಆಡಳಿತ ಮಂಡಳಿ ಬಹಳ ಹಿಂದಿನಿಂದಲೂ ಪಕ್ಷಾತೀತವಾಗಿ ಭ್ರಷ್ಟಾಚಾರ ಎಸಗುತ್ತಾ ಬರುತ್ತಿರುವುದು ರೈತರಿಗೆ ಮಾಡುತ್ತಿರುವ ಮಹಾದ್ರೋಹ. ಹಾಲು–ನೀರು ಹಗರಣ, ಮೆಗಾ ಡೈರಿ ಹೆಸರಿನಲ್ಲಿ ಭ್ರಷ್ಟಾಚಾರ, ಕಾಮಗಾರಿಗಳ ಟೆಂಡರ್‌ನಲ್ಲಿ ಅಕ್ರಮ, ಲಂಚಕ್ಕೋಸ್ಕರ ಅನಗತ್ಯ ನೇಮಕಾತಿ ಹೀಗೆ ಸಾಲು ಸಾಲು ಹಗರಣಗಳು ಹಿಂದಿನಿಂದಲೂ ಮಂಡ್ಯ ಹಾಲು ಒಕ್ಕೂಟಕ್ಕೆ ಅಂಟಿದ ಕಳಂಕವಾಗಿವೆ ಎಂದು ಆರೋಪಿಸಿದರು.

**ಹೆಚ್ಚಿನ ಅವ್ಯವಹಾರದ ಶಂಕೆ:** ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿ ಮಾತನಾಡಿ, ಮಕ್ಕಳ ಕುಡಿಯುವ ಹಾಲಿಗೆ ವಿಷ ಬೆರೆಸಿರುವ ಆಡಳಿತ ಮಂಡಳಿ, ನೌಕರರು ಸೇರಿದಂತೆ ಇನ್ನೂ ಅನೇಕ ಪ್ರಭಾವಿ ವ್ಯಕ್ತಿಗಳ ಹೆಸರು ಕೇಳಿ ಬರುತ್ತಿದೆ. ಎಂತಹ ಪ್ರಭಾವಿಗಳೇ ಆಗಿರಲಿ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ದಕ್ಷ, ಪ್ರಾಮಾಣಿಕ ಅಧಿಕಾರಿಗಳ ತಂಡ ರಚಿಸಿ ಹೆಡೆಮುರಿ ಕಟ್ಟಬೇಕು. ಪ್ರಸ್ತುತ ಹಾಲಿನ ಪುಡಿ ಕಲಬೆರಕೆ ಪ್ರಕರಣ ಅಂದಾಜು 100 ಕೋಟಿಯ ಅವ್ಯವಹಾರ ಎಂದು ಮೇಲ್ನೋಟಕ್ಕೆ ಕಂಡರೂ ಇದರಲ್ಲಿ ಇನ್ನೂ ಹೆಚ್ಚು ಹಣ ದುರುಪಯೋಗವಾಗಿರುವ ಸಾಧ್ಯತೆ ಇದೆ. ಸಹಕಾರಿ ರಂಗದ ಉತ್ಪನ್ನಗಳ ಮೇಲೆ ಗ್ರಾಹಕರಿಗೆ ಇದ್ದ ನಂಬಿಕೆ ಒಡೆದಿದೆ. ಇದರಿಂದ ಮುಂದಿನ ದಿನಗಳಲ್ಲಿ ಗ್ರಾಹಕರು ಹಾಲಿನ ಪುಡಿ ಸೇರಿದಂತೆ ಇತರ ಉತ್ಪನ್ನಗಳನ್ನು ತಿರಸ್ಕರಿಸುವ ಸಾಧ್ಯತೆ ಇದ್ದು ಇದು ನೇರವಾಗಿ ಹಾಲು ಉತ್ಪಾದಕರ ಮೇಲೆ ಪರಿಣಾಮ ಬೀರಲಿದೆ. ಹಾಗಾಗಿ ಅಧ್ಯಕ್ಷರು, ಆಡಳಿತ ಮಂಡಳಿ, ಅಧಿಕಾರಿ ವರ್ಗ ಸೇರಿದಂತೆ ಎಲ್ಲರ ಮೇಲೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಲೂಟಿಕೋರ ರೈತದ್ರೋಹಿಗಳ ಬಂಧನಕ್ಕೆ ಆಗ್ರಹ

ಜನವಾದಿ ಮಹಿಳಾ ಸಂಘಟನೆ ಜಿಲ್ಲಾಧ್ಯಕ್ಷೆ ಡಿ.ಕೆ.ಲತಾ ಮಾತನಾಡಿ, ಮಂಡ್ಯದ ಜೀವನಾಡಿಯಾಗಿರುವ ಮನ್‌ಮುಲ್ ಸಂಸ್ಥೆಯನ್ನು ದಿವಾಳಿ ಮಾಡಲು ಹೊರಟಿರುವ ಲೂಟಿಕೋರ ರೈತದ್ರೋಹಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಹಾಲಿನ ಪೌಡರ್ ಕಲಬೆರಕೆ ಮತ್ತು ಕಳ್ಳತನ, ಅನಗತ್ಯ ನೇಮಕಾತಿ, ಟೆಂಡರ್ ಹಗರಣ, ಹಾಲು ನೀರು ಹಗರಣ, ಭೂಮಿ ಖರೀದಿ ಹಗರಣ, ಮೆಗಾ ಡೈರಿ ಹಗರಣಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಜೊತೆಗೆ ಹಾಲು ಉತ್ಪಾದಕರಿಗೆ ಸಾಲ ಸೌಲಭ್ಯ, ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ, ವೈದ್ಯಕೀಯ ವೆಚ್ಚ ಸೇರಿದಂತೆ ಎಲ್ಲ ಸವಲತ್ತುಗಳನ್ನು ಒದಗಿಸಲು ಯೋಜನೆ ರೂಪಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಶೋಭಾ, ಪ್ರಾಂತ ರೈತ ಸಂಘದ ಮಹದೇವು, ಗುರುಸ್ವಾಮಿ, ರಾಮಚಂದ್ರ, ಜವನೇಗೌಡ, ಸುಕೂರ್, ಕೃಷಿ ಕೂಲಿಕಾರರ ಸಂಘಟನೆಯ ಅಧ್ಯಕ್ಷ ಶಿವಮಲ್ಲಯ್ಯ, ಜಿಲ್ಲಾ ಕಾರ್ಯದರ್ಶಿ ಹನುಮೇಶ, ಆನಂದ, ಸುರೇಂದ್ರ, ಸಿಪಿಐಎಂನ ಕೃಷ್ಣೇಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಕೃತಕ ಜಗತ್ತಿನಲ್ಲಿ ಸಿಲುಕಿದ ಇಂದಿನ ಬಾಲ್ಯ



| ಪುಷ್ಪ ಪ್ರಸಾದ್

ಮಗು ನಗುವಾಗ ಜಗತ್ತೇ ನಗುತ್ತದೆ" ಎಂಬ ಮಾತಿದೆ. ಬಾಲ್ಯ ಎನ್ನುವುದು ಮುಗ್ಧತೆ, ನೈಸರ್ಗಿಕ ಕುತೂಹಲ ಮತ್ತು ಸ್ವಚ್ಛಂದ ಆಟೋಟಗಳ ಸುಂದರ ಕಾಲ. ಆದರೆ ಇಂದಿನ ಇಪ್ಪತ್ತೊಂದನೇ ಶತಮಾನದಲ್ಲಿ ಬಾಲ್ಯದ ಆ ವ್ಯಾಖ್ಯಾನವೇ ಬದಲಾಗಿಹೋಗಿದೆ. ಇಂದಿನ ಮಕ್ಕಳು ಪ್ರಕೃತಿಯ ಮಡಿಲಲ್ಲಿ ಆಡುವುದನ್ನು ಬಿಟ್ಟು, ಮೊಬೈಲ್, ಕಂಪ್ಯೂಟರ್ ಮತ್ತು ವಿಡಿಯೋ ಗೇಮ್‌ಗಳೆಂಬ ಕೃತಕ ಜಗತ್ತಿನಲ್ಲಿ (ವರ್ಚುವಲ್ ವರ್ಲ್ಡ್) ಸಿಲುಕಿಕೊಂಡಿದ್ದಾರೆ. ತಂತ್ರಜ್ಞಾನದ ಅತಿಯಾದ ಆಕ್ರಮಣದಿಂದಾಗಿ ಇಂದಿನ ಬಾಲ್ಯವು ತನ್ನ ನೈಜ ಸೌಂದರ್ಯವನ್ನು ಕಳೆದುಕೊಳ್ಳುತ್ತಿದೆ.

**ಬದಲಾದ ದಿನಚರಿ, ಮಾಯವಾದ ಆಟಗಳು:** ಒಂದಾನೊಂದು ಕಾಲದಲ್ಲಿ ಸಂಜೆಯಾಗುತ್ತಲೇ ಮಕ್ಕಳು ಬೀದಿಗೆ ಬಂದು ಗೆಳೆಯರೊಂದಿಗೆ ಕಣ್ಣಾಮುಚ್ಚಾಲೆ, ಚಿನ್ನಿದಾಂಡು, ಲಗೋರಿಯಂತಹ ಸಾಂಪ್ರದಾಯಿಕ ಆಟಗಳನ್ನು ಆಡುತ್ತಿದ್ದರು. ಇದರಿಂದ ದೈಹಿಕ ಕಸರತ್ತಿನ ಜೊತೆಗೆ ಸಾಮಾಜಿಕ ಒಡನಾಟವೂ ಬೆಳೆಯುತ್ತಿತ್ತು. ಆದರೆ ಇಂದಿನ ಚಿತ್ರಣವೇ ಬೇರೆ. ಇಂದು ಮಕ್ಕಳಿಗೆ ಮುಂಜಾನೆ ಎದ್ದ ತಕ್ಷಣ ಮೊಬೈಲ್ ಬೇಕು. ಊಟ ಮಾಡುವಾಗ ಯೂಟ್ಯೂಬ್ ವಿಡಿಯೋಗಳು ಬೇಕು. ಸಾಂಪ್ರದಾಯಿಕ ಆಟಗಳ ಜಾಗವನ್ನು ಇಂದು ಪಬ್‌ಜಿ, ಫ್ರೀ ಫೈರ್‌ನಂತಹ ಹಿಂಸಾತ್ಮಕ ಆನ್‌ಲೈನ್ ಗೇಮ್‌ಗಳು ಹಾಗೂ ಸಾಮಾಜಿಕ ಜಾಲತಾಣಗಳ ರೀಲ್ಸ್-ಶಾರ್ಟ್ಸ್‌ಗಳು ಆಕ್ರಮಿಸಿಕೊಂಡಿವೆ.

**ಬೆಳವಣಿಗೆಯ ಮೇಲಾಗುತ್ತಿರುವ ಗಂಭೀರ ಪರಿಣಾಮಗಳು:** ಕೃತಕ ಜಗತ್ತಿನ ಈ ಅತಿಯಾದ ಹಸ್ತಕ್ಷೇಪದಿಂದಾಗಿ ಮಕ್ಕಳ ಒಟ್ಟಾರೆ ಬೆಳವಣಿಗೆಯ ಮೇಲೆ ಗಂಭೀರ ಪರಿಣಾಮಗಳು ಬೀರುತ್ತಿವೆ.

ದೈಹಿಕ ಆರೋಗ್ಯದ ಕುಸಿತ: ಒಂದೇ ಜಾಗದಲ್ಲಿ ಗಂಟೆಗಟ್ಟಲೆ ಕುಳಿತು ಮೊಬೈಲ್ ನೋಡುವುದರಿಂದ ಮಕ್ಕಳಲ್ಲಿ ಬೊಜ್ಜು, ಕಣ್ಣಿನ ದೋಷಗಳು ಮತ್ತು ಬೆನ್ನುನೋವಿನಂತಹ ಸಮಸ್ಯೆಗಳು ಚಿಕ್ಕ ವಯಸ್ಸಿನಲ್ಲೇ ಕಾಣಿಸಿಕೊಳ್ಳುತ್ತಿವೆ. ದೈಹಿಕ ಶ್ರಮವಿಲ್ಲದೆ ರೋಗನಿರೋಧಕ ಶಕ್ತಿಯೂ ಕುಂಠಿತಗೊಳ್ಳುತ್ತಿದೆ.

ಮಾನಸಿಕ ಸ್ವಭಾವದಲ್ಲಿ ಬದಲಾವಣೆ: ಸೌಮ್ಯ ಸ್ವಭಾವದ ಮಕ್ಕಳೂ ಸಹ ಹಿಂಸಾತ್ಮಕ ಗೇಮ್‌ಗಳನ್ನು ನೋಡಿ ಆಕ್ರಮಣಕಾರಿಯಾಗಿ ಹಾಗೂ ಹಠಮಾರಿಯಾಗಿ ಬದಲಾಗುತ್ತಿದ್ದಾರೆ. ಮಕ್ಕಳಲ್ಲಿ



ಏಕಾಗ್ರತೆಯ ಕೊರತೆ ಮತ್ತು ಖಿನ್ನತೆ ಹೆಚ್ಚಾಗುತ್ತಿದೆ.

ಸಾಮಾಜಿಕ ಒಂಟಿತನ: ನಾಲ್ಕು ಜನರೊಂದಿಗೆ ಹೇಗೆ ಬೆರೆಯಬೇಕು, ಹಿರಿಯರಿಗೆ ಹೇಗೆ ಗೌರವ ನೀಡಬೇಕು ಎಂಬ ಸಾಮಾಜಿಕ ಪ್ರಜ್ಞೆ ಮಕ್ಕಳಲ್ಲಿ ಕಡಿಮೆಯಾಗುತ್ತಿದೆ. ಸದಾ ವರ್ಚುವಲ್ ಲೋಕದಲ್ಲೇ ಇರುವುದರಿಂದ ಅವರು ನೈಜ ಸಂಬಂಧಗಳಿಂದ ದೂರವಾಗಿ ಒಂಟಿತನ ಅನುಭವಿಸುತ್ತಿದ್ದಾರೆ.

ಸೃಜನಶೀಲತೆಯ ನಾಶ: ಹಿಂದೆ ಮಕ್ಕಳು ತಾವೇ ಸ್ವತಃ ಮಣ್ಣಿನ ಆಟಿಕೆಗಳನ್ನು ಮಾಡುವುದು, ಚಿತ್ರ ಬಿಡಿಸುವುದು ಮಾಡುತ್ತಿದ್ದರು. ಈಗ ಎಲ್ಲವೂ ರೆಡಿಮೇಡ್ ಆಗಿ ಮೊಬೈಲ್ ಪರದೆಯ ಮೇಲೆ ಸಿಗುವುದರಿಂದ ಮಕ್ಕಳ ಸ್ವಂತ ಯೋಚನಾ ಶಕ್ತಿ ಮತ್ತು ಕ್ರಿಯಾಶೀಲತೆ ಮರೆಯಾಗುತ್ತಿದೆ.

ಪೋಷಕರ ಜವಾಬ್ದಾರಿ ಏನು : ಮಕ್ಕಳು ಕೃತಕ ಜಗತ್ತಿಗೆ ದಾಸರಾಗಲು ಕೇವಲ ಅವರಷ್ಟೇ ಕಾರಣರಲ್ಲ, ಪೋಷಕರ ಜವಾಬ್ದಾರಿಯೂ ಇಲ್ಲಿದೆ. ಪೋಷಕರು ತಮ್ಮ ಕೆಲಸದ ಒತ್ತಡದಿಂದಾಗಿ ಅಥವಾ ಮಕ್ಕಳ ಹಠವನ್ನು ತಣಿಸಲು ಕೈಗೆ ಮೊಬೈಲ್ ಕೊಟ್ಟುಬಿಡುತ್ತಾರೆ. ಈ ಪರಿಸ್ಥಿತಿ ಬದಲಾಗಬೇಕಾದರೆ ಪೋಷಕರು ಮೊದಲು ಮಕ್ಕಳ ಮುಂದೆ ಮೊಬೈಲ್ ಬಳಸುವುದನ್ನು ಕಡಿಮೆ ಮಾಡಬೇಕು. ಮಕ್ಕಳಿಗೆ ಪ್ರತಿದಿನ ಇಂತಿಷ್ಟೇ ಸಮಯ ಪರದೆ ವೀಕ್ಷಣೆ (ಸ್ಕ್ರೀನ್ ಟೈಮ್) ಎಂದು ನಿಯಮ ಮಾಡಬೇಕು. ಮಕ್ಕಳನ್ನು ಹೊರಗಿನ ಆಟೋಟಗಳಿಗೆ ಪ್ರೋತ್ಸಾಹಿಸಬೇಕು ಮತ್ತು ಅವರೊಂದಿಗೆ ಗುಣಮಟ್ಟದ ಸಮಯವನ್ನು ಕಳೆಯಬೇಕು.

ಜೊತೆಗೆ ಕಥೆ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಬೇಕು. ಕೊನೆಯದಾಗಿ ಒಂದು ಮಾತುಃ ತಂತ್ರಜ್ಞಾನ ಎನ್ನುವುದು ನಮಗೆ ನೆರವಾಗಬೇಕಾದ ಸಾಧನವೇ ಹೊರತು, ನಮ್ಮ ಬಾಲ್ಯವನ್ನು ನುಂಗಿ ನೀರು ಕುಡಿಯುವ ಭೂತವಾಗಬಾರದು. ವಿಜ್ಞಾನದ ಪ್ರಗತಿ ಅಗತ್ಯ, ಆದರೆ ಅದು ಪ್ರಕೃತಿ ಮತ್ತು ನೈಜ ಸಂಬಂಧಗಳ ಬೆಲೆಯ ಮೇಲಲ್ಲ. ಇಂದಿನ ಮಕ್ಕಳನ್ನು ಕೃತಕ ಜಗತ್ತಿನ ಮಾಯಾಜಾಲದಿಂದ ಮುಕ್ತಗೊಳಿಸಿ, ಅವರಿಗೆ ಹಸಿರು ಪ್ರಕೃತಿ, ಮುಕ್ತ ಆಕಾಶ ಮತ್ತು ನಿಜವಾದ ಗೆಳೆತನದ ಸವಿಯನ್ನು ಉಣಿಸಬೇಕಾಗಿದೆ. ಆಗ ಮಾತ್ರ ದೇಶದ ಭವಿಷ್ಯವಾಗಿರುವ ಇಂದಿನ ಬಾಲ್ಯವನ್ನು ನಾವು ರಕ್ಷಿಸಲು ಸಾಧ್ಯ.

# ಪಿತೃ-ಪಕ್ಷ ಯಾಕೆ ಆಚರಿಸಬೇಕು





| ಸೋಮೇಶ್ ಕಣದೂರ್
ಬೆಂಗಳೂರು

ಭಾದ್ರಪದ ಮಾಸದ ಕೃಷ್ಣ ಪಕ್ಷದ ಪಾಡ್ಯದಿಂದ ಅಂದರೆ (ಅನಂತ ಹುಣ್ಣಿಮೆ) ಇಂದ ಮಹಾಲಯ ಅಮಾವಾಸ್ಯೆಯವರೆಗೆ 15 ದಿವಸ ಹಿಂದೂ ಧರ್ಮದಲ್ಲಿ ನಮ್ಮನ್ನು ಅಗಲಿದ ಪೂರ್ವಜರಿಗೆ ಅಂದರೆ ಪಿತೃಗಳಿಗೆ ಶ್ರದ್ಧೆ ಹಾಗೂ ಕೃತಜ್ಞತೆ ಅರ್ಪಿಸುವ ಕಾಲ, ಪಿತೃ ಗಳೆಂದರೆ ಯಾರು ಎಂಬ ಕೆಲವು ಯುವ ಸಮಾಜಕ್ಕೆ ಸರಿಯಾದ ಅರಿವಿಲ್ಲ ಪಿತೃಗಳು ನಮ್ಮ ಈ ಮಾನವ ಜನುಮಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣೀಕರ್ತರಾದ ಪೂರ್ವಜರು, ನಮ್ಮ ಬದುಕಿನೊಂದಿಗೆ ಅವರ ಜೀವಂಶವನ್ನು ಹಂಚಿ ಹೋದಂತಹ ಪಿತೃಗಳಿಗೆ ನಾವೆಂದು ಧನ್ಯರಾಗಿರಬೇಕು, ಪಿತೃಗಳು ಮಾನಸಿಕ ಹಾಗೂ ದೈವಿಕವಾಗಿ ಸಂಬಂದಿಯಾಗಿ ವ್ಯಕ್ತಿ ಜೀವಿಸುವ ಕೊನೆಯ ಕ್ಷಣದ ವರೆಗೆ ಜೊತೆಗಿರುವರು, ಪಿತೃ ಗಳಿಗೆ ಶ್ರಾದ್ಧ ಜೊತೆಗೆ ತರ್ಪಣ ನೀಡಿ,

ನಮ್ಮ ಜೀವನ ಪದ್ಧತಿಯಲ್ಲಿ ಉಪಯೋಗಿಸುವ ಆಹಾರವನ್ನು ತಯಾರಿಸಿ ಭಕ್ತಿಪೂರ್ವಕವಾಗಿ ಅರ್ಪಿಸಿ

ಓಂ ಪಿತೃ ದೇವೋ ಭವ ನಮಃ

ಎಂಬ ಶ್ಲೋಕವನ್ನು 11 ಅಥವಾ 108 ಭಾರಿ ಪಠಿಸುತ್ತ ಅರ್ಪಿಸಿದರೆ ಮನುಷ್ಯನ ಮಾನಸಿಕ ಆರೋಗ್ಯದ ಜೊತೆಗೆ ಜೀವನದಲ್ಲಿ ಪಿತೃಗಳನ್ನು ಕಳೆದುಕೊಂಡು ನೊಂದಿರುವ ವ್ಯಕ್ತಿಗಳಿಗೆ ಕೊಂಚ ನೆಮ್ಮದಿ ಸಿಗುವ ಅತ್ಯುನ್ನತ ಮಾರ್ಗವಿದು,

ಪಿತೃಗಳಿಗೆ ಶ್ರಾದ್ಧ ಮಾಡುವಾಗ ಮೂರು ತಲೆಮಾರಿನ ಪೂರ್ವಜರನ್ನು ನೆನೆಯುತ್ತ ಮಾಡುವುದು ಸೂಕ್ತ ಆಡಂಬರ ಬೇಕಾಗಿಲ್ಲ ಇದ್ದಿದ್ದರಲ್ಲೇ ಮಾಡಿ ಅರ್ಪಿಸಿ ದೇವರ ಅನುಗ್ರಹದ ಜೊತೆಗೆ ಪಿತೃಗಳ ಆಶೀರ್ವಾದ ನಿಮ್ಮ ಮನಸ್ಸಿನಲ್ಲಿರುವ ಅದೆಷ್ಟೋ ಯೋಚನೆಗಳಿಗೆ ಧನಾತ್ಮಕ ರೂಪ ಕೊಟ್ಟು ನೆಮ್ಮದಿಯ ಜೀವನ ನಡೆಸಲು ಸಹಕಾರಿ,

ಪಿತೃ ಕಾರ್ಯ ಮಾಡಿ ಮುಗಿಸುವ ಮೊದಲು ನಮ್ಮ ನಿಮ್ಮೊಂದಿಗಿರುವ ಅದೆಷ್ಟೋ ಹಿರಿಯ ಜೀವಗಳಿಗೆ ಬದುಕಿರುವಾಗ ಸರಿಯಾಗಿ ಆರೈಕೆ ಮಾಡಿ ಅವರಿಗೆಂದು ಸ್ವಲ್ಪ ಸಮಯ ಕೊಟ್ಟು , ಗೌರವ ದಿಂದ ಮಾತಾಡಿಸಿ , ಅನುದಿನವು ಸಹಾಯ ಮಾಡಿ ಮನುಷ್ಯತ್ವ ಮರೆಯದಂತೆ ಜೀವಿಸಿ, ಜೊತೆಗಿರುವಾಗ ನೋಡದೆ

ಸತ್ತ ಮೇಲೆ ಯಾವುದೇ ಕಾರ್ಯ ಮಾಡಿದರು ನೆಮ್ಮದಿ ದೊರಕದು, ನಿಮ್ಮಿಂದ ಸಾಧ್ಯವಾದಷ್ಟು ಸೇವೆ ಮಾಡಿ ಅದು ನಿಮ್ಮ ಉನ್ನತಿಗೆ ನೆಮ್ಮದಿ ತುಂಬಿ ಮನಸಿಗೆ ಸ್ಫೂರ್ತಿಯಂತೆ ಜೊತೆಗಿರುವುದು..

**ಓಂ ಪಿತೃ ದೇವೋ ಭವ ನಮಃ**

# ಸಾವನ್ನು ಮೀರಿಸುವ ಮಾನವೀಯ ಮೌಲ್ಯಗಳು



ಮಾನವೀಯ ಮೌಲ್ಯಗಳು ಮರಣವನ್ನೂ ಮೀರಿಸುವ ಮಂತ್ರಶಕ್ತಿ. ಕರುಣೆ, ಪ್ರಾಮಾಣಿಕತೆ, ಸಹನೆಗಳು ಮೆದುಳಿನ ಇನ್ಸುಲಾ ಕಾರ್ಟೆಕ್ಸ್ ಅನ್ನು ಜಾಗೃತಗೊಳಿಸಿ ನೈಟ್ರಿಕ್ ಆಕ್ಸೈಡ್ ಉತ್ಪಾದನೆ ಹೆಚ್ಚಿಸುತ್ತವೆ. ಇದರಿಂದ ರಕ್ತಪರಿಚಲನೆ ಸುಗಮವಾಗಿ ಯಕೃತ್ತಿನ ಚೈತನ್ಯ ಉತ್ತಮಗೊಳ್ಳುತ್ತದೆ. ಜಪಾನಿನ ಅಧ್ಯಯನ ಹೇಳುವಂತೆ ಪರೋಪಕಾರದಲ್ಲಿ ತೊಡಗುವವರಲ್ಲಿ ಟೆಲೋಮಿಯರ್ ಸವೆತ ನಿಧಾನವಾಗಿ ವಯಸ್ಸಾಗುವಿಕೆಯು ಮಂದವಾಗುತ್ತದೆ.

ಮಾನವೀಯತೆಯು ಸಮಷ್ಟಿಯ ಸಂಜೀವಿನಿ. ಪ್ರವಾಹದಲ್ಲಿ ಕೊಚ್ಚಿದ ಸೇತುವೆ ದಾಟಲು ಮಕ್ಕಳನ್ನು ಬೆನ್ನ ಮೇಲೆ ಹೊರುವ ಕೂಲಿಕಾರನು ತ್ಯಾಗದ ದೀಪವಾಗುತ್ತಾನೆ. ಅನಾಥ ಮಗುವಿಗೆ ತನ್ನ ಹೆಸರು ನೀಡಿ ಶಾಲೆಗೆ ಸೇರಿಸುವ ಆಟೋ ಚಾಲಕನು ಬೀದಿಗೆ ಬಂಧುತ್ವದ ಬೀಜ ಬಿತ್ತುತ್ತಾನೆ. ಹಣವಿಲ್ಲದ ರೋಗಿಗೆ ಔಷಧಿ ಕೊಂಡುಕೊಡುವ ಮಾರಾಟಗಾರನು ಪೇಟೆಗೆ ದಯೆಯ ದಾರಿ ತೋರುತ್ತಾನೆ.

ಈ ಮೌಲ್ಯಗಳನ್ನು ಮೈಗೂಡಿಸಲು ದೊಡ್ಡ ತಪಸ್ಸು ಬೇಕಿಲ್ಲ. ಪ್ರಾತಃಕಾಲದಲ್ಲಿ ಯಾರನ್ನೂ ನೋಯಿಸಲಾರೆ ಎಂದು ಪಣತೊಡುವುದು, ಬೀದಿಯಲ್ಲಿ ಬಿದ್ದ ಕಸವನ್ನು ಎತ್ತಿ ಬುಟ್ಟಿಗೆ ಹಾಕುವುದು, ವಾರಕ್ಕೊಮ್ಮೆ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಹಿರಿಯರ ಕಥೆ ಆಲಿಸುವುದು, ಆದಾಯದ ಒಂದು ಪಾಲನ್ನು ನಿರ್ಗತಿಕರ ಶಿಕ್ಷಣಕ್ಕೆ ಮೀಸಲಿಡುವುದು ಮನಸ್ಸನ್ನು ಮಾಣಿಕ್ಯವಾಗಿಸುತ್ತದೆ.

ಮೌಲ್ಯದ ಮೆಟ್ಟಿಲು ಹತ್ತಿದವನಿಗೆ ಮೃತ್ಯುವಿನ ಮೆಟ್ಟಿಲು ಕಾಣುವುದಿಲ್ಲ. ಸದ್ಗುಣದ ಪರಿಮಳ ಸೂಸುವವರ ಹೆಸರು ಕಾಲದ ಕಲ್ಲಿನ ಮೇಲೆಯೂ ಅಳಿಯದೆ ಉಳಿಯುತ್ತದೆ. ಅದುವೇ ನಿಜವಾದ ಮೃತ್ಯುಂಜಯ ಮಂತ್ರ.

ಅಂಕಣ-38

**ಸಾವು ಸಂಕಟಪಡುವ ಸಂಗತಿಗಳು..!**



|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

# ಕ್ರೀಡಾಂಗಣದ ಜಾಗದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ವಿರೋಧ



**ಮಂಡ್ಯ:** ಜಿಲ್ಲಾ ಒಳಾಂಗಣ ಕ್ರೀಡಾ ಸಂಕೀರ್ಣದ ಆವರಣದಲ್ಲಿ ಕ್ರೀಡೆಗೆ ಮೀಸಲಾಗಿದ್ದ ಜಾಗದಲ್ಲಿ ಕನ್ನಡ ಭವನ ನಿರ್ಮಿಸಲು ಮುಂದಾಗಿರುವ ಜಿಲ್ಲಾಡಳಿತದ ಕ್ರಮದ ವಿರುದ್ಧ ಕ್ರೀಡಾಪಟುಗಳು ಮತ್ತು ಕ್ರೀಡಾ ಸಂಸ್ಥೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ.

ಈ ಸಂಬಂಧ ಜಿಲ್ಲಾ ಕ್ರೀಡಾ ಒಕ್ಕೂಟ ಹಾಗೂ ಮಂಡ್ಯ ಜಿಲ್ಲಾ ವಾಲಿಬಾಲ್ ಸಂಸ್ಥೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಕನ್ನಡ ಭವನವನ್ನು ಬೇರೆ ಸೂಕ್ತ ಜಾಗದಲ್ಲಿ ನಿರ್ಮಿಸಿ, ಕ್ರೀಡಾಂಗಣದ ಜಾಗವನ್ನು ಕ್ರೀಡೆಗಾಗಿಯೇ ಉಳಿಸಿಕೊಳ್ಳಬೇಕೆಂದು ಒತ್ತಾಯಿಸಿದೆ.

**40 ವರ್ಷಗಳ ಕ್ರೀಡಾ ಇತಿಹಾಸಕ್ಕೆ ಕುತ್ತು:** ಜಿಲ್ಲಾ ಒಳಾಂಗಣ ಕ್ರೀಡಾ ಸಂಕೀರ್ಣದ ಆವರಣದಲ್ಲಿ ಕಳೆದ 40 ವರ್ಷಗಳಿಂದ ವಾಲಿಬಾಲ್ ಸೇರಿದಂತೆ ವಿವಿಧ ಕ್ರೀಡಾ ಚಟುವಟಿಕೆಗಳು ನಡೆದುಕೊಂಡು ಬರುತ್ತಿವೆ. ಈ ಜಾಗದಲ್ಲಿ 2 ಸುಸಜ್ಜಿತ ವಾಲಿಬಾಲ್ ಅಂಕಣಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿತ್ತು. 2020ರ ಜುಲೈ 25ರಂದು ಅಂದಿನ ಶಾಸಕ ಎಂ.ಶ್ರೀನಿವಾಸ್ ಅವರು ಗುದ್ದಲಿ ಪೂಜೆ ನೆರವೇರಿಸಿದ್ದರು. ಆದರೆ ಕಾಮಗಾರಿ ಕಾರ್ಯರೂಪಕ್ಕೆ ಬರಲೇ ಇಲ್ಲ. ಬಿಡುಗಡೆಯಾದ ಹಣ ಏನಾಯಿತು ಎಂಬುದು ನಿಗೂಢವಾಗಿದೆ ಎಂದು ಕ್ರೀಡಾ ಒಕ್ಕೂಟ ಆರೋಪಿಸಿದೆ.

**64 ಲಕ್ಷ ಯೋಜನೆ, 28 ಲಕ್ಷ ಬಿಡುಗಡೆ – ಕಾಮಗಾರಿ ಮಾತ್ರ ಶೂನ್ಯ:** 2022ರ ಡಿಸೆಂಬರ್ 15ರಂದು ನಡೆದ ಜಿಲ್ಲಾ ಕ್ರೀಡಾಂಗಣ ಸಮಿತಿ ಸಭೆಯಲ್ಲಿ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ 2 ಸುಸಜ್ಜಿತ ವಾಲಿಬಾಲ್ ಅಂಕಣಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿತ್ತು. ಅದರಂತೆ ನಿರ್ಮಿತಿ ಕೇಂದ್ರದಿಂದ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಒಟ್ಟು 64 ಲಕ್ಷ ರೂ.ಗಳ ಯೋಜನೆಯಲ್ಲಿ ಮುಂಗಡವಾಗಿ 28 ಲಕ್ಷ ರೂ.ಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಬಿಡುಗಡೆಯಾಗಿದ್ದರೂ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ ಎಂದು ದೂರಿದ್ದಾರೆ.

ಪ್ರಸ್ತುತ ಜಿಲ್ಲಾಧಿಕಾರಿಯಾಗಿರುವ ಡಾ. ಕುಮಾರ ಅವರೇ 2022ರ ಸಭೆಯಲ್ಲಿ ಹಾಜರಿದ್ದು ಸಭಾ ನಡವಳಿಗೆ ಸಹಿ ಮಾಡಿದ್ದರು. ಈಗ ಅದೇ ಜಾಗದಲ್ಲಿ ಕನ್ನಡ ಭವನ ಕಟ್ಟಲು ಅನುಮತಿ ನೀಡಿರುವುದು ಇಬ್ಬಗೆಯ ನೀತಿ ಅಲ್ಲವೇ ಎಂದು ಕ್ರೀಡಾ ಒಕ್ಕೂಟ ಪ್ರಶ್ನಿಸಿದೆ.

**ಸುತ್ತಮುತ್ತಲೇ 7 ಭವನಗಳಿವೆ,ಈ ಮೈದಾನವೂ ಬೇಕಾ:** ಈಗಾಗಲೇ ಈ ಜಾಗದ ಸುತ್ತಮುತ್ತ 50 ರಿಂದ 400 ಮೀಟರ್ ಅಂತರದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಕಲಾಭವನ, ಗಾಂಧಿ ಭವನ, ಕರ್ನಾಟಕ ಭವನ, ಶಿಕ್ಷಕರ ಭವನ, ಡಾ. ಬಿ.ಆರ್.ಅಂಬೇಡ್ಕರ್ ಭವನ, ಬಾಲಭವನ ಮತ್ತು ರೈತ ಭವನ ಸೇರಿದಂತೆ 7 ಭವನಗಳಿವೆ. ಇಷ್ಟಿದ್ದರೂ ಕ್ರೀಡಾ ಮೈದಾನವನ್ನು ಕಸಿದುಕೊಂಡು ಭವನ ಕಟ್ಟುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಕ್ರೀಡಾಪಟುಗಳ ಹಕ್ಕೊತ್ತಾಯ:** "ಕ್ರೀಡಾಂಗಣವು ಸಾರ್ವಜನಿಕರ ಮತ್ತು ಕ್ರೀಡಾಪಟುಗಳ ಆಸ್ತಿಯಾಗಿದೆ, ಮೈದಾನವನ್ನು ಕಸಿದುಕೊಳ್ಳುವುದು ಯುವಕರ ಪ್ರತಿಭೆಯನ್ನು ಹತ್ತಿಕ್ಕಿದಂತೆ. ಕ್ರೀಡಾಂಗಣವನ್ನು ಅತಿಕ್ರಮಣ ಮುಕ್ತಗೊಳಿಸಿ ಕ್ರೀಡೆಗೆ ಮೀಸಲಿಡಬೇಕು. ಇದು ಕೇವಲ ವಿನಂತಿಯಲ್ಲ, ಕ್ರೀಡಾ ಪ್ರೇಮಿಗಳ ಹಕ್ಕೊತ್ತಾಯ" ಎಂದು ಒಕ್ಕೂಟ ಹೇಳಿದೆ.ಕ್ರೀಡಾ ಇಲಾಖೆ ಈ ವಿಚಾರದಲ್ಲಿ ಕಣ್ಣುಮುಚ್ಚಿ ಮೌನ ತಾಳಿರುವುದು ವಿಪರ್ಯಾಸ. ಆದ್ದರಿಂದ ಕ್ರೀಡೆಗೆ ಮೀಸಲಾಗಿದ್ದ ಜಾಗದಲ್ಲಿ ಕನ್ನಡ ಭವನ ನಿರ್ಮಿಸುವ ಬದಲು ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಎಲ್ಲ ಸೌಲಭ್ಯಗಳಿರುವ ಬೇರೆ ಸೂಕ್ತ ಹಾಗೂ ದೊಡ್ಡ ಜಾಗದಲ್ಲಿ ನಿರ್ಮಿಸಬೇಕು. ಈ ಸ್ಥಳವನ್ನು ಕ್ರೀಡಾಪಟುಗಳಿಗೆ ಮಾತ್ರ ಮೀಸಲಿಟ್ಟು "ಕ್ರೀಡೆ ಬೆಳೆಸಿ, ಕ್ರೀಡೆ ಉಳಿಸಿ" ಎಂಬಂತೆ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಬೇಕು ಎಂದು ವಿವಿಧ ಕ್ರೀಡಾ ಸಂಘಗಳು, ಕ್ರೀಡಾಪಟುಗಳು ಮನವಿ ಮಾಡಿದ್ದಾರೆ.

# ಅತ್ತು ಬಿಡು ಮನಸ್ಸೇ ಹಗುರಾಗುವೆ!

**ಮನಸ್ಸಿನ ವೇದನೆ ....**
**ಅತ್ತು ಬಿಡು ಮನಸ್ಸೇ.....**
**ಮನಸಾರೆ ಅತ್ತುಬಿಡು.....**
**ಕಣ್ಣೀರು ಆಗಿರುವ ನೋವನ್ನ ಹೊರಗೆ ಬಿಡು......**



| ಡಾ. ಪ್ರಸನ್ನ ನಾಡಿಗರ್

ಮುದ್ದು ಮನಸ್ಸೇ....ಎಷ್ಟು ದಿನ ಹೀಗೆ ಭಾರ ಹೊತ್ತುಕೊಂಡು ತಿರುಗುವೆ... ಎಲ್ಲರ ಮುಂದೆ ಗಟ್ಟಿಯಾಗಿರುವಂತೆ ನಟಿಸಿ ಒಳಗೊಳಗೆ ಕುಸಿದು ಹೋಗುತ್ತಿರುವೆ. ಇಂದು ಅತ್ತುಬಿಡು ಮನಸ್ಸೇ... ನಿಧಾನವಾಗಿ ನಿನ್ನನ್ನ ನೀನೆ ಅಪ್ಪಿಕೊಳ್ಳುವವರೆಗೂ.. ನಾಳಿನಾ ಬೆಳಕು ನಿನಗಾಗಿ ಹೊಸ ಕನಸನ್ನ ಹೊತ್ತು ತರುತ್ತದೆ. ಬಾರ ಇಳಿದ ಹೃದಯದಿಂದ ಮತ್ತೆ ಎದ್ದು ನಿಲ್ಲುವ ಶಕ್ತಿ ನಿನ್ನಲ್ಲಿದೆ. ಅತ್ತು ಬಿಡು ಮನಸ್ಸೇ.. ಮನಸಾರೆ ಅತ್ತುಬಿಡು ..... ಹಗುರಾಗುವೆ....

ಸ್ನೇಹಿತರೆ.... ಪ್ರತಿಯೊಬ್ಬರಲ್ಲಿ ಒಂದು ಮನಸ್ಸಿದೆ. ಆ ಪುಟ್ಟ ಮನಸ್ಸಿನಲ್ಲಿ ಇರುವುದು ಒಂದೇ.... ಅದು ನೋವು. ಅದು ಹೇಳಿಕೊಳ್ಳಲಾಗದ ನೋವು, ದುಃಖ,ಹತಾಶೆ, ಬೇಜಾರ...

ಕೆಲವೊಮ್ಮೆ ಮನಸ್ಸಿಗೆ ಏನೂ ಬೇಕಾಗುವುದಿಲ್ಲ.

ಯಾರೊಂದಿಗೂ ಮಾತನಾಡಬೇಕು ಅನ್ನಿಸುವುದಿಲ್ಲ. ಯಾರಿಗೂ ನಮ್ಮ ನೋವನ್ನು ಹೇಳಿಕೊಳ್ಳಬೇಕು ಅನ್ನಿಸುವುದಿಲ್ಲ. ಸುಮ್ಮನೆ ಒಂದು ಮೂಲೆಯಲ್ಲಿ ಕುಳಿತು, ಯಾರಿಗೂ ಕಾಣದಂತೆ ಅತ್ತುಬಿಡಬೇಕು ಅನ್ನಿಸುತ್ತದೆ.

ಆದರೆ ನಾವು ಅಳುವುದಿಲ್ಲ.

ನಾನು ಗಟ್ಟಿಯಾಗಿರಬೇಕು

ನನ್ನ ನೋವನ್ನು ಯಾರಿಗೂ ತೋರಿಸಬಾರದು

ಎಲ್ಲವನ್ನೂ ನಾನೇ ನಿಭಾಯಿಸಬೇಕು ಎಂದು ನಮ್ಮನ್ನೇ ನಾವು ಸಮಾಧಾನಪಡಿಸಿಕೊಳ್ಳುತವೆ . ಹೀಗೆ ಸಮಾಧಾನ ಮಾಡಿಕೊಳ್ಳುತ್ತಾ ಜೀವನ ಸಾಗಿಸುತ್ತೇವೆ...

ಆದರೂ ಒಂದು ದಿನ ಎಲ್ಲರೂ ಮಲಗಿದ ಮೇಲೆ ನಮ್ಮ ಜೊತೆ ನಮ್ಮ ಮನಸ್ಸು ಮಾತ್ರ ಉಳಿಯುತ್ತದೆ. ಆಗ ಹಗಲು ಮರೆ ಮಾಡಿದ ನೋವುಗಳು ಒಂದೊಂದಾಗಿ ನೆನಪಾಗುತ್ತವೆ. ಯಾರೋ ಆಡಿದ ಒಂದು ಮಾತು. ನಮ್ಮನ್ನು ಬಿಟ್ಟು ಹೋದ ಒಬ್ಬ ವ್ಯಕ್ತಿ.. ಈಡೇರದ ಒಂದು ಕನಸು..ನಾವು ಬಯಸಿದರು ಬದಲಾಗದ ಒಂದು ಸಂಬಂಧ.. ಎಷ್ಟೇ ಪ್ರಯತ್ನಿಸಿದರು ಬದಲಾಗದ ಒಂದು ಪರಿಸ್ಥಿತಿ...ಎಲ್ಲವೂ ಒಟ್ಟಿಗೆ ಬಂದು ಎದೆ ಮೇಲೆ ಬಂದು ಕುಳಿತುಕೊಳ್ಳುತ್ತವೆ. ಆಗ ಅಳು ಬಂದರು ನಾವು ಅಳುವುದಕ್ಕೆ ಹಿಂಜರಿಯುತ್ತೇವೆ. ಆದರೆ ಇದರ ನೋವನ್ನು ನಮ್ಮ ಮನಸ್ಸು ಮಾತ್ರ ಅನುಭವಿಸುತ್ತಲೇ ಇರುತ್ತದೆ. ಆದರೆ ನಾವು ಮನಸ್ಸಿಗೆ ನೆಮ್ಮದಿ ಸಮಾಧಾನವನ್ನು ನೀಡುವುದೇ ಇಲ್ಲ. ಬದಲಿಗೆ ಮನಸ್ಸಿಗೆ ಹೆಚ್ಚು ಒತ್ತಡವನ್ನ ಹಾಕುತ್ತಲೇ ಇರುತ್ತೇವೆ.ಎಲ್ಲಾ ಒತ್ತಡ ಜಾಸ್ತಿಯಾದಾಗ ನಾವು ಅಸಹಾಯಕ ಸ್ಥಿತಿಯಲ್ಲಿ ಬಂದಾಗ ನಮಗೆ ಅನಿಸುವುದು ಒಂದೇ.... ಅದು ಅತ್ತು ಬಿಡು ಮನಸ್ಸೇ... ಅತ್ತುಬಿಡು. ಮನಸಾರೆ ಅತ್ತು ಬಿಡು ಎಂದು.

ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರಿಗೂ ಅವರದೇ ಆದ ನೋವು ದುಃಖ ಇದ್ದೇ ಇರುತ್ತದೆ. ಅತಿಯಾದ ಬೇಸರ, ನೋವುಗಳಾದಾಗ ನಮ್ಮಲ್ಲಿ ನಾವು ದುಃಖವನ್ನು ಅನುಭವಿಸುತ್ತಿರುತ್ತೇವೆ.

ಕೆಲವೊಮ್ಮೆ ಯಾರಿಗೂ ಹೇಳಲಾಗದಷ್ಟು ನೋವಿರುತ್ತದೆ. ಕಣ್ಣ ಮುಂದೆ ಎಲ್ಲವೂ ಇದ್ದರೂ ಮನಸ್ಸಿನೊಳಗೆ ಮಾತ್ರ ಏನೂ ಕಳೆದುಕೊಂಡ ಭಾವನೆ. ಸುತ್ತಲೂ ಎಲ್ಲಾರಿದ್ದರು ನಮ್ಮ ನೋವನ್ನು ಅರ್ಥ ಮಾಡಿಕೊಳ್ಳುವವರು ಯಾರು ಇಲ್ಲ ಅಂತ ಅನಿಸಿದಾಗ ಒಬ್ಬಂಟಿಯಾಗಿ ಮನಸಾರೆ ಅಳಬೇಕು ಅನಿಸುತ್ತದೆ.

ಸ್ನೇಹಿತರೆ...ಅಳು ದೌರ್ಬಲ್ಯವಲ್ಲ.. ಅದು ಆತ್ಮದ ಶುದ್ಧೀಕರಣ. ಮಳೆ ಬಂದು ಹೋದ ಮೇಲೆ ಭೂಮಿ ಹೇಗೆ ತಂಪಾಗುತ್ತದೆಯೋ ಹಾಗೆ ಕಣ್ಣೀರು ಹರಿದ ಮೇಲೆ ಮನಸ್ಸು ಹಗುರವಾಗುತ್ತದೆ. ಆದರೆ ಮನಸ್ಸಿನ ನೋವುನ್ನ ಹಿಡಿದಿಟ್ಟುಕೊಂಡಷ್ಟು ನಮಗೆ ವಿಷವಾಗುತ್ತದೆ. ಹರಿಬಿಟ್ಟ ಕಣ್ಣೀರು ಔಷಧಿಯಾಗುತ್ತದೆ. ಕೆಲವೊಮ್ಮೆ ನಗು ನಮ್ಮ ನೋವನ್ನು ಮರೆ ಮಾಡುತ್ತದೆ. ಆದರೆ ಕಣ್ಣೀರು ಅದನ್ನು ತೊಳೆದು ಬಿಡುತ್ತದೆ.. ಆದ್ದರಿಂದ ಅತಿಯಾದ ನೋವು ದುಃಖವಾದಾಗ ಅಳುವುದು ಒಂದು ದಿವ್ಯ ಔಷಧಿ ಇದ್ದಂತೆ.

ಹಾಗಾದರೆ...ನಾವು ಈ ಅಳು ಅನ್ನೋ ಔಷಧಿಯನ್ನು ಯಾವಾಗ ಬಳಸಬಹುದು ಎಂದಾದರೆ....

ನಿನ್ನನ್ನ ನೋಯಿಸಿದವರಿಗಾಗಿ ಅಳು. ನಿನ್ನಿಂದ ದೂರವಾದವರಿಗಾಗಿ ಅಳು. ನೀನು ಕಳೆದುಕೊಂಡ ಸಂತೋಷಕ್ಕಾಗಿ ಅಳು. ನಿನ್ನ ಮನಸ್ಸು ಯಾರಾದರೂ ಮುರಿದಾಗ ಆಗ ಅಳು. ಎಲ್ಲರಿಗಾಗಿ ಬದುಕುತ್ತಾ ನಿನ್ನನ್ನೇ ಮರೆತಿದ್ದಕ್ಕಾಗಿ ಅಳು. ಎಲ್ಲಾ ನೋವನ್ನ ಸಹಿಸಿದ್ದಕ್ಕಾಗಿ ಅಳು. ನಿನ್ನತನವನ್ನು ಕಳೆದುಕೊಂಡಿದ್ದಕ್ಕಾಗಿ ಅಳು... ಇಷ್ಟೆಲ್ಲ ನೋವುಗಳಿಗೆ ದುಃಖಗಳಿಗೆ ಅತ್ತಾಗ ಮನಸ್ಸಿಗೂ ಮತ್ತು ನಮ್ಮ ಜೀವಕ್ಕೂ ನೆಮ್ಮದಿ, ಸಿಗುತ್ತದೆ ಮತ್ತು ಶಾಂತಿ ನೆಲೆಸುತ್ತದೆ. ಆಗ ಹೊಸದೊಂದು ಬೆಳಕು ಉದ್ಭವಿಸುತ್ತದೆ. ಅದೇನು ಗೊತ್ತಿಲ್ಲ ಮನಸ್ಸು ಹಗುರಾದಾಗ ನಮ್ಮ ಜೀವ ಮತ್ತು ಜೀವನಕ್ಕೆ ಏನೋ ಒಂದು ಹೊಸ ಹುರುಪು, ಶಕ್ತಿ ದೊರೆಯುತ್ತದೆ . ಮನಸಾರ ಅಳುವುದರಿಂದ ಏನೋ ಒಂದು ಹೊಸ ಚೈತನ್ಯ ಮೂಡುತ್ತದೆ... ಹೌದು ಅಲ್ಲವೇ....

ಇಂದು ಪ್ರಪಂಚದಲ್ಲಿ ನೋವು, ದುಃಖ ಇಲ್ಲದ ಮನುಷ್ಯನೇ ಇಲ್ಲ...

ನಮ್ಮ ನೋವು ನಲಿವಿನ ಮನಸ್ಸಿನ ಒದ್ದಾಟದಲ್ಲಿ

ದಿನಗಳು ಕಳೆಯುತ್ತವೆ.

ನಗು ಮುಖದಲ್ಲಿರುತ್ತದೆ ಆದರೆ ಮನಸ್ಸಿನೊಳಗೆ ಸಾವಿರ ನೋವುಗಳು




ಮೌನವಾಗಿ ಅಳುತ್ತಿರುತ್ತವೆ.

ಕೆಲವೊಮ್ಮೆ ನಮ್ಮ ಕಣ್ಣೀರೇ ನಮ್ಮ ಮನಸ್ಸಿನ ಮಾತು ಆಗುತ್ತದೆ . ನಮಗೆ ಹೇಳಲಾಗದ ನೋವನ್ನು ನಮ್ಮ ಕಣ್ಣೀರು ಹೇಳುತ್ತದೆ.

ಮರೆಮಾಚಿದ ನಮ್ಮ ನೋವನ್ನು ಕಣ್ಣೀರು ಹೊರಹಾಕುತ್ತದೆ.

ಎಷ್ಟೋ ದಿನಗಳಿಂದ ಎದೆಯೊಳಗೆ ಬಚ್ಚಿಟ್ಟಿದ್ದ ಭಾರವನ್ನು ಒಂದಷ್ಟು ಕಣ್ಣೀರು ತೊಳೆದುಹಾಕುತ್ತದೆ.

ಆದ್ದರಿಂದ ಮನಸಾರೆ ಅಳುವುದು ಜೀವನಕ್ಕೂ ಮತ್ತು ಆರೋಗ್ಯಕ್ಕೂ ತುಂಬಾ ಉತ್ತಮ ಅದಕ್ಕೆ ಹೇಳುವುದು

ಅತ್ತು ಬಿಡು ಮನಸ್ಸೇ ಮನಸಾರೆ ಅತ್ತೂಬಿಡು..... ಎಂದು

ನಾವು ಮನಸ್ಸನ್ನ ಹೇಗೆ ಸಂತೋಷ, ಖುಷಿಯಾಗಿ ಇಡಬಹುದು.. ಅದಕ್ಕಾಗಿ ನಾವು ಏನೂ ಮಾಡಬಹುದು ಎಂದು ನೋಡುವುದಾದರೆ , ಈ ಕೆಳಗಿನ ವಿಷಯಗಳು ನಮಗೆ ಸಹಾಯ ಮಾಡಬಹುದು..

1.ಭಾವನೆಗಳನ್ನು ಹೊರಹಾಕಿ
ಅಳುವುದು ತಪ್ಪಲ್ಲ. ಮನಸ್ಸಿನಲ್ಲಿ ನೋವನ್ನು ಅದುಮಿಟ್ಟುಕೊಳ್ಳುವ ಬದಲು ಅತ್ತುಬಿಡುವುದು ಒಳ್ಳೆಯದು. ನಾವು ಅತ್ತಷ್ಟು ನಮ್ಮ ಮನಸ್ಸಿನಲ್ಲಿರುವ ನೋವು ಅವರ ಹೋಗುತ್ತದೆ ಆ ಕಣ್ಣೀರ ಮುಖಾಂತರ ನಮ್ಮ ನೋವೆಲ್ಲಾ ಹರಿದು ಹೋಗಿ ಮನಸ್ಸಲ್ಲಿ ಹೊಸ ಬೆಳಕು ಮೂಡುತ್ತದೆ.

2. ದೀರ್ಘವಾಗಿ ಉಸಿರಾಡಿ
ಕಣ್ಣೀರು ಉಳಿಸಿಕೊಂಡು ನಂತರ ನೆಮ್ಮದಿಯಿಂದ ದೀರ್ಘವಾಗಿ ಉಸಿರಾಡು . ಆಗ ಮನಸ್ಸು ಹಗುರವಾದಂತೆ ಆಗುತ್ತದೆ. ಹೀಗೆ ಹತ್ತು ನಿಮಿಷಗಳ ಕಾಲ ದೀರ್ಘವಾಗಿ ಉಸಿರಾಟದಿಂದ ಮೈ ಮನಸ್ಸು ಹಗುರವಾಗಿ ತಲೆಯ ಭಾರ ಕಡಿಮೆಯಾಗುತ್ತದೆ.

3 .ನೀರನ್ನು ಕುಡಿಯಿರಿ
ಒಂದು ಲೋಟ ಕಣ್ಣೀರು ಕುಡಿಯುವುದರಿಂದ ದೇಹ ಮತ್ತು ಮನಸು ಶಾಂತವಾಗುತ್ತದೆ. ನೀರನ್ನು ಕುಡಿಯುವಾಗ ಅದನ್ನು ಆನಂದಿಸಿ ನಿಧಾನವಾಗಿ ಕುಡಿಯಿರಿ ಎಷ್ಟು ಮನಸ್ಸಿಗೆ ತೃಪ್ತಿ ಸಿಗುತ್ತದೆ.

4. ಆಪ್ತರೊಂದಿಗೆ ಹಂಚಿಕೊಳ್ಳಿ
ನಿಮ್ಮ ನೋವನ್ನು ಅರ್ಥಮಾಡಿಕೊಳ್ಳುವ ಸ್ನೇಹಿತರು ಅಥವಾ ಕುಟುಂಬದವರೊಂದಿಗೆ ಮುಕ್ತವಾಗಿ ಮಾತನಾಡಿ. ನಿಮ್ಮ ಮನಸ್ಸಿಗೆ ಯಾರು ಸರಿ ಅನಿಸುತ್ತಾರೋ ಅವರೊಂದಿಗೆ ಮನಸ್ಸು ಬಿಚ್ಚಿ ಮಾತನಾಡಿ ಆಗ ಮನಸ್ಸಿಗೆ ಸಮಾಧಾನ ಸಿಗುತ್ತೆ.

5. ಸಂಗೀತ ಆಲಿಸಿ
ಮನಸ್ಸನ್ನು ಶಾಂತಗೊಳಿಸುವ ಮೆಲೋಡಿ ಹಾಡುಗಳು ಅಥವಾ ವಾದ್ಯಸಂಗೀತವನ್ನು ಕೇಳಿ. ಇನ್ನು ನಿಮಗೆ ಇಷ್ಟವಾದ ಹಾಡು, ಭಾವಗೀತೆ, ಸಂಗೀತವನ್ನು ಆಲಿಸಿ.

6. ವಿರಾಮ ತಗೊಳ್ಳಿ
ನಿಮಗಿಷ್ಟವಾದ ಹವ್ಯಾಸಗಳಲ್ಲಿ ತೊಡಗಿಕೊಳ್ಳಿ ಅಥವಾ ಸ್ವಲ್ಪ ಸಮಯ ಪ್ರಕೃತಿಯ ಮಡಲಿನಲ್ಲಿ ಕಳೆಯಿರಿ. ಸುಂದರ ಪರಿಸರದಲ್ಲಿ ವಿಹರಿಸಿ ಮನಸ್ಸಿಗೆ ನೆಮ್ಮದಿ ಸಿಗುತ್ತದೆ.
ಯಾವದೇ ಪರಿಸ್ಥಿತಿ ಇರಲಿ, ಯಾವುದು ಶಾಶ್ವತವಲ್ಲ. ನಿಮ್ಮ ಮನಸ್ಸನ್ನು ಜಾಗರೂಕತೆಯಿಂದ ನೋಡಿಕೊಳ್ಳಿ, ಎಲ್ಲವೂ ಸರಿಯಾಗುತ್ತದೆ. ನಿಮಗೆ ತಡೆಯಲಾಗದ ನೋವು ಇದ್ದರೆ ಅತ್ತು ಬಿಡಿ ಆಗ ಮನಸ್ಸು ಹಗುರಗುತ್ತದೆ.

ಮನಸ್ಸೇ, ನಿನಗೆ ಯಾವಾಗಲಾದರೂ ನೋವು ಆದಾಗ ಕಣ್ಣೀರನ್ನು ಹೊರಹಾಕು ಯಾಕೆಂದರೆ ಕೆಲವೊಮ್ಮೆ

ನಮ್ಮನ್ನು ಸಮಾಧಾನಪಡಿಸಲು ಜಗತ್ತಿನಲ್ಲಿ ಯಾರೂ ಇರದಿದ್ದರೂ, ನಮ್ಮ ಕಣ್ಣೀರು ಇರುತ್ತದೆ. ಈ ಕಣ್ಣೀರು ನಮ್ಮ ಮನಸ್ಸಿಗೆ ಹೇಳುವ ಒಂದು ಮಾತಿದೆ ಇಷ್ಟು ದಿನ ಹೊತ್ತುಕೊಂಡಿದ್ದೀಯಲ್ಲ ಈಗ ಸ್ವಲ್ಪ ಹಗುರಾಗು. ...ಎಂದು.

ಎಂತಹ ಅದ್ಭುತವಾದ ಸಂಬಂಧ ಮನಸ್ಸಿಗೂ ಮತ್ತು ಕಣ್ಣೀರಿಗೂ......ಅಲ್ಲವೇ.......

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,